

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 6 ಮಂಗಳವಾರ 2024

ಸಂಪುಟ: 44 | ಸಂಚಿಕೆ: 289 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಜಮ್ಮಾಬಾಣೆ ಸಮಸ್ಯೆ ಶೀಘ್ರ ಇತ್ಯರ್ಥ



ಕೃಷ್ಣ ಭೈರೇಗೌಡ

ಮಡಿಕೇರಿ, ಫೆ.5–ಕೊಡಗಿನ ಜಮ್ಮಾಬಾಣೆ ಭೂಮಿಗೆ ಸಂಬಂಧಿಸಿದ ಸಮಸ್ಯೆಯನ್ನು ತ್ವರಿತ ಗತಿಯಲ್ಲಿ ಇತ್ಯರ್ಥಪಡಿಸಲು ಆಂದೋಲನದ ಮಾದರಿ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಭರವಸೆ ನೀಡಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗಿನಲ್ಲಿ ಜಮ್ಮಾಬಾಣೆ ಭೂಮಿ ಸಮಸ್ಯೆಯಿಂದಾಗಿ ಹಲವಾರು ವರ್ಷಗಳಿಂದ ರೈತರು ಹಾಗೂ ಕಾಫಿ ಬೆಳೆಗಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಹೀಗಾಗಿ ಈ ಜ್ವಲಂತ ಸಮಸ್ಯೆಯನ್ನು ಕೂಡಲೇ ಇತ್ಯರ್ಥಗೊಳಿಸಬೇಕು ಎಂದು ಕೊಡಗಿನ ಶಾಸಕರಾದ ಎ.ಎಸ್.ಪೊನ್ನಣ್ಣ ಮತ್ತು ಡಾ.ಮಂತರ್‌ಗೌಡ ಮನವಿ ಮಾಡಿದ್ದರು. ಜೊತೆಗೆ ಕೊಡಗು ಜಿಲ್ಲಾಧಿಕಾರಿಗಳೂ ಕೂಡ ನ್ಯಾಯಯುತವಾಗಿ ಈ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು ಎಂದರು.

ಜಮ್ಮಾಬಾಣೆ ಭೂಮಿ ಇರುವ ಗ್ರಾಮಗಳಿಗೆ ತಹಸೀಲ್ದಾರರು, ಸರ್ವೇ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಗ್ರಾಮ ಸಭೆ ನಡೆಸಿ, ತಕರಾರಿಲ್ಲದ ಕಡೆ ಜಮ್ಮಾಬಾಣೆ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವವರ ಹೆಸರಿಗೆ ಪ್ರತ್ಯೇಕವಾದ ಹಿಸ್ಸಾ ಪಹಣಿ ನೀಡಬೇಕು. ತಕರಾರು ಇರುವ ಕಡೆ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಿ ●9ನೇ ಪುಟಕ್ಕೆ







ಬಿಜೆಪಿ 370, ಎನ್‌ಡಿಎ 405 ಸೀಟು

ಗೆದ್ದೇ ಗೆಲ್ತೇವೆ...

- ಸಂಸತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಪೂರ್ಣ ವಿಶ್ವಾಸ
- ಮೂರನೇ ಬಾರಿ ಅಧಿಕಾರ ಹಿಡಿಯುವುದು ಖಚಿತ
- ದೇಶದಲ್ಲಿ ವಿಪಕ್ಷಗಳ ಇಂದಿನ ದುಸ್ಥಿತಿಗೆ ಕಾಂಗ್ರೆಸ್ಸೇ ಕಾರಣ
- ದೇಶದ ಆರ್ಥಿಕ ಪ್ರಗತಿ ನೆನೆಗುದಿಗೆ ಅದೇ ಹೊಣೆ; ವಾಗ್ದಾಳಿ
- 3ನೇ ಅವಧಿಯಲ್ಲಿ ಭಾರತ ಅತೀ ದೊಡ್ಡ ಆರ್ಥಿಕ ಶಕ್ತಿ; ಇದು ಮೋದಿ ಗ್ಯಾರಂಟಿ



ಹೊಸದಿಲ್ಲಿ: ಸೋಮವಾರ ಸಂಸತ್‌ನಲ್ಲಿ ಸುದೀರ್ಘ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ 'ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 370 ಸೀಟುಗಳನ್ನು ಗೆಲ್ಲಲಿದ್ದು, ಎನ್‌ಡಿಎ 405 ಸೀಟು ಗೆದ್ದು ಮೂರನೇ ಬಾರಿ ಸರಕಾರ ರಚಿಸುತ್ತೇವೆ' ಎಂದು ವಿಶ್ವಾಸದ ನುಡಿಗಳನ್ನಾಡಿದ್ದಾರೆ.

ರಾಷ್ಟ್ರಪತಿಗಳ ಭಾಷಣಕ್ಕೆ ಧನ್ಯವಾದ ಹೇಳಿದ ಮೋದಿ, ಭಾರತದ ಉಜ್ವಲ ಭವಿಷ್ಯದ ದೃಷ್ಟಿಯಿಂದ ಗೌರವಾನ್ವಿತ ರಾಷ್ಟ್ರಪತಿಗಳು ನಾಲ್ಕು ಬಲವಾದ ಸ್ತಂಭಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ದೇಶದ ನಾಲ್ಕು ಸ್ತಂಭಗಳು ಎಷ್ಟು ಬಲಿಷ್ಠವಾಗುತ್ತವೆ. ಅಭಿವೃದ್ಧಿ ಹೊಂದುತ್ತವೆ ಮತ್ತು ಏಳಿಗೆಯಾಗುತ್ತವೆ ಅಷ್ಟು ವೇಗವಾಗಿ ನಮ್ಮ ದೇಶವು ಅಭಿವೃದ್ಧಿ ಹೊಂದುತ್ತದೆ ಎಂಬುದು ಅವರ ಸರಿಯಾದ ಮೌಲ್ಯಮಾಪನ. ದೇಶದ ಮಹಿಳಾ ಶಕ್ತಿ, ಯುವ ಶಕ್ತಿ, ದೇಶದ ಬಡ ಸಹೋದರ–ಸಹೋದರಿಯರು ಮತ್ತು ರೈತರ ಬಗ್ಗೆ ಅವರು ಚರ್ಚಿಸಿದ್ದಾರೆ. ಇದು ಅಭಿವೃದ್ಧಿ ಹೊಂದಿದ ಭಾರತದ ಗುರಿಯನ್ನು ಈಡೇರಿಸುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಭಾಷಣವನ್ನು ●9ನೇ ಪುಟಕ್ಕೆ

ದೇಶದ ಜನರನ್ನು ನೆಹರೂ 'ಸೋಮಾರಿ' ಎಂದಿದ್ದರು

ಕಾಂಗ್ರೆಸ್ ಎಂದಿಗೂ ದೇಶದ ಸಾಮರ್ಥ್ಯವನ್ನು ನಂಬಲಿಲ್ಲ

ನವದೆಹಲಿ, ಫೆ.5–ದೇಶದ ಮೊದಲ ಪ್ರಧಾನಿ ನೆಹರೂ ಅವರು ಭಾರತೀಯರನ್ನು ಸೋಮಾರಿಗಳು ಎಂದಿದ್ದರು. ಅವರು ಕೆಂಪು ಕೋಟೆಯಲ್ಲಿ ನಿಂತು ಯುರೋಪ್, ಜಪಾನ್ ಮತ್ತು ಚೀನಾದವರಿಗಿಂತ ಭಾರತೀಯರು ಕಡಿಮೆ ಕೆಲಸ ಮಾಡುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಹೇಳಿದ್ದರು ಎಂದು ಮಾಜಿ ಪ್ರಧಾನಿ ದಿವಂಗತ ಜವಾಹರಲಾಲ್ ನೆಹರು ಅವರ ಹೇಳಿಕೆಯನ್ನು ಪ್ರಸ್ತಾಪಿಸಿದ ಪ್ರಧಾನಿ ಮೋದಿ, ಕಾಂಗ್ರೆಸ್‌ನ ಮನಸ್ಥಿತಿಯು ಎಂದಿಗೂ ದೇಶದ ಸಾಮರ್ಥ್ಯವನ್ನು ನಂಬುವುದಿಲ್ಲ ಎಂದರು.

ಇಂಡಿಯಾ ಮೈತ್ರಿಕೂಟವನ್ನು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ, ಮೈತ್ರಿಕೂಟದ ಹೊಂದಾಣಿಕೆಯು ಹದಗೆಟ್ಟಿದೆ. ಪಾಲುದಾರರಲ್ಲಿ ನಂಬಿಕೆಯ ಕೊರತೆಯಿದೆ ಎಂದರು. ದೇಶವು ಕುಟುಂಬ ವಾದದ ಭಾರವನ್ನು ಹೊತ್ತುಕೊಂಡಿದ್ದು ಕಾಂಗ್ರೆಸ್‌ಗೆ ಅದೇ ತೊಡಕಾಗಿದೆ. ಮಲ್ಲಿಕಾರ್ಜುನ್ ಖರ್ಗೆ ಅವರು ಲೋಕಸಭೆಯಿಂದ ರಾಜ್ಯಸಭೆಗೆ, ಗುಲಾಂ ನಬಿ ಆಜಾದ್ ಅವರು ಪಕ್ಷದಿಂದ ಹೊರ ಹೋಗಿದ್ದಾರೆ. ಅವರೆಲ್ಲರೂ ಕುಟುಂಬ ವಾದಕ್ಕೆ ಬಲಿಯಾದವರು. ಒಂದು ಉತ್ಪನ್ನ ●9ನೇ ಪುಟಕ್ಕೆ

ಕೇಂದ್ರದ ತಾರತಮ್ಯ ನೀತಿ ಖಂಡಿಸಿ

ದೆಹಲಿಯಲ್ಲಿ ಧರಣಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ನಾಳೆ ಬೆಳಗ್ಗೆ 11 ಗಂಟೆಗೆ ತಾವೂ ಸೇರಿದಂತೆ ಡಿಸಿಎಂ, ಸಚಿವರು, ಶಾಸಕರು ಧರಣಿಯಲ್ಲಿ ಭಾಗಿ
- ಬಿಜೆಪಿ ಸಂಸದರು, ಶಾಸಕರು ಪಾಲ್ಗೊಳ್ಳುವಂತೆ ಮನವಿ
- ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ತೆರಿಗೆ ಹಣ ಹಂಚಿಕೆ ತಾರತಮ್ಯ ವಿವರಿಸಿದ ಮುಖ್ಯಮಂತ್ರಿ



ಬೆಂಗಳೂರು, ಫೆ5(ಕೆಎಂಶಿ)– ಕರ್ನಾಟಕಕ್ಕೆ ನಿರಂತರವಾಗಿ ಆಗುತ್ತಿರುವ ಅನ್ಯಾಯ, ತಾರತಮ್ಯ, ಮಲತಾಯಿ ಧೋರಣೆ ವಿರೋಧಿಸಿ ರಾಜ್ಯದ ಹಿತವನ್ನು ಕಾಪಾಡುವಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಫೆಬ್ರವರಿ 7ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಅಂಕಿ–ಅಂಶಗಳು, ದಾಖಲೆಗಳನ್ನು ಮುಂದಿಟ್ಟು, ರಾಜ್ಯಕ್ಕೆ ನಿರಂತರವಾಗಿ ಆಗುತ್ತಿರುವ ದ್ರೋಹದ ಬಗ್ಗೆ ಎಳೆ–ಎಳೆಯಾಗಿ ಬಿಡಿಸಿಟ್ಟರು.

ಸುಮಾರು 90 ನಿಮಿಷಗಳ ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯದ ಬಗ್ಗೆ ಕಿಡಿಕಾರಿದ್ದಲ್ಲದೆ, ನಾಡಿನ ಜನರ ಹಿತದೃಷ್ಟಿಯಿಂದ ಬಿಜೆಪಿ ಸಂಸದರು, ಶಾಸಕರು ಪ್ರತಿಭಟನೆಗೆ ಕೈಜೋಡಿಸಬೇಕೆಂದು ಮನವಿ ಮಾಡಿದರು.

ರಾಜ್ಯದ ಜನತೆ ನಮಗೆ ಕೊಟ್ಟ ಅವಕಾಶಕ್ಕೆ ನ್ಯಾಯ ಒದಗಿಸಬೇಕಾದದ್ದು ನಮ್ಮ ಕರ್ತವ್ಯ, ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ನ್ಯಾಯ ಒದಗಿಸಿಕೊಡಲಿದೆ ಎಂದು ಇಲ್ಲಿವರೆಗೂ ತಾಳ್ಮೆಯಿಂದ ಕಾಯುತ್ತಿದ್ದೆವು. ಕಳೆದ ಸಾಲಿನ ಬಜೆಟ್‌ನಲ್ಲಿ ಹೇಳಿದಂತೆ ನಡೆದುಕೊಳ್ಳುತ್ತಾರೆ ●9ನೇ ಪುಟಕ್ಕೆ

ರಾಜ್ಯದಿಂದ ಕೇಂದ್ರಕ್ಕೆ 4,30,000 ಕೋಟಿ ತೆರಿಗೆ ಸಂದಾಯ

ರಾಜ್ಯದಿಂದ ಪ್ರತಿ ವರ್ಷ ಕೇಂದ್ರಕ್ಕೆ 4,30,000 ಕೋಟಿ ರೂ. ತೆರಿಗೆ ವಸೂಲಿ ಆಗಿ ಹೋಗುತ್ತಿದೆ. ತೆರಿಗೆ ಸಂಗ್ರಹಣೆಯಲ್ಲಿ ಮಹಾರಾಷ್ಟ್ರ ಬಿಟ್ಟರೆ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ. ನಮಗೆ ಈ ವರ್ಷ ತೆರಿಗೆ ಪಾಲಿನಲ್ಲಿ 37,252 ಕೋಟಿ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ 13,005 ಕೋಟಿ ಎರಡೂ ಸೇರಿ ಕೇವಲ 50,257 ಕೋಟಿ ರೂ. ರಾಜ್ಯಕ್ಕೆ ಬಂದಿದೆ. ರಾಜ್ಯಕ್ಕೆ ಇದು ಭೀಕರ ಅನ್ಯಾಯ ಅಲ್ಲವೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಬಜೆಟ್ ಗಾತ್ರ ಡಬಲ್ ಆದಾಗ, ರಾಜ್ಯದ ತೆರಿಗೆಯ ಪಾಲು ದುಪ್ಪಟ್ಟಾಗಬೇಕಿತ್ತು. ಆದರೆ ಈಗ ಅರ್ಧಕ್ಕಿಂತ ಹೆಚ್ಚು ಕಡಿಮೆ ಆಗಿದೆ. ಸೆಸ್, ಸರ್‌ಚಾರ್ಜ್ ಪ್ರತೀ ವರ್ಷ ಹೆಚ್ಚಿಸಿಕೊಂಡು ಹೋಗುತ್ತಿದ್ದಾರೆ. ಸೆಸ್, ಸರ್ ಚಾರ್ಜ್ ಮೂಲಕ ಕೇಂದ್ರ ವಸೂಲಿ ಮಾಡುವ ತೆರಿಗೆಯಲ್ಲಿ ರಾಜ್ಯಗಳಿಗೆ ನಯಾಪೈಸೆ ವಾಪಸ್ ಬರಲ್ಲ. ಆದರೆ ಸೆಸ್, ಸರ್‌ಚಾರ್ಜ್ ಎರಡೂ ಕೊಡೋದು ರಾಜ್ಯಗಳೇ.

ಆದ್ದರಿಂದ 16ನೇ ಹಣಕಾಸು ಆಯೋಗದ ಮುಂದೆ ಸೆಸ್ ಹಾಗೂ ಸರ್‌ಚಾರ್ಜ್‌ನಲ್ಲೂ ಪಾಲು ಕೊಡಲೇಬೇಕು ಎಂದು ಒತ್ತಾಯಿಸುತ್ತೇವೆ. ಈ ಬಗ್ಗೆ ಗಟ್ಟಿಯಾಗಿ ಧ್ವನಿ ಎತ್ತಲಿದ್ದೇವೆ. ಇದರ ಜತೆಗೆ ಶೇ.1ರಷ್ಟು ರಕ್ಷಣಾ ಇಲಾಖೆಗೆ ಇಟ್ಟುಕೊಳ್ಳುತ್ತಾರೆ. ಮೋದಿ ಅವರು ಬಂದ ನಂತರ ರಚನೆಯಾದ 15ನೇ ಹಣಕಾಸು ಆಯೋಗದ ಬಳಿಕ ●9ನೇ ಪುಟಕ್ಕೆ



ಅಡ್ವಾಣಿಯವರಿಗೆ ಭಾರತರತ್ನ: ಸಾರ್ಥಕ ಆಯ್ಕೆ

ದೇಶವಾಸಿಗಳಿಗೆ ಸಂತಸ: ಸುತ್ತೂರು ಶ್ರೀಗಳು



ಮೈಸೂರಿನ ಕಾರ್ಯಕ್ರಮವೊಂದರಲ್ಲಿ ಅಡ್ವಾಣಿ ಅವರೊಂದಿಗೆ ಸುತ್ತೂರು ಶ್ರೀಗಳು.

ಮೈಸೂರು, ಫೆ. 5– ಭಾರತದ ಮಾಜಿ ಉಪ ಪ್ರಧಾನಮಂತ್ರಿ, ಹಿರಿಯ ರಾಜಕೀಯ ಮುತ್ಸದ್ದಿಗಳಾದ ಎಲ್.ಕೆ.ಅಡ್ವಾಣಿಯವರಿಗೆ ಭಾರತರತ್ನ ಪುರಸ್ಕಾರ ದೊರೆತಿರುವುದು ದೇಶವಾಸಿಗಳಿಗೆ ಸಂತೋಷವನ್ನು ಉಂಟು ಮಾಡಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹರ್ಷಿಸಿದ್ದಾರೆ.

ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರ ಬಲಗೈಯಾಗಿ ದುಡಿದ ಅಡ್ವಾಣಿಯವರು ನಿಷ್ಕಾಮ ಕರ್ಮಕ್ಕೆ ಭಾಷ್ಯದಂತೆ ಇರುವವರು. ಭಾರತೀಯ ಜನತಾ ಪಕ್ಷದ ಪುನರುಜ್ಜೀವನದಲ್ಲಿ ಅವರು ಕೈಗೊಂಡ ರಥಯಾತ್ರೆ ಒಂದು ಪ್ರಮುಖ ಘಟ್ಟ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಿರುವ ಶುಭ ಯಜ್ಞದ ರೂವಾರಿಗಳು ಅವರೇ ಎಂದರೆ ತಪ್ಪಾಗಲಾರದು. ರಾಜಕೀಯದ ಏಳು ಬೀಳುಗಳು ಅವರನ್ನು ಎಂದೂ ಕುಗ್ಗಿಸಲಿಲ್ಲ. ಯಾರ ವಿರುದ್ಧವೂ ಅವರು ಕೆಟ್ಟ ಮಾತುಗಳನ್ನಾಡಲಿಲ್ಲ. ರಾಷ್ಟ್ರಭಕ್ತಿಯನ್ನೇ ಉಸಿರಾಗಿಸಿಕೊಂಡ ಅವರು ಸ್ಥಿತ ಪ್ರಜ್ಞತೆಯನ್ನು, ಸಮಚಿತ್ತತೆಯನ್ನು ಸದಾ ಕಾಲವೂ ಕಾಯ್ದುಕೊಂಡು ಬಂದ ವಿವೇಕಶಾಲಿಗಳು. ಸಂದುಹೋದ ಮೌಲ್ಯಗಳ ಒಂದು ತಲೆಮಾರಿನ ಜೀವಂತ ಪ್ರತಿನಿಧಿ ಅವರು. ಇಂಥ ಭಾರತಾಂಬೆಯ ಸುಪುತ್ರನಿಗೆ ರಾಷ್ಟ್ರದ ಅತ್ಯುನ್ನತ ನಾಗರಿಕ ಗೌರವ ಲಭಿಸಿದ್ದು ಅಭಿಮಾನದ ವಿಷಯ. ಅವರು ಶ್ರೀಮಠದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಅವರು ತೋರಿದ ಸರಳತೆ, ಆತ್ಮೀಯತೆ, ಅಭಿಮಾನಗಳು ನಮ್ಮ ಮನಸ್ಸಿನಲ್ಲಿ ಇಂದೂ ಹಸಿರಾಗಿವೆ. ಅಡ್ವಾಣಿಯವರಿಗೆ 'ಭಾರತ ರತ್ನ' ಪುರಸ್ಕಾರ ಲಭಿಸಿರುವುದಕ್ಕಾಗಿ ಶ್ರೀಮಠ ಮತ್ತು ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತ, ಅವರು ರಾಷ್ಟ್ರಕ್ಕೆ ನಿರಂತರ ಮಾರ್ಗದರ್ಶನ ನೀಡುತ್ತಿರಲು ಭಗವಂತನು ಅವರಿಗೆ ಆಯುರಾರೋಗ್ಯಗಳನ್ನು ಕರುಣಿಸಲೆಂದು ಹಾರೈಸುತ್ತೇವೆ ಎಂದು ಶ್ರೀಗಳು ತಿಳಿಸಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರದಲ್ಲಿ ಲೋಕ್ ಶಕ್ತಿ ಪಾರ್ಟಿ ಸ್ಪರ್ಧೆ



ಮೈಸೂರಿನ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಲೋಕ್ ಶಕ್ತಿ ಪಾರ್ಟಿಯ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್ ಮಾತನಾಡಿದರು.

ಮೈಸೂರು, ಫೆ.5(ಬಿಎಲ್‌ಯು)– ಮುಂದಿನ ಲೋಕಸಭಾ ಚುನಾವಣೆಯಲ್ಲಿ ಲೋಕ್ ಶಕ್ತಿ ಪಾರ್ಟಿಯು ಕರ್ನಾಟಕದ 28 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್ ತಿಳಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಮಾಜಿ ಸಿಎಂ ದಿವಂಗತ ರಾಮಕೃಷ್ಣ ಹೆಗಡೆ ಸ್ಥಾಪಿಸಿದ ಲೋಕ್ ಶಕ್ತಿ ಪಾರ್ಟಿ ತನ್ನ ಮೂಲ ತತ್ವ ಸಿದ್ಧಾಂತ ಮೇಲೆ ಹೋರಾಟ ಮಾಡಲಿದೆ ಎಂದರು.

ಅಖಂಡ ಭಾರತದ ಪರಿಕಲ್ಪನೆ ಬಿಟ್ಟು ಪ್ರತ್ಯೇಕ ರಾಷ್ಟ್ರ ನಿರ್ಮಾಣದ ಹೇಳಿಕೆ ನೀಡಿರುವ ಕಾಂಗ್ರೆಸ್ ಸಂವಿಧಾನ ವಿರೋಧಿ ನೀತಿ ತಳೆದಿದೆ. ಇನ್ನು ಅಧಿಕಾರದ ಆಸೆಗಾಗಿ ಜೆಡಿಎಸ್ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಕೇಸರಿ ಶಾಲು ಧರಿಸಿದೆ. ಇಂತಹ ಸಂದರ್ಭದಲ್ಲಿ ನಮ್ಮ ಪಕ್ಷ ಮೂಲ ತತ್ವ ಸಿದ್ಧಾಂತ ಬಿಟ್ಟು ಕೊಡದೆ ಜನಪರವಾಗಿ ಹೋರಾಟ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಜನರು ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಚಂದ್ರಶೇಖರ್ ಮನವಿ ಮಾಡಿದರು.

ಪಕ್ಷದ ಮಹಿಳಾ ಅಧ್ಯಕ್ಷೆ ಡಾ.ಭಾಗ್ಯ, ಹಿಂದುಳಿದ ವರ್ಗದ ಅಧ್ಯಕ್ಷ ಬಸವರಾಜು, ಪ್ರಧಾನ ಕಾರ್ಯದರ್ಶಿ ಮಾರುತಿ ಪ್ರಸಾದ್, ಮಂಡ್ಯ ಜಿಲ್ಲಾಧ್ಯಕ್ಷ ಎಸ್.ಉಮೇಶ್, ಮುಖಂಡರಾದ ಲೋಕೇಶ್, ಲಿಂಗಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹೆಚ್.ಪಿ.ಮಂಜುನಾಥ್ ಅವರನ್ನು ಎಂಎಲ್‌ಸಿ ಮಾಡುವಂತೆ ಆಗ್ರಹ



ಕಾಂಗ್ರೆಸ್ ಮುಖಂಡ ಸುರೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಮೈಸೂರು, ಫೆ.5(ಬಿಎಲ್‌ಯು)– ಹುಣಸೂರಿನ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್‌ಗೆ ವಿಧಾನಪರಿಷತ್ ಸದಸ್ಯರು ಅಥವಾ ನಿಗಮ ಮಂಡಳಿಗೆ ನೇಮಕ ಮಾಡುವಂತೆ ಕಾಂಗ್ರೆಸ್ ಮುಖಂಡ ಸುರೇಶ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ಆಗ್ರಹ ಮಾಡಿದ ಅವರು, ಮಂಜುನಾಥ್ ಶಾಸಕರಾಗಿದ್ದಾಗ ಹುಣಸೂರು ಕ್ಷೇತ್ರದಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಮಂಜುನಾಥ್ ಅವರ ಜನಪರ ಕಾರ್ಯ ಪರಿಗಣಿಸಿ ವಿಧಾನಪರಿಷತ್ ಅಥವಾ ನಿಗಮ ಮಂಡಳಿಗೆ ನೇಮಕ ಮಾಡುವ ಮೂಲಕ ಕ್ಷೇತ್ರದ ಜನರ ಮನವಿ ಪುರಸ್ಕರಿಸುವಂತೆ ಸುರೇಶ್ ಮನವಿ ಮಾಡಿದರು. ಗ್ರಾಮ ಪಂಚಾಯಿತಿ ಸದಸ್ಯರಾದ ನಾಗೇಂದ್ರ, ಪಳನಿಸ್ವಾಮಿ, ಶರತ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಿಧನ

ದೊಡ್ಡಹುಂಡಿ ಲಕ್ಕಮ್ಮ



ಮೈಸೂರು,ಫೆ.5–ಮೈಸೂರು ತಾಲೂಕು, ದೊಡ್ಡಹುಂಡಿಯ ಲೇಟ್ ಹಾ.ಮಾ.ಚಿಕ್ಕೇಗೌಡರ ಪತ್ನಿ ಲಕ್ಕಮ್ಮ (76) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಧನಗಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಸೋಮಣ್ಣ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 11.30ಕ್ಕೆ ದೊಡ್ಡಹುಂಡಿಯ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಮೃತರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ, ಡಾ.ಮಾಲೇಗೌಡ, ಕೆಂಚಪ್ಪ, ಸಿ.ಎಂ.ಸಿದ್ದರಾಮೇಗೌಡ, ಉದ್ಬೂರು ಕೃಷ್ಣ, ಕೆ.ಎಸ್.ಕರೀಗೌಡ ಸಂತಾಪ ಸೂಚಿಸಿದ್ದಾರೆ.

ಹನುಮಂತಪ್ಪ



ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಗ್ರಾಮದ ನಿವಾಸಿ ಹನುಮಂತಪ್ಪ (84) ಭಾನುವಾರ ನಿಧನರಾದರು.

ಮೃತರು ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು, ಪುತ್ರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾದಾಪುರ ಗ್ರಾಮದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಪದ್ಮಾಜಿರಾವ್



ಮೈಸೂರು: ಮೈಸೂರಿನ ದಟ್ಟಗಳ್ಳಿ ಮೂರನೇ ಹಂತದ ನಿವಾಸಿ ಆರ್.ಪದ್ಮಾಜಿರಾವ್ (88) ಅವರು ಭಾನುವಾರ (ಫೆ.4) ನಿಧನರಾದರು. ಮೃತರು ಪತ್ನಿ, ಪುತ್ರ, ಮೂವರು ಪುತ್ರಿಯರು, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫೆ.8, ಮೈಸೂರಲ್ಲಿ ಚಾಮರಾಜ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನಾಧ್ಯಕ್ಷರಾದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡರನ್ನು ಅದ್ದೂರಿ ಮೆರವಣಿಗೆ ಮೂಲಕ ವೇದಿಕೆಗೆ ಕರೆ ತರಲು ನಿರ್ಧಾರ

ಮೈಸೂರು, ಫೆ.5(ಬಿಎಲ್‌ಯು)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಫೆ.8ರಂದು ನಗರದಲ್ಲಿ ಅದ್ದೂರಿಯಾಗಿ ನಡೆಯಲಿದೆ ಎಂದು ಪರಿಷತ್ ನಗರಾಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಸಮ್ಮೇಳನದ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

ನಗರದ ಕಲಾಮಂದಿರದಲ್ಲಿ ಅಂದು ಬೆಳಿಗ್ಗೆ 8.30 ಗಂಟೆಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ರಾಷ್ಟ್ರ ಧ್ವಜಾರೋಹಣ ಮಾಡಲಿದ್ದು, ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ ನಾಡಧ್ವಜಾರೋಹಣ ನೆರವೇರಿಸಲಿದ್ದಾರೆ. ನಾನು ಪರಿಷತ್ ಧ್ವಜಾರೋಹಣ ನೆರವೇರಿಸುತ್ತೇನೆ. ನಗರಪಾಲಿಕೆ ಉಪಆಯುಕ್ತ ಜಿ.ಎಸ್. ಸೋಮಶೇಖರ್, ಎಸಿಪಿ ಶಾಂತಮಲ್ಲಪ್ಪ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ.ಸಿ.ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದು ಶಿವರಾಮ್ ತಿಳಿಸಿದರು.



ಮೈಸೂರಿನ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪರಿಷತ್ ನಗರಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡುತ್ತಿರುವುದು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಅಂದು ಬೆಳಗ್ಗೆ 9 ಗಂಟೆಗೆ ಸಮ್ಮೇಳನದ ಅಧ್ಯಕ್ಷ ಡಾ.ಚಿದಾನಂದಗೌಡ ಅವರನ್ನು ಅದ್ದೂರಿ ಮೆರವಣಿಗೆಯಲ್ಲಿ ಕರೆತರಲಾಗುವುದು. ಶಾಸಕ ಹರೀಶ್‌ಗೌಡ ಮೆರವಣಿಗೆಗೆ ಚಾಲನೆ ನೀಡಲಿದ್ದು, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹಾಗೂ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದು ಹೇಳಿದರು.


ತರುವಾಯ ನಗರದ ಕಲಾಮಂದಿರದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಖ್ಯಾತ ವಾಗ್ಮಿ ಡಾ.ಎಂ.ಕೃಷ್ಣೇಗೌಡ ಸಮ್ಮೇಳನ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಆ ವೇಳೆ ಜಯಪ್ರಕಾಶ್ ರಾವ್ ಅವರ 'ದಶಕಗಳ ಸಾಹಿತ್ಯದ ಮೊಗಸಾಲೆಯಲ್ಲಿ' ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ ಬಿಡುಗಡೆ ಮಾಡಲಿದ್ದು, ಪ್ರೊ.ವೈ.ಎಸ್.ಗೌರಮ್ಮ 'ದಾರ್ಶನಿಕ ಕುವೆಂಪು' ಕೃತಿಯನ್ನು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಬಿಡುಗಡೆ ಮಾಡುವರು. ತರುವಾಯ ಸಮ್ಮೇಳನಾಧ್ಯಕ್ಷ ಡಾ.ಚಿದಾನಂದಗೌಡ ಮಾತನಾಡಲಿದ್ದಾರೆ. ಶಾಸಕರಾದ ಜಿ.ಟಿ.ದೇವೇಗೌಡ, ಹೆಚ್.ವಿಶ್ವನಾಥ್, ಡಾ.ತಿಮ್ಮಯ್ಯ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಸ್‌ಬಿಎಂ ಮಂಜು, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮ್ಮೇಳನದ ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

> **"** ಉದ್ಘಾಟನಾ ಕಾರ್ಯಕ್ರಮದ ನಂತರ 'ಕನ್ನಡ–ಕನ್ನಡಿಗ–ಕರ್ನಾಟಕ: ಸ್ಥಿತಿ–ಗತಿ' ಕುರಿತು ವಿಚಾರ ಗೋಷ್ಠಿ ಮತ್ತು ಕವಿಗೋಷ್ಠಿ ನಡೆಯಲಿದೆ. ಆ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರನ್ನು ಅಭಿನಂದಿಸಲಾಗುವುದು. ಕಾರ್ಯಕ್ರಮದ ಕೊನೆಯ ಘಟ್ಟವಾಗಿ ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ. ಸುವರ್ಣ ಕರ್ನಾಟಕ ಸಂಭ್ರಮದ ಅಂಗವಾಗಿ ಆಯೋಜಿಸಿರುವ ಈ ಸಮ್ಮೇಳನ ಯಶಸ್ವಿಯಾಗಿ ನಡೆಯಲು ವಿವಿಧ ಸಮಿತಿಗಳನ್ನು ರಚನೆ ಮಾಡಲಾಗಿದೆ. ಕನ್ನಡ ಭಾಷೆಯ ಕಂಪನ್ನು ಹೆಚ್ಚು ಮಾಡಲು ಏರ್ಪಡಿಸಿರುವ ಸಮ್ಮೇಳನದಲ್ಲಿ ಸಾವಿರಾರು ಕನ್ನಡ ಪ್ರೇಮಿಗಳು ಆಗಮಿಸುವರು. –ಕೆ.ಎಸ್.ಶಿವರಾಮ್.

ಲೋಕಸಭಾ ಚುನಾವಣೆ ಸಮೀಪದಲ್ಲಿ ಅಮಿತ್ ಷಾ ಎರಡು ದಿನ ರಾಜ್ಯ ಪ್ರವಾಸ

● ಬೆಂಗಳೂರು, ಮೈಸೂರು ಕಾರ್ಯಕ್ರಮಗಳಲ್ಲಿ ಭಾಗಿ ● ಸುತ್ತೂರಲ್ಲಿ ಕಾಂಗ್ರೆಸ್ ನಾಯಕ ಶಾಮನೂರು ಶಿವಶಂಕರಪ್ಪ ನಿರ್ಮಿಸಿರುವ ಅತಿಥಿ ಗೃಹ ಉದ್ಘಾಟನೆ



ಬೆಂಗಳೂರು, ಫೆ.5(ಕೆಎಂಶಿ)–ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದಿಂದ ಹಿಂದೆ ಸರಿದಿದ್ದ ನಾಯಕ ಸಮುದಾಯದವರ ಮನ ಗೆಲ್ಲಲು ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯದಲ್ಲಿ ಎರಡು ದಿನಗಳ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಇದೇ 9ರಂದು ನಗರಕ್ಕೆ ಆಗಮಿಸುವ ಅವರು, ಬೆಂಗಳೂರು ಹಾಗೂ ಮೈಸೂರಿನಲ್ಲಿ ಈ ಸಮಾಜಗಳಿಗೆ ಸೇರಿದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದಲ್ಲದೆ, ಲೋಕಸಭಾ ಚುನಾವಣೆ ಸಿದ್ಧತೆಗೆ ಸಂಬಂಧಿಸಿದಂತೆ ಪಕ್ಷದ ರಾಜ್ಯ ಮುಖಂಡರೊಂದಿಗೆ ಚರ್ಚೆ ನಡೆಸಲಿದ್ದಾರೆ.

ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಪದೇ ಪದೇ ಹೇಳಿಕೆಗಳನ್ನು ನೀಡುತ್ತಿರುವ ಹಾಗೂ ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ ಮತ್ತೆ ಲೋಕಸಭೆಗೆ ಆಯ್ಕೆಗೊಳ್ಳಬೇಕೆಂದು ಹೇಳಿಕೆ ನೀಡಿದ್ದ ಕಾಂಗ್ರೆಸ್‌ನ ಹಿರಿಯ ಮುತ್ಸದ್ದಿ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಆಯೋಜಿಸಿರುವ ಕಾರ್ಯಕ್ರಮದಲ್ಲೂ ಭಾಗವಹಿಸುತ್ತಿದ್ದಾರೆ.

ಮೈಸೂರಿನ ಸುತ್ತೂರು ಕ್ಷೇತ್ರದಲ್ಲಿ ಶಾಮನೂರು ಅವರು ತಮ್ಮ ಕುಟುಂಬದ ವತಿಯಿಂದ ನಿರ್ಮಿಸಿರುವ ಅತಿಥಿಗೃಹದ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಉದ್ದೇಶದಿಂದಲೇ ಷಾ ಈ ಪ್ರವಾಸ ಕೈಗೊಂಡಿದ್ದಾರೆ. ಈ ಸಮಾರಂಭಕ್ಕೆ ಜಿಲ್ಲೆ, ಕ್ಷೇತ್ರವನ್ನು (ವರುಣ) ಪ್ರತಿನಿಧಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿಲ್ಲ. ಸ್ಥಳೀಯ ಉಸ್ತುವಾರಿ ಸಚಿವರಿಗೂ ವೇದಿಕೆಯಲ್ಲಿ ಅವಕಾಶವಿಲ್ಲ. ಶಾಮನೂರು ಕುಟುಂಬದ ಸ್ನೇಹಿತರಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮಾತ್ರ ಆಹ್ವಾನ ನೀಡಲಾಗಿದೆ.


ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಿದ್ದಗಂಗಾ ಕ್ಷೇತ್ರದ ಸಿದ್ದಲಿಂಗ ಸ್ವಾಮೀಜಿಗಳ ಸಮ್ಮುಖದಲ್ಲಿ ಅಮಿತ್ ಷಾ ಅವರು, ಪಾರ್ವತಮ್ಮ ಮತ್ತು ಡಾ.ಶಾಮನೂರು ಶಿವಶಂಕರಪ್ಪ ಅತಿಥಿ ಗೃಹವನ್ನು ಉದ್ಘಾಟಿಸಲಿದ್ದಾರೆ.

ಎಲ್ಲದಕ್ಕೂ ಮಿಗಿಲಾಗಿ ಈ ಸಮಾರಂಭಕ್ಕೆ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವೇದಿಕೆ ಹಂಚಿಕೊಳ್ಳಲಿದ್ದಾರೆ.

ಉಳಿದಂತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಬಿಜೆಪಿ ಮುಖಂಡರಾದ ಸಿ.ಟಿ. ರವಿ, ಡಾ.ಪ್ರಭಾಕರ್ ಕೋರೆ, ಉದ್ಯಮಿ ಎಸ್.ಎಸ್. ಗಣೇಶ್ ಉಪಸ್ಥಿತರಿರಲಿದ್ದಾರೆ. ಸಮಾರಂಭದಲ್ಲಿ ಶಾಮನೂರು ಶಿವಶಂಕರಪ್ಪ ಅವರನ್ನು ಅಮಿತ್ ಷಾ ಸನ್ಮಾನಿಸಲಿದ್ದಾರೆ.

ಲೋಕಸಭಾ ಚುನಾವಣೆಗೂ ಮುನ್ನವೋ, ನಂತರವೋ ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ಪತನಗೊಂಡು ಮಹಾರಾಷ್ಟ್ರ ಮಾದರಿಯಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂಬ ಮಾತುಗಳು ಬಿಜೆಪಿ ವಲಯದಲ್ಲಿ ಕೇಳಿಬರುತ್ತಿರುವ ಬೆನ್ನಲ್ಲೇ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ಕೇಂದ್ರದ ಮಾಜಿ ಸಚಿವ ಪ್ರಫುಲ್ ಪಟೇಲ್, ರಾಜ್ಯದ ಇಬ್ಬರು ಕಾಂಗ್ರೆಸ್ ಧುರೀಣರೊಟ್ಟಿಗೆ ಸಂಪರ್ಕ ಇಟ್ಟುಕೊಂಡಿರುವ ಬೆನ್ನಲ್ಲೇ ಅಮಿತ್ ಷಾ ಅವರ ಈ ಭೇಟಿ ರಾಜಕೀಯ ತಿರುವಿಗೆ ವೇದಿಕೆ ಆಗಲಿದೆಯೇ ಎಂಬ ಮಾತುಗಳು ಕೇಳಿಬರುತ್ತಿವೆ.

ಫೆ.16, 'ರವಿಕೆ ಪ್ರಸಂಗ' ಬಿಡುಗಡೆ



ಚಿತ್ರ ನಿರ್ದೇಶಕ ಸಂತೋಷ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಮೈಸೂರು, ಫೆ.5(ಬಿಎಲ್‌ಯು)– ನೈಜ ಕಥೆ ಆಧರಿಸಿ ನಿರ್ಮಾಣ ಮಾಡಿರುವ ರವಿಕೆ ಪ್ರಸಂಗ ಸಿನಿಮಾ ಫೆಬ್ರವರಿ 16ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಇದರ ನಿರ್ದೇಶಕ ಸಂತೋಷ್ ತಿಳಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಗೀತಾ ಭಾರತಿ ಭಟ್ ಈ ಸಿನಿಮಾದಲ್ಲಿ ಪೂರ್ಣ ಪ್ರಮಾಣದ ನಾಯಕಿಯಾಗಿ ಅಭಿನಯಿಸಿದ್ದಾರೆ ಎಂದರು.

ಸರಿಯಾಗಿ ರವಿಕೆ ಹೊಲಿದು ಕೊಡದಿದ್ದಾಗ ಆ ವಿವಾದ ನ್ಯಾಯಾಲಯದ ಮೆಟ್ಟಿಲು ಹತ್ತುವುದರ ನೈಜ ಕಥೆ ಆಧರಿಸಿ ಈ ಸಿನಿಮಾ ನಿರ್ಮಾಣ ಮಾಡಲಾಗಿದೆ ಎಂದು ಸಂತೋಷ್ ತಿಳಿಸಿದರು. ಧಾರಾವಾಹಿ ನಂತರ 4 ಸಿನಿಮಾದಲ್ಲಿ ನಾನು ನಟಿಸಿದ್ದೇನೆ. ರವಿಕೆ ಪ್ರಸಂಗ ಸಿನಿಮಾದಲ್ಲಿ ಈಗ ಪೂರ್ಣ ಪ್ರಮಾಣದ ನಾಯಕಿಯಾಗಿ ಅಭಿನಯಿಸಿದ್ದೇನೆ ಎಂದು ಗೀತಾ ಭಾರತಿ ಭಟ್ ತಿಳಿಸಿದರು. ಸಿನಿಮಾಗೆ ಚಿತ್ರಕಥೆ ಬರೆದಿರುವ ಪವನ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.5–ವಿ.ವಿ ಮೊಹಲ್ಲಾ ವಿಭಾಗ ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ನಿಮಿತ್ತ ಜನತಾನಗರ, ಬೋಗಾದಿ 2ನೇ ಹಂತ North & South, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ರೂಪನಗರ, ದೀಪಾನಗರ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ.ಆರ್.ಐ ಲೇಔಟ್, ಯುನಿವರ್ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.6ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.2.2024 ಮಂಗಳವಾರ, ಮಳೆ ನಕ್ಷತ್ರ: ಧನಿಷ್ಠ 6.2.2024ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕೆ.ಸಿ.ಶಿವಪ್ಪ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಕ್ಕೆ ಶ್ರದ್ಧೆಯಶಿಲ್ಪ–ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ.ಹೆಚ್.ವಿ.ನಾಗರಾಜರಾವ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ– ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಭಾರ್ಗವಿ ಕೆ. – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಟಿ.ಎನ್. ಶೇಷಗೋಪಾಲನ್, 1.20 ಭಾವಗೀತೆಗಳು–ಪಾವನಿ ಕಾಶೀನಾಥ್, 3.00 ಡಾ.ಎಂ.ಎಲ್. ವಸಂತಕುಮಾರಿ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ, ಶ್ರೀ ರಾಘವೇಂದ್ರ ವಿಜಯ, ಪ್ರಸ್ತುತಿ– ಬೇಲೂರು ಹೆಚ್.ಎ. ವಸಂತಲಕ್ಷ್ಮಿ, 6.50 ಕೃಷಿರಂಗ–ರೇಷ್ಮೆ ಐಸಿರಿ ಬಾನುಲಿ ಸರಣಿ– ರೇಷ್ಮೆ ಕೃಷಿಯಲ್ಲಿ ಹೊಸ ತಾಂತ್ರಿಕತೆಗಳ ಪ್ರಾಮುಖ್ಯತೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಡಾ.ಎಸ್. ಗಾಂಧಿದಾಸ್, 9.30 ಡಾ. ಡಿ.ಕೆ. ಜಯರಾಮನ್–ಹಾಡುಗಾರಿಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30 ಗಂಟೆವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದಕ್ಷಿಣ ವಲಯ ಸ್ಥಳೀಯ ಸಂಸ್ಥೆ:** ಮೈಸೂರು ದಕ್ಷಿಣ ವಲಯ ರ್‍ಯಾಲಿ–2024, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಪಿ.ವಿಶ್ವನಾಥ್, ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಮೀಲ್, ಅಧ್ಯಕ್ಷತೆ : ಜಿಲ್ಲಾ ಆಯುಕ್ತರಾದ ಡಾ. ಬಿ.ಕೆ. ಅಜಯ್‌ಕುಮಾರ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಅಂಡ್ ಗೈಡ್ಸ್ ಮುಖ್ಯ ಕಚೇರಿ, ಬೆಳಗ್ಗೆ 10.30ಕ್ಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ರಾಕೇಶ್ ಅಯ್ಯರ್ ಅವರಿಂದ ಗಾಯನ, ಎಸ್. ದಯಾಕರ್–ವಯೋಲಿನ್ ಸೋಲೋ, ಪೃಥ್ವಿ ಭಾಸ್ಕರ್–ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6 ರಿಂದ.

ಸುತ್ತೂರು ಜಾತ್ರಾ ಮಹೋತ್ಸವದ ಇಂದಿನ ಕಾರ್ಯಕ್ರಮಗಳು



ಕರ್ತೃಗದ್ದುಗೆಯಲ್ಲಿ ಪೂಜಾ ಕೈಂಕರ್ಯ ಮತ್ತು ಮೆರವಣಿಗೆ

ಬೆಳಗ್ಗೆ 4ಕ್ಕೆ ಅನುಜ್ಞೆ, ಮಹಾಸಂಕಲ್ಪಪೂರ್ವಕ ಮಹಾರುದ್ರಾಭಿಷೇಕ, 6.30ಕ್ಕೆ ಸುತ್ತೂರಿನ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮ, 6.30ಕ್ಕೆ ಸ್ನೇಹ ಸೌಹಾರ್ದತೆ ಶಾಂತಿ ಮೆರವಣಿಗೆ, 7.30ಕ್ಕೆ ಷಟ್‌ಸ್ಥಳ ಧ್ವಜಾರೋಹಣ–ಶ್ರೀ ಶಿವಕುಮಾರ ಸ್ವಾಮೀಜಿ, ಶ್ರೀ ಮೂರಂಬಾಳು ಗಂಗಾಧರೇಶ್ವರ ಪಟ್ಟದ ಮಠ, ಕಸುವಿನಹಳ್ಳಿ, ಸಂದೇಶ–ಶ್ರೀ ಇಶಾಪ್ರಸಾದ ಸ್ವಾಮೀಜಿ, ಶ್ರೀ ಗುರುದೇವಾಶ್ರಮ, ಅಥರ್ಗ, ವಿಜಯಪುರ ಜಿಲ್ಲೆ, 8ಕ್ಕೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಸ್ವಾಮೀಜಿಗೆ ಅಭಿಷೇಕ ಮತ್ತು ಮಹಾಮಂಗಳಾರತಿ, ಸಂಜೆ 4.30ಕ್ಕೆ ಮಠದಿಂದ ಕರ್ತೃ ಗದ್ದುಗೆಯವರೆಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಸ್ವಾಮೀಜಿಯವರ ಮೆರವಣಿಗೆ, ಸಂಜೆ 6ಕ್ಕೆ ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ಸಂಜೆ 7ಕ್ಕೆ ಕರ್ತೃ ಗದ್ದುಗೆ–ಅಗ್ರೋದಕ ಪುಣ್ಯಾಹ, ನಂದಿ ಕಲಶ ಸ್ಥಾಪನೆ, ಅಂಕುರಾರ್ಪಣೆ.

ಉದ್ಘಾಟನೆ

ಸಂಜೆ 4ಕ್ಕೆ ವಸ್ತುಪ್ರದರ್ಶನ ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಕೃಷಿ ಮೇಳ ಉದ್ಘಾಟನೆ: ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ್, ಆರೋಗ್ಯ ತಪಾಸಣಾ ಶಿಬಿರ ಉದ್ಘಾಟನೆ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಾಂಸ್ಕೃತಿಕ ಮೇಳ ಉದ್ಘಾಟನೆ: ಶಿಕ್ಷಣ ಸಚಿವ ಮಧು ಬಂಗಾರಪ್ಪ, ದೋಣಿ ವಿಹಾರ ಉದ್ಘಾಟನೆ: ವಿಧಾನಪರಿಷತ್ ವಿಪಕ್ಷ ನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಶಾಸಕ ಹಾಗೂ ರಾಜ್ಯ ಹಣಕಾಸು ನಿಗಮದ ಅಧ್ಯಕ್ಷ ಮಹಾಂತೇಶ್ ಎಸ್. ಕೌಜಲಗಿ, ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಊಟಿ ಶಾಸಕ ಆರ್.ಗಣೇಶ್, ಮಾಜಿ ಸಚಿವ ಅಲ್ಲಮ್ ವೀರಭದ್ರಪ್ಪ, ಶಾಸಕ ಸಿ.ಕೆ.ರಾಮಮೂರ್ತಿ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮತ್ತು ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜಗದ್ಗುರು ಶ್ರೀ ಆದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿ, ಶ್ರೀ ಸಿದ್ಧಗಿರಿ ಸಂಸ್ಥಾನ ಮಠ, ಕಾನೇರಿ ಮತ್ತು ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮೀಜಿ, ಶ್ರೀ ವಾಲ್ಮೀಕಿ ಪೀಠ, ರಾಜನಹಳ್ಳಿ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ.

ಸಾಂಸ್ಕೃತಿಕ ಕಾರ್ಯಕ್ರಮ

ಗದ್ದುಗೆಯಲ್ಲಿ: ಬೆಳಗ್ಗೆ 8ಕ್ಕೆ ನಾದಸ್ವರ, 9ಕ್ಕೆ ಇ.ಎಂ. ಮಂಜುಳಾ ಮತ್ತು ತಂಡದಿಂದ ಸುಗಮ ಸಂಗೀತ, ಬೆಳಗ್ಗೆ 10.30ಕ್ಕೆ ರುತ್ವಿಕ್ ಸಿ.ರಾಜ್ ಮತ್ತು ತಂಡದವರಿಂದ ಭಾವಗೀತೆ ಮತ್ತು ಭಕ್ತಿಗೀತೆಗಳು, ಮ. 12ಕ್ಕೆ ಸಿ.ಶಶಿಕಲಾ ಚಂದ್ರಶೇಖರ್ ಅವರಿಂದ ಸುಗಮ ಸಂಗೀತ, ಮ. 1.30ಕ್ಕೆ ಪಿ.ಮಂಜುಳಾ ಮತ್ತು ತಂಡದಿಂದ ವಚನ ಗಾಯನ, ಮ.2.30ಕ್ಕೆ ಡಾ.ಕೆ.ಜಿ.ಪದ್ಮಾನಂದ ಅವರಿಂದ ಜಾನಪದ ಮತ್ತು ದೇಶಭಕ್ತಿ ಗೀತೆಗಳು, ಸಂಜೆ 6ಕ್ಕೆ ಮುರಳೀಧರ್ ಪೈ (ದಿವಂಗತ ಭದ್ರಗಿರಿ ಕೇಶವದಾಸ್, ಶಾರದಾ ಮ್ಯೂಸಿಕ್ ಸೆಂಟರ್, ಮೆರಿಲ್ಯಾಂಡ್, ಯುಎಸ್‌ಎ) ಅವರಿಂದ ಭಕ್ತಿಗೀತೆಗಳು, ರಾತ್ರಿ 8ಕ್ಕೆ ಎನ್.ಸರಸ್ವತಿ ರವಿಕುಮಾರ್ ಮತ್ತು ತಂಡದವರಿಂದ ಭರತನಾಟ್ಯ, ರಾತ್ರಿ 9ಕ್ಕೆ ಆರ್.ಎಂ.ಸುಮಂತ್ ವಶಿಷ್ಠ ಮತ್ತು ತಂಡದವರಿಂದ ಸುಗಮ ಸಂಗೀತ.

ನಾಟಕಗಳು

ಹಿರಿಯರ ಮನೆ ಆವರಣ : ರಾತ್ರಿ 10ಕ್ಕೆ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಕೆ. ಹೆಮ್ಮನಹಳ್ಳಿ ಅವರಿಂದ **'ಸಂಪೂರ್ಣ ರಾಮಾಯಣ'** ಪೌರಾಣಿಕ ನಾಟಕ ಪ್ರದರ್ಶನ.

ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ : ರಾತ್ರಿ 10ಕ್ಕೆ ನಂಜನಗೂಡು ತಾಲೂಕಿನ ಹಾಡ್ಯ ಗ್ರಾಮದ ಶ್ರೀ ಕಾಲಭೈರವೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ **'ನಳ ದಮಯಂತಿ ಅಥವಾ ಶನಿ ಪ್ರಭಾವ'** ನಾಟಕ ಪ್ರದರ್ಶನ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದಲ್ಲಿ : ರಾತ್ರಿ 10ಕ್ಕೆ ಬೆಂಗಳೂರಿನ ಬನಶಂಕರಿಯ ಶ್ರೀ ಮಾರುತಿ ಕೃಪಾಪೋಷಿತ ನಾಟಕ ಮಂಡಳಿಯವರಿಂದ **'ರತಿ ಮನ್ಮಥರ ಕಲ್ಯಾಣ ಅಥವಾ ಕೌಂಡಲಿಕನ ವಧೆ'** ನಾಟಕ ಪ್ರದರ್ಶನ.

ಶ್ರೀ ಘನಲಿಂಗ ಶಿವಯೋಗಿ ಗೆಸ್ಟ್ ಹೌಸ್ ಹಿಂಭಾಗ : ರಾತ್ರಿ 10ಕ್ಕೆ ಮದ್ದೂರು ತಾಲೂಕು ಸಬ್ಬನಹಳ್ಳಿಯ ಶ್ರೀ ಸೀತಲಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ **'ಶ್ರೀ ಶನಿಮಹಾತ್ಮೆ ಅಥವಾ ರಾಜಾ ವಿಕ್ರಮ'** ನಾಟಕ ಪ್ರದರ್ಶನ.

ವಿಶೇಷ ಕಾರ್ಯಕ್ರಮಗಳು

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ –ಹ್ಯಾಂಡ್‌ಲೂಮ್, ಕರಕುಶಲ, ಗ್ರಾಮೀಣ ಉತ್ಪನ್ನಗಳು, ಕೈಗಾರಿಕಾ ವಸ್ತುಗಳು ಮತ್ತು ಗೃಹೋಪಯೋಗಿ ವಸ್ತುಗಳ ಪ್ರದರ್ಶನ. ಪುಸ್ತಕ ಮತ್ತು ಕಲಾ ಪ್ರದರ್ಶನ, ಪ್ರೌಢಶಾಲೆ ವಿದ್ಯಾರ್ಥಿಗಳು ತಯಾರಿಸಿರುವ ಶೈಕ್ಷಣಿಕ ಮಾದರಿಗಳು. ವಿವಿಧ ಸಂಸ್ಥೆಗಳು, ಸಹಕಾರ ಸಂಘಗಳು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಮತ್ತು ಗುಡಿ ಕೈಗಾರಿಕೆಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ,

ಆರೋಗ್ಯ, ವೈದ್ಯಕೀಯ ಮತ್ತು ವಿಜ್ಞಾನ ಪ್ರದರ್ಶನ.

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 7.30ರವರೆಗೆ: ಕೃಷಿ ಮೇಳ, ಹನಿ ನೀರಾವರಿ ಮೂಲಕ ಭತ್ತದ ಬೆಳೆ ಕುರಿತು ಪ್ರಾತ್ಯಕ್ಷಿಕೆ, ಕೃಷಿ ಪರಿಕರಗಳ ಪ್ರದರ್ಶನ ಮತ್ತು ಮಾರಾಟ. ಸ್ಥಳೀಯ ಹಸು, ಕುರಿ,ಮೇಕೆ ಮತ್ತು ಕೋಳಿಗಳ ಪ್ರದರ್ಶನ. ವಿವಿಧ ಸಿರಿಧಾನ್ಯ ಮತ್ತು ಕಾಳುಗಳ ಪ್ರದರ್ಶನ ಮತ್ತು ಮಾರಾಟ, ವಿದೇಶಿ ಆಹಾರ ಪದಾರ್ಥಗಳಾದ ಚಿಯಾ ಮತ್ತು ತೇಪ್ ಪ್ರದರ್ಶನ.

ಜೆಎಸ್‌ಎಸ್ ಆಸ್ಪತ್ರೆ ಮತ್ತು ಕಿದ್ವಾಯಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್‌ನ ನುರಿತ ವೈದ್ಯರಿಂದ ಆರೋಗ್ಯ ತಪಾಸಣಾ ಶಿಬಿರ. ಫೆ.6ರಿಂದ 10ರವರೆಗೆ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ.

ಬಸ್ ಸೌಲಭ್ಯ, ನೇರ ಪ್ರಸಾರ

ಬಸ್ ಸೌಲಭ್ಯ: ವಿವಿಧ ತಾಲೂಕುಗಳು ಮತ್ತು ಜಿಲ್ಲೆಗಳಿಂದ ಸುತ್ತೂರು ಜಾತ್ರಾ ವಿಶೇಷವಾಗಿ ಸಾರಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಮಾಹಿತಿಗೆ ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು, ದೂ. 08221–232223, 232224 **ಜೆಎಸ್‌ಎಸ್ ಮಹಾವಿದ್ಯಾಪೀಠ. ದೂ.0821–2548212–122. https://www.youtube.com/@jssmhavidyapeetaonlineನಲ್ಲಿ ಸುತ್ತೂರು ಜಾತ್ರೆ ನೇರ ಪ್ರಸಾರ.**

ಮೈಸೂರಲ್ಲಿದೆ ಬೃಹತ್ ತಲೆ ಆಕೃತಿ...!?

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ವಿಶೇಷ ಮ್ಯೂಸಿಯಂ



ಮೈಸೂರಿನ ಮತ್ತೊಂದು ಆಕರ್ಷಣೆ...

ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಮುಖ ಆಕರ್ಷಣೆಗಳ ಸಾಲಿಗೆ 'ಆಯಿಷ್ ಮ್ಯೂಸಿಯಂ' ಸೇರ್ಪಡೆಗೊಳ್ಳಲಿದೆ. ಸಾರ್ವಜನಿಕರಿಗೆ, ಶಾಲಾ-ಕಾಲೇಜು ವಿದ್ಯಾರ್ಥಿಗಳ ನೆಚ್ಚಿನ ಆಕರ್ಷಣೆ ಇದಾಗಲಿದ್ದು, ವಾಕ್ ಮತ್ತು ಶ್ರವಣ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಪೂರಕ ಮಾಹಿತಿಯನ್ನು ಒದಗಿಸಲಿದೆ. ಮನುಷ್ಯನ ಮುಖದ ಆಕೃತಿಯಲ್ಲಿರುವ ಈ ಬೃಹತ್ ಮ್ಯೂಸಿಯಂ ಆಕರ್ಷಣೀಯವಾಗಿದ್ದು, ಬಹುತೇಕ ನಿರ್ಮಾಣ ಪೂರ್ಣಗೊಂಡಿದೆ. ಏಳು ಅಂತಸ್ತುಗಳುಳ್ಳ ಈ ಮ್ಯೂಸಿಯಂನಲ್ಲಿ ಲಿಫ್ಟ್ ವ್ಯವಸ್ಥೆ ಮಾಡಿದ್ದು, ಭೇಟಿ ನೀಡುವ ಪ್ರತಿಯೊಬ್ಬರಿಗೂ ವಿಶಿಷ್ಟ ಅನುಭವ ಹಾಗೂ ಉಪಯುಕ್ತ ಮಾಹಿತಿ ನೀಡಲಿದೆ.

> “ ಮೈಸೂರು ಮಾತ್ರವಲ್ಲದೆ ದೇಶಕ್ಕೆ ಚಿರಪರಿಚಿತವಾಗಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆಯಲು ಸಿದ್ಧವಾಗುತ್ತಿದೆ. ಮುಖದ ಆಕೃತಿಯಲ್ಲಿರುವ ವಾಕ್ ಮತ್ತು ಶ್ರವಣ ದೋಷಕ್ಕೆ ಸಂಬಂಧಿಸಿದ ಮೊಟ್ಟ ಮೊದಲ ವಸ್ತು ಸಂಗ್ರಹಾಲಯವು ಆಯಿಷ್ ಆವರಣದಲ್ಲಿ ಎಲ್ಲರ ಆಕರ್ಷಣೆಯಾಗಲಿದೆ. ಈಗಾಗಲೇ ಮ್ಯೂಸಿಯಂ ಯಾವಾಗ ಪೂರ್ಣಗೊಳ್ಳಲಿದೆ ಎಂದು ವಿಚಾರಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸ್ಪರ್ಶಿಸಿ, ಅನುಭವಿಸಿ ತಿಳಿಯುವ ಅವಕಾಶ ಸದ್ಯದಲ್ಲೇ ದೊರೆಯಲಿದೆ.
>
> -ಡಾ.ಎಂ.ಪುಷ್ಪಾವತಿ, ನಿರ್ದೇಶಕರು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ

● **ಮೋಹನ್ ಕಾಯಕ**

ಮೈಸೂರು, ಫೆ.5–ವಾಕ್ ಮತ್ತು ಶ್ರವಣ ದೋಷಕ್ಕೆ ಸಂಬಂಧಿಸಿದ ದೇಶದ ಮೊಟ್ಟ ಮೊದಲ ವಸ್ತು ಸಂಗ್ರಹಾಲಯ(ಮ್ಯೂಸಿಯಂ) ಸಾಂಸ್ಕೃತಿಕ ನಗರಿ ಮೈಸೂರಿಗೆ ಮತ್ತೊಂದು ಹಿರಿಮೆಯಾಗಿದ್ದು, ಇದರ ಪ್ರತೀಕ ಬೃಹದಾಕಾರದ ತಲೆ ಆಕೃತಿಯತ್ತ ಕಣ್ಣಾಡಿಸಿದವರ ಎದೆ ಝುಲ್ಲೆನಿಸುವಂತಿದೆ...!

ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯ ಆವರಣದಲ್ಲಿ ಪ್ರಪಂಚದಲ್ಲೇ ಮೊದಲು ವಾಕ್ ಮತ್ತು ಶ್ರವಣ ದೋಷಕ್ಕೆ ಕಾರಣವಾಗುವ ಸಂಪೂರ್ಣ ಮಾಹಿತಿಯನ್ನೊಳಗೊಂಡ ಪ್ರಾಯೋಗಿಕ ವಸ್ತುಸಂಗ್ರಹಾಲಯವು ಮನುಷ್ಯನ ತಲೆಯ ಆಕೃತಿಯಲ್ಲೇ ರೂಪುಗೊಂಡಿದ್ದು, ಅತ್ಯಂತ ಆಕರ್ಷಕವಾಗಿ ಸೆಳೆಯುತ್ತಿದೆ.

ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮ್ಯೂಸಿಯಂನಲ್ಲಿ ಅಂತಿಮ ಹಂತದ ಕಾಮಗಾರಿ ಬಾಕಿ ಇದ್ದು, ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. 100ಕ್ಕೂ ಹೆಚ್ಚು ಅಡಿ ಎತ್ತರದ ಬೃಹತ್ ತಲೆಯ ಆಕೃತಿಯ ಮ್ಯೂಸಿಯಂ ನೆಲದಿಂದ ಬರೋಬ್ಬರಿ 7 ಮಹಡಿಗಳನ್ನು ಒಳಗೊಂಡಿದೆ. ಹಾಗೆಯೇ ಸುಮಾರು 40 ಅಡಿ ಹಗಲವಿದ್ದು, ಮನುಷ್ಯನ ತದ್ರೂಪದಂತೆಯೇ ಕಣ್ಣು, ಕಿವಿ, ಮೂಗು, ಬಾಯಿಯ ವಿನ್ಯಾಸವನ್ನು ಆಕರ್ಷಣೀಯವಾಗಿ ರೂಪಿಸಲಾಗಿದೆ.

ಮ್ಯೂಸಿಯಂನಲ್ಲಿ 1965ರಂದು ಮೈಸೂರಲ್ಲಿ ಸ್ಥಾಪನೆಯಾದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಇತಿಹಾಸ, ಬೆಳೆದುಬಂದ ಹಾದಿಯ ಚಿತ್ರಣವನ್ನು ತಿಳಿಸುವುದರ ಜೊತೆಗೆ ಮಾತನಾಡುವಾಗ ಬಾಯಿಯಲ್ಲಿ ಆಗುವ ಸಮಸ್ಯೆ, ಸೀಳು ತುಟಿ, ಧ್ವನಿ ಕ್ಯಾನ್ಸರ್, ಧ್ವನಿ ಏರಿಳಿತ ಸೇರಿದಂತೆ ಹಲವು ಸಮಸ್ಯೆಗಳ ಪ್ರತ್ಯಕ್ಷ ಪ್ರಾತ್ಯಕ್ಷಿಕೆಗಳು ಇರಲಿದೆ. ಹಾಗೆಯೇ ಮೆದುಳಿನ ಬೆಳವಣಿಗೆ, ಸಂವಹನ ನಡೆಸುವಾಗ ಮೆದುಳು ಯಾವ ರೀತಿ ಪೂರಕವಾಗಿ ಕೆಲಸ ಮಾಡಲಿದೆ ಎಂಬುದರ ಜೊತೆಗೆ ಮೆದುಳಿನ ಸಮಸ್ಯೆಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದಾಗಿದೆ.

ಕಿವಿಯ ರಚನೆ ಮತ್ತು ಕಿವಿಯೊಳಗಾಗುವ ತೊಂದರೆಗಳು, ಶಬ್ದ ಕೇಳುವಾಗ ಮೂಳೆಗಳು ಕಂಪಿಸುವ ಬಗ್ಗೆ, ತಮಟೆಯ ಕಾರ್ಯ, ಹೊರ ಮೈ ಬೆಳವಣಿಗೆ, ಗುಗ್ಗೆಯ ಸಮಸ್ಯೆಗಳ ಬಗ್ಗೆ ಪ್ರಾತ್ಯಕ್ಷಿಕೆ, ಕಿವಿಯ ಹೊರಗಿನಿಂದ ಕಿವಿಯೊಳಗಿನ ಕಾಕ್ಲಿಯಾ (ಇನ್ನರ್ ಇಯರ್)ವರೆಗೆ ನಡೆಯುವ ಚಟುವಟಿಕೆ, ಕ್ಲಾಕಿಯಾದಿಂದ ಮೆದುಳಿಗೆ ಸಂಪರ್ಕ ಕಲ್ಪಿಸುವ ನರಗಳು, ಧ್ವನಿಯಲ್ಲಾಗುವ ಏರಿಳಿತ, ಧ್ವನಿಯ ಕ್ವಾಲಿಟಿಯಲ್ಲಿನ ವ್ಯತ್ಯಾಸ ಸೇರಿದಂತೆ ಕಿವಿಯ ಸಂಪೂರ್ಣ ರಕ್ಷಣೆ ಕುರಿತು ಮಾಹಿತಿ ದೊರೆಯಲಿದೆ.


ಮೆದುಳಿನ ಕಾರ್ಯಚಲನೆ: ಕಿವಿಯಿಂದ ಕೇಳಿಸಿಕೊಂಡು ಅರ್ಥಮಾಡಿಕೊಳ್ಳುವುದು, ನೋಡಿ ಅರ್ಥಮಾಡಿಕೊಳ್ಳುವುದು, ಮುಟ್ಟಿ ಮತ್ತು ಮಾತನಾಡಿ ಅರ್ಥಮಾಡಿಕೊಳ್ಳುವ ವೇಳೆ ಮೆದುಳಿನ ಕಾರ್ಯಚಲನೆ ಕುರಿತು ಪೂರ್ಣ ಮಾಹಿತಿ ಸಂಗ್ರಹಾಲಯದಲ್ಲಿರಲಿದೆ. ಚೆನ್ನಾಗಿರುವ ಹಾಗೂ ತೊಂದರೆಗೊಳಗಾದ ಮೆದುಳಿನಲ್ಲಿ ಉಂಟಾಗುವ ಕಾರ್ಯಚಲನೆಯನ್ನು ಪ್ರತ್ಯಕ್ಷವಾಗಿಯೇ ತೋರಿಸಲಾಗುತ್ತದೆ. ಮನುಷ್ಯರ ನಿಜವಾದ ಮೆದುಳಿನ ಜೊತೆಗೆ ಇನ್ನಿತರೆ ಪ್ರಾಣಿ-ಪಕ್ಷಿಗಳ ಮೆದುಳನ್ನು ಈ ಮ್ಯೂಸಿಯಂನಲ್ಲಿ ನಾವು ನೋಡಬಹುದು.

ಪೂರ್ಣ ಮಾಹಿತಿ: ವಾಕ್ ಮತ್ತು ಶ್ರವಣ ದೋಷಕ್ಕೆ ಸಂಬಂಧಿಸಿದ ವಿಶ್ವದಲ್ಲೇ ಮೊಟ್ಟ ಮೊದಲ ಮ್ಯೂಸಿಯಂನಲ್ಲಿ ಕಿವಿ, ಬಾಯಿ ಮತ್ತು ಮೆದುಳಿನ ಕಾರ್ಯ ಚಟುವಟಿಕೆಗಳ ಪೂರ್ಣ ಮಾಹಿತಿ ದೊರಕಲಿದೆ. ಮನುಷ್ಯ, ಪ್ರಾಣಿ-ಪಕ್ಷಿಗಳ ಧ್ವನಿ ತಂತುಗಳ ಮೊಡೆಲ್‌ಗಳು, ಮನುಷ್ಯ ಹಾಗೂ ಪ್ರಾಣಿಗಳ ಮೆದುಳಿಗೆ ಏನು ವ್ಯತ್ಯಾಸ. ಮನುಷ್ಯನ ಮೆದುಳಿನಲ್ಲಿರುವ ಗುಣಮಟ್ಟವೇನು ಎಂಬ ಸಮಗ್ರ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಮಾನವ ತಳಿಶಾಸ್ತ್ರ: ವಸ್ತು ಸಂಗ್ರಹಾಲಯದಲ್ಲಿ ವಾಕ್ ಮತ್ತು ಶ್ರವಣ ದೋಷದ ಜೊತೆಗೆ ಮಾನವ ತಳಿಶಾಸ್ತ್ರದ ಪರಿಚಯವನ್ನು ಮಾಡಿಕೊಡಲಾಗುವುದು. ಮನುಷ್ಯನ ಹುಟ್ಟು, ಬೆಳವಣಿಗೆ, ಮಾತನಾಡುವುದನ್ನು ಕಲಿತದ್ದು ಹೇಗೆ? ಮೆದುಳಿನ ಬೆಳವಣಿಗೆ ಹೇಗಾಗುತ್ತದೆ. ಯಾವ ಯಾವ ಹಂತದಲ್ಲಿ ಮನುಷ್ಯನ ದೇಹದ ಅಂಗಗಳು ರಚನೆಯಾಗುತ್ತವೆ ಎಂಬಿತ್ಯಾದಿ ಸವಿವರಗಳನ್ನು ತಿಳಿಯಬಹುದಾಗಿದೆ.

ಒಂದೂವರೆ ವರ್ಷ: ಮ್ಯೂಸಿಯಂನಲ್ಲಿ ಪ್ರಾತ್ಯಕ್ಷಿಕೆ, ಧ್ವನಿ ಮತ್ತು ದೃಶ್ಯದ ಮೂಲಕ ಮಾಹಿತಿಯನ್ನು ನೀಡುವ ಯೋಜನೆಯನ್ನು ಸಂಸ್ಥೆ ಮಾಡಿದೆ. ಒಳ ಪ್ರವೇಶಿಸುವ ವೀಕ್ಷಕನು ವಾಕ್ ಮತ್ತು ಶ್ರವಣಕ್ಕೆ ಸಂಬಂಧಿಸಿದ ಅಗತ್ಯ ಮಾಹಿತಿಯನ್ನು ಪರಿಣಾಮಕಾರಿಯಾಗಿ ತಿಳಿಯುವ ವ್ಯವಸ್ಥೆಗಳನ್ನು ಮಾಡಲಾಗುವುದು. ಹೊಸ ಹೊಸ ಆಲೋಚನೆಗಳನ್ನೂ ಸೇರಿಸಲಾಗುತ್ತಿದೆ. ಸಂಪೂರ್ಣ ಚಿತ್ರಣ ದೊರೆಯಲು ಕನಿಷ್ಠ ಒಂದು ವರ್ಷ ಕಾಯಬೇಕಾಗಬಹುದು. ಎಂದು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್) ನಿರ್ದೇಶಕರಾದ ಡಾ.ಎಂ. ಪುಷ್ಪಾವತಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಡ್ವಾಣಿಗೆ ಭಾರತ ರತ್ನ: ಸ್ವಾಗತಾರ್ಹ



ಮೈಸೂರು, ಫೆ. 5– ಬಿಜೆಪಿಯ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಅವರಿಗೆ ಕೇಂದ್ರ ಸರ್ಕಾರ ದೇಶದ ಪ್ರತಿಷ್ಠಿತ ಪುರಸ್ಕಾರವಾದ ಭಾರತ ರತ್ನ ಘೋಷಿಸಿದ್ದರಿಂದ ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ದೇಶದೆಲ್ಲೆಡೆ ಬಿಜೆಪಿಯ ಹಿಂದುತ್ವದ ವಿಶೇಷಚೇತನವನ್ನು ಮೂಡಿಸಿರುವ ಎಲ್.ಕೆ.ಅಡ್ವಾಣಿ ಅವರು ನಿಜವಾಗಿಯೂ ಅಭಿನಂದನಾರ್ಹರು. ಅವರ ಪರಿಶ್ರಮ, ಹೋರಾಟ ಮತ್ತು ಜನಜಾಗೃತಿ ಜಾತ್ರೆಯ ಪರಿಣಾಮವಾಗಿ ಅಯೋಧ್ಯೆಯ ಶ್ರೀರಾಮಜನ್ಮ ಭೂಮಿ ಸ್ಥಳದಲ್ಲಿ ಮಂದಿರ ನಿರ್ಮಾಣವಾಗಿ ಬಾಲರಾಮ ದೇವರ ಮೂರ್ತಿ ಪ್ರತಿಷ್ಠಾಪನೆ ಆಗಿದೆ. ಅಂತಹ ಉತ್ತಮ ಸಾಧಕರಿಗೆ ದೇಶದ ಅತ್ಯುನ್ನತ ಗೌರವ ಲಭಿಸಿರುವುದು ಎಲ್ಲರಿಗೂ ಹೆಮ್ಮೆಯ ವಿಷಯ ಎಂದು ಹೇಳಿದ್ದಾರೆ.



ಹುಲ್ಲಹಳ್ಳಿ ಹಾಲು ಉತ್ಪಾದಕರ ಸಹಕಾರಿ ಸಂಘದ ಚುನಾವಣೆಯಲ್ಲಿ ಎಚ್ ಎಸ್ ಮಂಜುನಾಥ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ನಂಜುಂಡ ನಾಯಕ ಆಯ್ಕೆಯಾಗಿದ್ದಾರೆ.

ಆರ್.ಐಶ್ವರ್ಯಗೆ ಪಿಹೆಚ್.ಡಿ



ಮೈಸೂರು, ಫೆ. 5– ಡಾ. ಕೃಷ್ಣ ಹೊಂಬಾಳ್ ಅವರ ಮಾರ್ಗದರ್ಶನದಲ್ಲಿ ಆರ್. ಐಶ್ವರ್ಯ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮೈಸೂರು ಬಿಜೆಪಿ ಯುವ ಮೋರ್ಚಾ ವತಿಯಿಂದ ಪ್ರತ್ಯೇಕ ರಾಷ್ಟ್ರ ವಿಭಜನೆಯ ಕಿಡಿ ಹೊತ್ತಿಸಿದ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ವಿರುದ್ಧ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಸಂಸದ ಡಿಕೆ ಸುರೇಶ್ ಅವರನ್ನು ಬೆಂಗಳೂರು ಗ್ರಾಮಾಂತರದಿಂದ ಗಡಿಪಾರು ಮಾಡಬೇಕು. ರಾಷ್ಟ್ರ ವಿರೋಧಿ ಹೇಳಿಕೆ ನೀಡಿರುವ ಅವರ ವಿರುದ್ಧ ರಾಷ್ಟ್ರದ್ರೋಹದ ಕೇಸ್ ದಾಖಲಿಸಬೇಕು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಅಶಾಂತತೆಯನ್ನು ಉಂಟುಮಾಡುವ ಹೇಳಿಕೆಗಳನ್ನು ನೀಡುವುದು ಕಾಂಗ್ರೆಸ್ ನಾಯಕರ ಪರಿಪಾಠ ಎಂದು ಕಿಡಿಕಾರಿದರು. ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ್, ಎಂ.ಯು.ಸುಬ್ಬಯ್ಯ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಸಂತೋಷ್.ಕುಮಾರ್, ಭರತ್‌ಕುಮಾರ್, ಮುಖಂಡರಾದ ಪುನೀತ್‌ಕುಮಾರ್, ರಮೇಶ, ಸಚಿನ್, ಕೆಂಚಮಾದು, ಕಾರ್ತಿಕ್ ಮರಿಯಪ್ಪ, ಧನರಾಜ್, ವೇದಮೂರ್ತಿ, ಹೇಮಂತ್‌ಗೌಡ, ಮಹಿಳಾ ಮೋರ್ಚಾದ ಪದಾಧಿಕಾರಿಗಳು ಇನ್ನಿತರರು ಭಾಗವಹಿಸಿದ್ದರು.

ಶ್ರೀ ಶಿವಕುಮಾರ ಶ್ರೀಗಳಿಗೆ ಭಾರತ ರತ್ನ ನೀಡಲಿ

ಮೈಸೂರು, ಫೆ.5–ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿ ಅವರಿಗೆ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಭಾರತ ರತ್ನ' ನೀಡಿ ಗೌರವಿಸಿರುವ ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಆದರೆ ತುಮಕೂರಿನ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಗೂ ಈ ಗೌರವ ನೀಡಬೇಕಿತ್ತು ಎಂದು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಅಭಿಪ್ರಾಯಪಟ್ಟಿದ್ದಾರೆ.



ಲಕ್ಷಾಂತರ ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ತ್ರಿವಿಧ ದಾಸೋಹಿ ಎಂದೇ ಜನಪ್ರಿಯರಾದ ಶ್ರೀಗಳು ಜಾತಿ ಮತ್ತು ಧರ್ಮ ಲೆಕ್ಕಿಸದೆ ಮಾನವ ಸೇವೆ ಮಾಡಿದ ಮಹನೀಯರು. ಅಂತಹವರಿಗೆ ಸರ್ಕಾರ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಲೇಬೇಕು. ಶಿವಕುಮಾರ ಸ್ವಾಮೀಜಿ ಅವರಿಗೆ ಭಾರತ ರತ್ನ ನೀಡುವಂತೆ ರಾಜ್ಯ ಸರ್ಕಾರವು ಎರಡು ಬಾರಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಮೈಸೂರಿನ ಸಮಸ್ತ ಜನತೆಯ ಪರವಾಗಿ ಸಿದ್ಧಗಂಗಾ ಶ್ರೀಗಳಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿ ಘೋಷಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.


ಬಿಜೆಪಿಯಲ್ಲಿ ಗಂಡಸರಿದ್ದರೆ ರಾಜ್ಯದ ತೆರಿಗೆ ಪಾಲಿಗೆ ದನಿ ಎತ್ತಲಿ

ರಾಮನಗರ, ಫೆ.5– ನಮ್ಮ ಪಾಲಿನ ಅನುದಾನಕ್ಕಾಗಿ ಕಾಂಗ್ರೆಸ್ ನಡೆಸುತ್ತಿರುವ ಹೋರಾಟ ನೋಡಿಯಾದರೂ, ಬಿಜೆಪಿಯಲ್ಲಿ ಗಂಡಸರಿದ್ದರೆ ಅನ್ಯಾಯದ ವಿರುದ್ಧ ದನಿ ಎತ್ತಲಿ. ಬಿಜೆಪಿ ಸಚಿವರು ಹಾಗೂ ಸಂಸದರು, ದೆಹಲಿಗೆ ಹೋಗಿ ಟಿ.ಎ ಮತ್ತು ಡಿ.ಎ ತಗೊಂಡು ಬರ್ತಾರಷ್ಟೆ, ಇವರೆಲ್ಲಾ ಷೋ ಪೀಸ್‌ಗಳು. ತಮ್ಮ ಹಕ್ಕಿಗಾಗಿ ತಮಿಳುನಾಡು ಸಂಸದರು ಹೇಗೆ ದನಿ ಎತ್ತುತ್ತಾರೆ ಎಂಬುದನ್ನು ನೋಡಿ ಕಲಿಯಲಿ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಇಂದಿಲ್ಲಿ ವ್ಯಂಗ್ಯವಾಡಿದರು.



ಎಚ್.ಸಿ.ಬಾಲಕೃಷ್ಣ

ತಾಲೂಕಿನ ನಾಗರಕಲ್ಲುದೊಡ್ಡಿ ಗ್ರಾಮದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರಕ್ಕೆ ಹೆಚ್ಚು ತೆರಿಗೆ ಪಾವತಿಸುವ ದೇಶದ ಎರಡನೇ ರಾಜ್ಯ ನಮ್ಮದು. ಹೀಗಿದ್ದರೂ, ನಮಗೆ ಕೊಡಬೇಕಾದ ಅನುದಾನ ಕೊಡುತ್ತಿಲ್ಲ. ರಾಜ್ಯದ ಬಿಜೆಪಿ ಸಚಿವರು ಮತ್ತು ಸಂಸದರಿಗೆ ಪ್ರಧಾನಿ ಮೋದಿ ಅವರ ಮುಂದೆ ನಿಲ್ಲುವುದಕ್ಕೂ ಆಗುವುದಿಲ್ಲ. ವೈಯಕ್ತಿಕ ವರ್ಚಸ್ಸಿಲ್ಲದ ಅವರು, ಕೇವಲ ಮೋದಿ ಹೆಸರಲ್ಲಿ ಗೆಲ್ಲುತ್ತಾರೆ ಎಂದು ವಾಗ್ದಾಳಿ ನಡೆಸಿದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಚಿತ್ರವನ್ನು ಟ್ವಿಟ್ಟರ್‌ನಲ್ಲಿ ಹಂಚಿಕೊಳ್ಳುವ ಮೂಲಕ ಶಾಸಕ ಹೆಚ್.ಸಿ.ಬಾಲಕೃಷ್ಣ ಹೇಳಿಕೆಗೆ ತಿರುಗೇಟು ನೀಡಿದ್ದಾರೆ. ಇಂದಿರಾಗಾಂಧಿ ಕುರ್ಚಿಯೊಂದರಲ್ಲಿ ಕುಳಿತುಕೊಂಡಿರುವುದು. ಉಳಿದೆಲ್ಲ ನಾಯಕರು ಅವರ ಸುತ್ತ ನಿಂತಿರುವುದು.

ಬಿಜೆಪಿಯವರು ದನಿ ಕಳೆದುಕೊಂಡಿರುವುದರಿಂದ ಅನುದಾನಕ್ಕಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ಇದರ ಅರ್ಥ ಬಿಜೆಪಿಯಲ್ಲಿ ಗಂಡಸರಿಲ್ಲ ಎಂದರ್ಥ. ಅನುದಾನದ ವಿಷಯದಲ್ಲಿ ಅನ್ಯಾಯ ಸರಿಪಡಿಸದಿದ್ದರೆ ಪ್ರತ್ಯೇಕ ದೇಶದ ದನಿ ಎಳುತ್ತದೆ ಎಂದು ಸಂಸದ ಡಿ.ಕೆ.ಸುರೇಶ್ ಹೇಳಿರುವುದನ್ನು, ಬಿಜೆಪಿಯವರು ತಿರುಚಿದ್ದಾರೆ. ಇಷ್ಟಕ್ಕೂ ಅವರು ಹೇಳಿರುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದರು.

ದೇಶ ವಿಭಜನೆಯಾಗಬೇಕು ಎಂದು ಅವರು ಹೇಳಿಲ್ಲ. ದೇಶ ಒಡೆಯುವ ಉದ್ದೇಶವೂ ಹೇಳಿಕೆಯಲ್ಲಿಲ್ಲ. ದೇಶ ಕಟ್ಟಿದ್ದು ಕಾಂಗ್ರೆಸ್ ಪಕ್ಷ. ಬಿಜೆಪಿಯವರು ಈಗ ಅರಚಿಕೊಳ್ಳುತ್ತಿದ್ದಾರೆ. ನಮಗಾಗಿರುವ ಅನ್ಯಾಯಕ್ಕೆ ಹೋರಾಟ ಮಾಡಬೇಕಿದೆ. ಈ ವಿಷಯದಲ್ಲಿ ಬಿಜೆಪಿಯವರು ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿಕೂಟದಲ್ಲಿ ಸುರೇಶ್ ಅವರನ್ನು ಎದುರಿಸುವಂತಹ ಅಭ್ಯರ್ಥಿ ಇಲ್ಲ. ಅವರ ವಿರುದ್ಧ ಮೈತ್ರಿ ತಂತ್ರ ಫಲ ನೀಡುವುದಿಲ್ಲ. ಬೇಕಿದ್ದರೆ ಎಚ್.ಡಿ.ಕುಮಾರಸ್ವಾಮಿ ಮತ್ತು ಸಿ.ಪಿ. ಯೋಗೇಶ್ವರ್ ಸ್ಪರ್ಧೆ ಮಾಡಲಿ. ಆನಂತರ ಮಾತನಾಡೋಣ. ಸಂಸದರು ಜನಸಾಮಾನ್ಯರ ಜೊತೆ ಬೆರೆತು ಹೇಗೆ ಕೆಲಸ ಮಾಡಬಹುದು ಎಂಬುದನ್ನು ಸುರೇಶ್ ತೋರಿಸಿ ಕೊಟ್ಟಿದ್ದಾರೆ ಎಂದು ಪ್ರತಿಕ್ರಿಯಿಸಿದರು.

ನಕ್ಕರೆ ಅದೇ ಸ್ವರ್ಗ

ಅಪ್ಪ : ನಿನ್ನ ಮಾರ್ಕ್ಸ್ ಇಷ್ಟು ಯಾಕೆ ಕೆಟ್ಟದಾಗಿ ಬಂದಿವೆ ಈ ಸಲ ಮಗನೇ?

ಮಗ : ಒಳ್ಳೆಯವರಿಗೆ ಯಾವಾಗಲೂ ಕೆಟ್ಟದ್ದೇ ಆಗತ್ತೈತಿ ಅಪ್ಪಾ ಏನ್ ಮಾಡೋದು...!?

ಮೈಸೂರು ಮಿತ್ರ

ಮಂಗಳವಾರ, 6 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

■ ಶ್ರೀಚಾಮರಾಜೇಂದ್ರ ವೃತ್ತದ ಸುತ್ತಲಿನ ಅವ್ಯವಸ್ಥೆಯ ವ್ಯಥೆ!

ಮಾನ್ಯರೆ,



ಮೈಸೂರಿನ ಹೃದಯಭಾಗದಲ್ಲಿರುವ ಶ್ರೀಕೃಷ್ಣರಾಜೇಂದ್ರ ವೃತ್ತದ ನಂತರ ನಗರದ ಸೌಂದರ್ಯವನ್ನು ಹೆಚ್ಚಿಸಿರುವ ಮತ್ತೊಂದು ವೃತ್ತ ಶ್ರೀಚಾಮರಾಜೇಂದ್ರ ವೃತ್ತ. ಇಂದಿಗೂ ಪ್ರವಾಸಿಗರ ಕಣ್ಮನ ಸೆಳೆಯುತ್ತಾ ಅವರು ಕ್ಲಿಕ್ಕಿಸುವ ಫೋಟೋಗಳಿಗೆ ಸೆಲ್ಫಿಸ್ಪಾಟ್ ಆಗಿರುವುದಲ್ಲದೆ ನವಜೋಡಿಗಳಿಗೆ ಪೂರ್ವ ವಿವಾಹದ ಫೋಟೋಗಳನ್ನು ವಿವಿಧ ಭಂಗಿಗಳಲ್ಲಿ ಸೆರೆಹಿಡಿಯಲು ಜೀವಂತ ಸಾಕ್ಷಿಯಾಗಿ ನಿಂತಿರುವ ಪ್ರತಿಮೆಯಾಗಿದೆ. ಇದನ್ನು ಇಂಗ್ಲೆಂಡಿನಲ್ಲಿ ಬಿಳಿ ಇಟಾಲಿಯನ್ ಮಾರ್ಬಲ್‌ನಿಂದ ತಯಾರಿಸಿ ಲಂಡನ್ ನಗರದ ರಾಯಲ್ ಅಕಾಡೆಮಿಯಲ್ಲಿ ಪ್ರದರ್ಶನಕ್ಕಿಟ್ಟು ನಂತರ ಮೈಸೂರಿನಲ್ಲಿ ಸ್ಥಾಪಿಸಲಾಗಿದೆ. ಭಾರತದಲ್ಲಿ ಹಲವಾರು ಪ್ರತಿಮೆಗಳನ್ನು ಕಾರ್ಯಗತಗೊಳಿಸಲು ಉಸ್ತುವಾರಿ ವಹಿಸಿದ ವಿಲಿಯಮ್ ರಾಬರ್ಟ್ ಕಾಲ್ಬನ್‌ರವರು ಬೆಂಗಳೂರಿನ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಪಾರ್ಕ್) ಸೆಂಟ್ರಲ್ ಲೈಬ್ರರಿ ಎದುರು ದಿವಾನ್ ಕೆ.ಶೇಷಾದ್ರಿ ಅಯ್ಯರ್ ಪ್ರತಿಮೆ ಹಾಗೂ 1920ರಲ್ಲಿ ಮೈಸೂರಿನ ಅರಮನೆಯ ಬಲರಾಮ ದ್ವಾರದ ಎದುರು ಶ್ವೇತವರ್ಣದ ಮಾರ್ಬಲ್ಲಿನಲ್ಲಿ ಕೆತ್ತಿದ ಶ್ರೀಚಾಮರಾಜೇಂದ್ರ ಒಡೆಯರ್‌ರವರ ಪ್ರತಿಮೆಯನ್ನು ಸ್ಥಾಪಿಸಿದರು. ಇದು ನಗರದ ಐತಿಹಾಸಿಕ ಸ್ಮಾರಕವಾಗಿರುವುದರಿಂದ ನೂರಾರು ವರ್ಷ ಕಾಪಿಟ್ಟುಕೊಂಡು, ಮೈಸೂರನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಿ ವಿಶ್ವ ಭೂಪಟದಲ್ಲಿ ಸಾಂಸ್ಕೃತಿಕ ನಗರವನ್ನಾಗಿಸಿದ ಮೈಸೂರು ಅರಸರನ್ನು ಮುಂದಿನ ಜನಾಂಗವು ಸ್ಮರಿಸಬೇಕಾಗಿದೆ.

ಇಷ್ಟೆಲ್ಲಾ ಪೀಠಿಕೆಯ ಉದ್ದೇಶ ವೃತ್ತದ ಸುತ್ತಲಿನ ತಡೆಗೋಡೆಯ ದುಸ್ಥಿತಿಯನ್ನು ತಿಳಿಸುವುದಾಗಿದೆ. ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುವ ಈ ಸ್ಥಳದಲ್ಲಿ ಮುರಿದುಬಿದ್ದಿರುವ ಹೊರಭಾಗದ ತಡೆಗೋಡೆ, ಇತ್ತೀಚೆಗೆ ನಿರ್ಮಿಸಿದ ಕಲ್ಲಿನ ಕೈಪಿಡಿಗಳು ಹಾಗೂ ನೆಲಹಾಸುಗಳ ಸ್ಥಿತಿಯಿಂದಾಗಿ ಮುಜುಗರಕ್ಕೆ ಒಳಪಡುವ ಸ್ಥಿತಿ ಹೀನವಾಗಿದೆ. ಇಲಿ–ಹೆಗ್ಗಣಗಳು ಓಡಾಡುವ ತಡೆಗೋಡೆಯ ಹಿಂಭಾಗ ಸುತ್ತಲೂ ಕಸದ ರಾಶಿ ಯಾವಾಗಲೂ ಬಿದ್ದಿರುತ್ತದೆ ಮತ್ತು ರಾಜ್‌ಕುಮಾರ್ ಪಾರ್ಕಿನ ಕಡೆ ನಿಂತರೆ ಚರಂಡಿಯ ಕೆಟ್ಟವಾಸನೆ ಮೂಗಿಗೆ ಬಡಿಯುವುದು. ಅಲ್ಲಿ ನಿಲ್ಲಿಸುವ ಟಾಂಗಾಗಳ ಕುದುರೆಗಳ ಮಲ–ಮೂತ್ರದ ವಾಸನೆಯೂ ಪ್ರವಾಸಿಗರ ಮೂಗಿಗೆ ಬಡಿಯುತ್ತದೆ. ಶ್ರೀಚಾಮರಾಜೇಂದ್ರ ವೃತ್ತವು ಇಂತಹ ಕೆಟ್ಟ ಸ್ಥಿತಿಯಿಂದ ಹೊರಬರುವುದಕ್ಕೆ ಸಂಬಂಧಿಸಿದವರು ಮನಸ್ಸು ಮಾಡಿ, ಮೈಸೂರಿಗರನ್ನು ಮುಜುಗರದಿಂದ ಪಾರುಮಾಡುವರೇ ಎಂದು ಕಾದು ನೋಡೋಣ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

■ ಹೆಚ್‌ಡಿಕೆ ಅವಳಿ ದೋಣಿ ಯಾನ ಸಾಧ್ಯವೇ?

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಧಾನಸಭೆಯ ಚುನಾವಣೆ ನಂತರ ಗೊಂದಲಕ್ಕೆ ಸಿಲುಕಿರುವುದು ಸುಳ್ಳಲ್ಲ. ಜಾತ್ಯಾತೀತ ನಿಲುವಿನೊಂದಿಗೆ ಸ್ವತಂತ್ರವಾಗಿ ಜೆಡಿಎಸ್ ಮುನ್ನಡೆಸಬೇಕೋ ಅಥವಾ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡು ಹೋಗಬೇಕೋ ಎಂಬುದು ಇವರ ದ್ವಂದ್ವ ನಿಲುವು. ಏಕೆಂದರೆ ಪಕ್ಷದಲ್ಲಿ ಈಗ ಮೊದಲಿನಂತೆ ಸಂಘಟನೆ ಇಲ್ಲ. ಆದ್ದರಿಂದ ರಾಜಕೀಯ ನೆಲೆಗಾಗಿ ಬಿಜೆಪಿಯ ಸಖ್ಯ ಅನಿವಾರ್ಯವಾದರೂ ಎರಡು ಪಕ್ಷಗಳ ನಿಲುವು ಭಿನ್ನವಾಗಿವೆ. ಜೆಡಿಎಸ್‌ನದ್ದು ಜಾತ್ಯತೀತ ನಿಲುವಾದರೆ, ಬಿಜೆಪಿಯದ್ದು ಅದರ ವಿರುದ್ಧದ ನಿಲುವು. ಹೀಗಿರುವಾಗ ಲೋಕಸಭಾ ಚುನಾವಣೆ ಎದುರಿಸುವುದು ಹೇಗೆ ಎಂಬುದೇ ಚಿಂತೆ. ಕುಮಾರಸ್ವಾಮಿ ಸಿಎಂ ಆದಾಗ ಹಸಿರು ಶಾಲು ಹಾಕಿಕೊಂಡು ರೈತಪರ ಎಂಬುದಾಗಿ ಗುರುತಿಸಿಕೊಂಡರು. ನಂತರ ಮೋದಿ ಮೆಚ್ಚಿಸಲೋ ಅಥವಾ ಬಿಜೆಪಿ ಸೇರ್ಪಡೆಯಾಗುವುದಕ್ಕೊ ಅಥವಾ ಹೊಂದಾಣಿಕೆಗೋ ಗೊತ್ತಿಲ್ಲ. ಕೆರಗೋಡು ಸಂಘರ್ಷದಲ್ಲಿ ದಿಢೀರ್ ಕೇಸರಿ ಶಾಲು ಹಾಕಿಕೊಂಡು ಫೀಲ್ಡ್‌ಗೆ ಇಳಿದಿರುವುದು ಆಶ್ಚರ್ಯವಾಗಿದೆ. ಇದಕ್ಕೆ ಸಂಬಂಧಿಸಿದಂತೆ ದೊಡ್ಡಗೌಡರು ಬೇಸರ ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಅವಳಿ ದೋಣಿ ಯಾನ ಮಾಡುತ್ತಿರುವ ಕುಮಾರಸ್ವಾಮಿ ಯಾವ ರೀತಿ ದಡ ಸೇರುತ್ತಾರೋ ಕಾದು ನೋಡಬೇಕು.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

■ ಈ ಬಾರಿಯ ಮೌಲ್ಯಾಂಕನ ಪರೀಕ್ಷೆ ಯಶಸ್ವಿಯಾಗಲಿ!

ಮಾನ್ಯರೆ,

ವಿದ್ಯಾರ್ಥಿಗಳ ಕಲಿಕಾ ಸಾಧನ ಮಟ್ಟವನ್ನು ಸಮೀಕ್ಷೆ ಮಾಡುವ ಉದ್ದೇಶದಿಂದ 2023–24ನೇ ಸಾಲಿನಲ್ಲಿ ಅಂದರೆ ಈ ಬಾರಿ 5, 8 ಹಾಗೂ 9ನೇ ತರಗತಿಯ ಮಕ್ಕಳಿಗೆ ರಾಜ್ಯಸರ್ಕಾರ ಈ ಮೌಲ್ಯಾಂಕನ ಪರೀಕ್ಷೆ ನಡೆಸುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ರಾಜ್ಯ ಪಠ್ಯಕ್ರಮ ಬೋಧಿಸುತ್ತಿರುವ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳು ಮುಂದಿನ ತಿಂಗಳು ಮಾರ್ಚ್ 11 ರಿಂದ ಈ ಮೌಲ್ಯಾಂಕನ ಪರೀಕ್ಷೆಗಳನ್ನು ಮಕ್ಕಳಿಗೆ ನಡೆಸಬೇಕಾಗುತ್ತದೆ. ಸಾಮಾನ್ಯ ಪರೀಕ್ಷೆಯಲ್ಲಿ 100 ಅಂಕದ ಪ್ರಶ್ನೆಪತ್ರಿಕೆ ನೀಡಿ ಅದಕ್ಕೆ ಉತ್ತರ ಬರೆಯುವಂತೆ ಸೂಚಿಸಲಾಗುತ್ತಿತ್ತು. ಆದರೀಗ ಪ್ರತಿ ವಿಷಯಕ್ಕೆ ಲಿಖಿತ ಪರೀಕ್ಷೆಗೆ 5ನೇ ತರಗತಿಗೆ 40 ಅಂಕಗಳು, 8ನೇ ತರಗತಿಗೆ 50 ಅಂಕಗಳು ಹಾಗೂ 9ನೇ ತರಗತಿಗೆ 80 ಅಂಕಗಳನ್ನು ನಿಗದಿ ಮಾಡಲಾಗಿದೆ.

ಈ ಮೌಲ್ಯಾಂಕನ ಪರೀಕ್ಷೆಯು ಆಯಾ ಶಾಲಾ ಹಂತದಲ್ಲಿಯೇ ನಡೆಸಲಾಗುತ್ತದೆ. ಪರೀಕ್ಷೆ ಕಾರಣಕ್ಕಾಗಿ ಯಾವುದೇ ವಿದ್ಯಾರ್ಥಿಯನ್ನು ಅದೇ ತರಗತಿಯಲ್ಲಿ ಕಲಿಕಾ ಪ್ರಗತಿ ಸಾಧಿಸದ ವಿದ್ಯಾರ್ಥಿ ಎಂದು ಪರಿಗಣಿಸಿ ಅನುತ್ತೀರ್ಣಗೊಳಿಸಬಾರದು ಎಂದು ರಾಜ್ಯ ಸರ್ಕಾರ ಈಗಾಗಲೇ ತನ್ನ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದೆ. ವಿದ್ಯಾರ್ಥಿಗಳ ಕಾರ್ಯಕ್ಷಮತೆ ಅಥವಾ ಪ್ರಗತಿಯ ಬಗ್ಗೆ ಸೂಕ್ತವಾದ ಮಾಹಿತಿಯನ್ನು ಸಂಗ್ರಹಿಸುವುದು ಈ ಮೌಲ್ಯಾಂಕನದ ಉದ್ದೇಶ. ಅಲ್ಲದೆ ಪಠ್ಯಕ್ರಮ ನಿಗದಿಪಡಿಸಿದ ಗುರಿ ಉದ್ದೇಶಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದ್ದಾರೆ ಎಂಬುದನ್ನು ತೀರ್ಮಾನಿಸಲು ಹಾಗೂ ಮಗುವಿನ ಕಲಿಕೆ ಮತ್ತು ಪ್ರಗತಿಯನ್ನು ಇನ್ನಷ್ಟು ಉತ್ತಮ ಪಡಿಸಲು ಈ ಮೌಲ್ಯಾಂಕನ ಪರೀಕ್ಷೆ, ಬೋಧಿಸುವ ಶಿಕ್ಷಕರಿಗೆ ಹಾಗೂ ಯೋಜನೆ ರೂಪಿಸುವ ಸರ್ಕಾರಕ್ಕೆ ನೆರವಾಗಲಿದೆ.

ಹೀಗಾಗಿ ಐದು, ಎಂಟು ಹಾಗೂ ಒಂಬತ್ತನೇ ತರಗತಿಯ ಮಕ್ಕಳಿಗೆ ರಾಜ್ಯ ಸರ್ಕಾರ ನಡೆಸಲು ಉದ್ದೇಶಿಸಿರುವ ರಾಜ್ಯಮಟ್ಟದ ಮೌಲ್ಯಾಂಕನ ಪರೀಕ್ಷೆಯು ಬಹಳ ಉತ್ತಮ ಹಾಗೂ ಪ್ರಯೋಜನಕಾರಿಯಾಗಿದ್ದು, ಈ ಬಗ್ಗೆ ಯಾವುದೇ ವಿದ್ಯಾರ್ಥಿಗಳು ಭಯಪಡದೆ ನಿರ್ಭೀತಿಯಿಂದ ಮುಕ್ತವಾಗಿ ಪರೀಕ್ಷೆಯನ್ನು ಬರೆಯಲಿ ಹಾಗೂ ಪೋಷಕರು ಕೂಡ ಯಾವುದೇ ಗೊಂದಲ ಅನುಮಾನಗಳಿಗೆ ಆಸ್ಪದ ಕೊಡದೆ ಸರ್ಕಾರದ ಜೊತೆ ಕೈಜೋಡಿಸಿ ಈ ಬಾರಿಯ ಮೌಲ್ಯಾಂಕನ ಪರೀಕ್ಷೆಯನ್ನು ಯಶಸ್ವಿಗೊಳಿಸಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಅದು ಮನುಷ್ಯನ 'ಮಣ್ಣಿನ ಮಾತು'



> ‘ಕೊಟ್ಟ ಮಾತು’ ಪಡೆದ ಮುಂಗಡದ ಹಣ, ಅದು ಚಿಲ್ಲರೆ ಕಾಸೇ ಆಗಲೀ ಆದರೆ ಅದನ್ನು ಪಡೆದುಕೊಂಡು ನಾಲಿಗೆ ಕೊಟ್ಟಿದ್ದೇನೆನ್ನುವ ನೈತಿಕತೆ, ಭೂಮಿಯ ವ್ಯವಹಾರದಲ್ಲಿ ನಮ್ಮ ದೇಸೀಯ ನ್ಯಾಯದ ನ್ಯಾಯಾಧೀಶನಂತೆ ವ್ಯಾಪಾರ ವಹಿವಾಟನ್ನು ನಿಯಂತ್ರಿಸುತ್ತಿತ್ತು. ಆಗ ಈಗಿನಂತೆ ‘ರೇರಾ’ ಇರಲಿಲ್ಲ. ಅಸಲಿಗೆ ರಿಯಲ್ ಎಸ್ಟೇಟ್ ಎಂಬ ಭೂಮಿಯ ವ್ಯವಹಾರಕ್ಕೆ ಇಂತಹದ್ದೇ ಮಾರುಕಟ್ಟೆಯ ಕಟ್ಟಳೆಗಳಿರಲಿಲ್ಲ. ಮಾತಿಗೆ ನಿಲ್ಲುವ ‘ಮಣ್ಣಿನ ಮಾತು’ ಚಾಲ್ತಿಯಲ್ಲಿತ್ತು. ‘old is gold’ ಹಳೆ ಕಾಲವೆಲ್ಲವೂ ಚೆನ್ನಾಗಿತ್ತು ಎನ್ನುವ ಮಾತಿಗೆ ಸಂವಾದಿಯಾಗಿ ನಮ್ಮ ಕಾಲದ ವ್ಯಾಪಾರ ವಹಿವಾಟುಗಳೂ ಮಾತಿಗೇ ನಿಲ್ಲುತ್ತಿದ್ದ ದಿನಗಳು ಆಗ ಚಾಲ್ತಿಯಲ್ಲಿದ್ದವು.

ಮಾತೆತ್ತಿದರೆ ಅವನು ನೂರು ಕೋಟಿಗೆ ಬಾಳ್ತಾನೆ ಸಾವಿರ ಕೋಟಿಗೆ ಒಡೆಯ ಅಬ್ಬಬ್ಬಾ! ಎಂಥಾ ದುಡ್ಡಸ್ಥ ಗೊತ್ತಾ? ಹುಟ್ಟಿದ್ರೆ ಹಂಗೇ ಹುಟ್ಟಬೇಕು! ಬದುಕಿದ್ರೆ ಹಾಗೆ ಬಾಳಬೇಕು? ಸುಖ ಅಂದ್ರೆ ಅದೂ ಕಣ್ರಿ! ನಾವೂ ಇದ್ದೀವಿ ಹೊಟ್ಟೆಗಿದ್ರೆ ಬಟ್ಟೆಗಿಲ್ಲ! ಬಟ್ಟೆಗಿದ್ರೆ ಹೊಟ್ಟೆಗಿಲ್ಲ. ಎರಡಕ್ಕೂ ಇದೆ ಅಂದ್ರೆ ಸಾಲಗಾರರ ಕಾಟ, ಹೀಗೆ ನಮ್ಮನ್ನು ನಾವೇ ಹಂಗಿಸಿಕೊಳ್ಳುತ್ತಾ ಬದುಕುವ ಅಸಂಖ್ಯಾತ ಮಂದಿ ನಮ್ಮ ಜೊತೆಗಿದ್ದಾರೆ. ಅದೇನೋ ಗೊತ್ತಿಲ್ಲ ನಮಗಿಂತ ಬೇರೆಯವರೆಲ್ಲಾ ನಮಗೆ ದೊಡ್ಡವರಾಗಿ ಕಾಣ್ತಾರೆ. ಅಧಿಕಾರ ಇರುವ ಕಾರಣಕ್ಕೋ, ಹಣ ಇರುವ ಕಾರಣಕ್ಕೋ, ಕೀರ್ತಿ ಇರುವ ಕಾರಣಕ್ಕೋ ಏನೋ ಒಂದು, ಒಟ್ಟಿನಲ್ಲಿ ದುಡ್ಡು ಮಾಡಿದ ಬಾಬತ್ತಿನಲ್ಲಿ ತನ್ನ ಹೆಸರು ಕೆತ್ತಿಸಿಕೊಂಡವರ ಬಗ್ಗೆ ವಿಪರೀತ ವ್ಯಾಮೋಹ ಮತ್ತು ಭ್ರಮೆಗಳು ನಮಗೆ. ಹೀಗೆ ಮಾತುಗಳ ಮೂಲಕ ನಮ್ಮ ಭಾವನೆಗಳು ಹೊರ ಹೊಮ್ಮುತ್ತಿರುತ್ತವೆ.

ಸಮಾಧಾನವಾಗಿ ಬದುಕುವ ಕಲೆ ಕಲಿತವರು ಮಾತ್ರ ಇದಾವುದನ್ನೂ ಲೆಕ್ಕಿಸದೆ, ನಿರುಮ್ಮಳವಾಗಿ ತಮ್ಮ ಸಮಾಧಾನಚಿತ್ತದ ಜೊತೆ ಜೋಕಾಲಿಯಲ್ಲಿ ಜೀಕುತ್ತಾರೆ. ದುಡ್ಡೆಂಬ ಮಹಾಮಾಯಾವಿಯ ಬೆನ್ನು ಹತ್ತಿ ಓಡಲು ಶುರು ಮಾಡಿದವರು ಮಾತ್ರ ಈ ದುಡ್ಡೆಂಬ ಮಾಯಾ ಜಿಂಕೆಯ ಮರ್ಮ ತಿಳಿಯುವ ಹೊತ್ತಿಗೆ ತಮ್ಮ ಬದುಕಿನ ಅತ್ಯಮೂಲ್ಯ ರಸಮಯ ಕ್ಷಣಗಳನ್ನು ಹಪಾಹಪಿಯ ಆತಂಕದಲ್ಲಿಟ್ಟು ದಿನದೂಡಿಬಿಡುತ್ತಾರೆ.

ನಮ್ಮದು ಮಾರ್ಕೆಟ್ಟು ಮತ್ತು ರಿಯಲ್ ಎಸ್ಟೇಟ್‌ಗಳ ಯುಗ. ಈ 'ಗ್ಲೋಬಲೈಜೇಷನ್' ಬಂದ ಮೇಲೆ ಪುಸ್ತಕ ಬರೆಯುವ ಪಾಪ್ಯುಲರ್ ಲೇಖಕನಿಂದ ಹಿಡಿದು ದೊಡ್ಡ ಉದ್ಯಮಿಗಳು, ನಟರು, ರಾಜಕಾರಣಿಗಳು, ಆಯಕಟ್ಟಿನ ಅಧಿಕಾರಸ್ಥರವರೆಗೆ ಹಣ ತನ್ನ ಅಂಕಿಸಂಖ್ಯೆಗಳ ನಾಗಾಲೋಟದ ಸೂಚ್ಯಂಕದಲ್ಲಿ ಎಷ್ಟೆಷ್ಟು ಮೇಲೇರುತ್ತದೋ, ಆತ ಅಷ್ಟಷ್ಟು ಸಮಾಜದಲ್ಲಿ ಗುರುತಿಸಲ್ಪಡುವ ಸಾಮಾಜಿಕ ಸಮಾಚಾರವೊಂದು ಚಾಲ್ತಿಗೆ ಬಂದುಬಿಟ್ಟಿದೆ. ಕೈಲಾಗದವನೂ ಕೂಡ ನಾನೂ ಒಂದು ಕೈ ನೋಡಿಯೇ ಬಿಡುತ್ತೇನೆ ಎಂದು ಸಂಪಾದನೆಯ ರಹದಾರಿಯ ಕಡೆಗೆ ತೋಳೇರಿಸಿಕೊಂಡು ಹೋಗುವ ಜೀವಜಾಯಮಾನ ಹುಟ್ಟಿಕೊಂಡಿದೆ.

ನಿನ್ನೆ ಮೊನ್ನೆಯ ತನಕ ನಮ್ಮ ಹೋಟೆಲಿನಲ್ಲಿ ಟೀ ಕುಡಿಯಲು ಬರುತ್ತಿದ್ದವ ಈಗ ನೋಡಿ ಐಷಾರಾಮಿ ಕಾರಿನಲ್ಲಿ ಓಡಾಡಿಕೊಂಡು ದೊಡ್ಡ ವ್ಯವಹಾರಸ್ಥನಾಗಿ ಬಿಟ್ಟ, ಎನ್ನುತ್ತಾ ಹೋಟೇಲಿನ ಮಾಲೀಕ ನಾವು ಮಾತ್ರ ಇನ್ನೂ ಅದೇ ರಾಗ ಅದೇ ಹಾಡು ಎಂದು ಗೊಣಗಿಕೊಳ್ಳುವ ಅದೆಷ್ಟೋ ಮಂದಿಯನ್ನು ದಿನನಿತ್ಯ ಕಾಣುತ್ತೇವೆ ನಾವು. ಹಾಗಾದರೆ ಆ ಹೋಟೆಲಿನವನನ್ನೇ ಕೇಳಿ ನೋಡಿ ಅವನಿಗೇನು ಲಾಟರಿ ಹೊಡೀತಾ ಅಂತ. ಹಾಗೆ ಕೇಳಿದ ಕೂಡಲೇ ಆತ ಥಟ್ ಅಂತ ಹೇಳುವ ಮೊದಲ ಮಾತೆ 'ರಿಯಲ್ ಎಸ್ಟೇಟ್'. ಅಂದರೆ ಭೂಮಿಯನ್ನು ಮಾರಿಸುವ ಕೊಡಿಸುವ ಈ ರಿಯಲ್ ಎಸ್ಟೇಟ್ ವ್ಯಾಪಾರ ಇವತ್ತು ಉದ್ಯಮವಾಗಿ ಬೆಳೆದು ನಿಂತಿದೆ. ಇಲ್ಲಿಯವರೆಗೂ ಅದರ ಮೇಲೆ ನಿಗಾ ಇಡದಿದ್ದ ಸರಕಾರ ಈಗ 'ರೇರಾ' ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಅದನ್ನೊಂದು ಕಾನೂನಿನ ಚೌಕಟ್ಟಿಗೆ ತರಲು ಹೊರಟಿದೆ. ಅಂದರೆ ಇನ್ನಾವ ಬಾಬತ್ತಿನಲ್ಲೂ ಕಾಣದ ದುಡ್ಡು ಈ ಉದ್ಯಮದಲ್ಲಿ ಕಾಣುವಷ್ಟು ಅಗಾಧವಾಗಿ ಬೇರೆಯುದರಲ್ಲಿ ಕಾಣಲಿಲ್ಲ. ಹಾಗಂತ ಇವತ್ತಿನ ದಿನಗಳಲ್ಲಿ ಅಂತಹ ಪರಿಸ್ಥಿತಿ ಇಲ್ಲ. ಆದರೆ ಕಳೆದ ಒಂದೆರಡು ದಶಕದಲ್ಲಿ ಈ ರಿಯಲ್ ಎಸ್ಟೇಟ್ ಉದ್ಯಮ ಬಹಳಷ್ಟು ಜನರನ್ನು ಶ್ರೀಮಂತರನ್ನಾಗಿಸಿತು. ದುಡ್ಡು ಬಂತು, ಧನಿಕರಾದರು, ಹಾಗಾದರೆ ಬೇರೆ ಉದ್ಯಮಗಳಲ್ಲಿ ದುಡ್ಡು ಬರಲಿಲ್ಲವೇ ಎಂಬ ಪ್ರಶ್ನೆ ಹುಟ್ಟುತ್ತದೆ. ಇಲ್ಲಿನ ಹುಟ್ಟುವಳಿಗೆ ಹೋಲಿಸಿದರೆ ಬೇರೆಯ ವ್ಯಾಪಾರಗಳು ಕೈಕುಲುಕಿದಂತೆ ಕಾಣಲಿಲ್ಲ. ಸಿನಿಮಾ ನಟರು ಸಿನಿಮಾದ ದುಡ್ಡು ತಂದು ಭೂಮಿಯ ಮೇಲೆ ಸುರಿಯುವ ಜಾಣತನ ಕಲಿತುಕೊಂಡಿದ್ದಾರೆ. ರಾಜಕಾರಣದಲ್ಲಿದ್ದವರೂ ಕೂಡ ಇಲ್ಲಿ ಹೂಡಿಕೆದಾರರೆ, ಹಾಗಾದರೆ ಅಷ್ಟೊಂದು ದುಡ್ಡು ತರುವ ಈ ಉದ್ಯಮ ಈ ಪರಿಯ ಏರಿಕೆ ಕಂಡಿತ್ತಾದರೂ ಏಕೆ?

ರಿಯಲ್ ಎಸ್ಟೇಟ್ ಉದ್ಯಮ ಸುಲಭವಾಗಿ ದುಡ್ಡು ತಂದು ಕೊಟ್ಟಷ್ಟೇ ವೇಗವಾಗಿ ಸಮಸ್ಯೆಗಳನ್ನು ತಂದಿಡಲು ಶುರು ಮಾಡಿತು. ಭತ್ತ ಬೆಳೆವ ಫಲವತ್ತಾದ ಗದ್ದೆಗಳು ನಾಟಿ ಮಾಡಿದ ಪೈರುಗಳನ್ನು ನುಂಗಿಕೊಂಡು ತಮ್ಮ ಸುತ್ತಲೂ ಕಾಂಪೌಂಡು ಕಟ್ಟಿಕೊಂಡು ನಿಂತವು. ತೋಟಗಳು ವೀಕೆಂಡ್ ಬೇಸಾಯಗಾರರ ಕೈ ಸೇರಿದವು. ಜಮೀನು ಮಾರಿ ದುಡ್ಡು ಮಾಡಿಕೊಂಡ ರೈತಾಪಿ ಕುಟುಂಬಗಳು ಊರು ಬಿಟ್ಟು ನಗರ ಸೇರಿಕೊಂಡವು.

ಇದೆಲ್ಲದರ ನಡುವೆ ಸಾಮಾಜಿಕ ಸಂದರ್ಭ ಹೇಗೆ ಸೃಷ್ಟಿಯಾಯಿತು ಎಂದರೆ ನಮ್ಮ ಸಮಾಜದ ನೈತಿಕ ಪ್ರಜ್ಞೆ ಭೂಮಿ ಕಾಣಿಯ ವ್ಯಾಪಾರದಲ್ಲಿ ಅಂತಸತ್ವದಂತೆ ತಲೆ ಎತ್ತಿ ನಿಂತಿತು.

'ಕೊಟ್ಟ ಮಾತು' ಪಡೆದ ಮುಂಗಡದ ಹಣ, ಅದು ಚಿಲ್ಲರೆ ಕಾಸೇ ಆಗಲೀ ಆದರೆ ಅದನ್ನು ಪಡೆದುಕೊಂಡು ನಾಲಿಗೆ ಕೊಟ್ಟಿದ್ದೇನೆನ್ನುವ ನೈತಿಕತೆ, ಭೂಮಿಯ ವ್ಯವಹಾರದಲ್ಲಿ ನಮ್ಮ ದೇಸೀಯ ನ್ಯಾಯದ ನ್ಯಾಯಾಧೀಶನಂತೆ ವ್ಯಾಪಾರ ವಹಿವಾಟನ್ನು ನಿಯಂತ್ರಿ ಸುತ್ತಿತ್ತು. ಆಗ ಈಗಿನಂತೆ 'ರೇರಾ' ಇರಲಿಲ್ಲ. ಅಸಲಿಗೆ ರಿಯಲ್ ಎಸ್ಟೇಟ್ ಎಂಬ ಭೂಮಿಯ ವ್ಯವಹಾರಕ್ಕೆ ಇಂತಹದ್ದೇ ಮಾರುಕಟ್ಟೆಯ ಕಟ್ಟಳೆಗಳಿರಲಿಲ್ಲ. ಮಾತಿಗೆ ನಿಲ್ಲುವ 'ಮಣ್ಣಿನ ಮಾತು' ಚಾಲ್ತಿಯಲ್ಲಿತ್ತು. 'old is gold' ಹಳೆ ಕಾಲವೆಲ್ಲವೂ ಚೆನ್ನಾಗಿತ್ತು ಎನ್ನುವ ಮಾತಿಗೆ ಸಂವಾದಿಯಾಗಿ ನಮ್ಮ ಕಾಲದ ವ್ಯಾಪಾರ ವಹಿವಾಟುಗಳೂ ಮಾತಿಗೇ ನಿಲ್ಲುತ್ತಿದ್ದ ದಿನಗಳು ಆಗ ಚಾಲ್ತಿಯಲ್ಲಿದ್ದವು. ಯಾವಾಗ ಜಾಗತೀ ಕರಣದ ಈ ಭೂ ವ್ಯವಹಾರ, ವಿಶ್ವಮಾರುಕಟ್ಟೆ ಯಾಗಿ ಪರಿವರ್ತಿತವಾಯಿತೋ ಆಗ ಹಣದ ಚಲಾವಣೆ ಎರ್ರಾಬಿರ್ರಿ ಹರಿದಾಡತೊಡಗಿತು. ಸ್ಯಾಟಲೈಟ್‌ನ ಮೂಲಕ ಗೂಗಲ್ ಸರ್ಚ್‌ನಲ್ಲಿ ಸೈಟುಗಳನ್ನು ತೋರಿಸಿದರು. ಟೊರಾಂಟೋದ ಅನಿವಾಸಿ ಭಾರತೀಯ ಪ್ರಜೆಗೆ ನಮ್ಮ ಸಿದ್ಧಾರ್ಥ ಲೇಔಟ್‌ನ ಸೈಟು ತೋರಿಸಿದರು. ಆನ್‌ಲೈನಿನಲ್ಲಿಯೇ ಅವನಿಂದ ಜಿ.ಪಿ.ಎ. ಪಡೆದು ಕುಳಿತಲ್ಲಿಯೇ ಭಾರತ ಅಮೆರಿಕಾಗಳ ನಡುವೆ ಭೂಮಿಯ ಪರಭಾರೆ ಮಾಡಲಾಯಿತು. ಅಂದರೆ ಜಾಗತೀಕರಣ ಕೇವಲ ನಮ್ಮ ಕುಲ ಕಸುಬುಗಳನ್ನು ಮಾತ್ರ ನುಂಗಲಿಲ್ಲ. ನಮ್ಮ ಭೂಮಿಯನ್ನೂ ನುಂಗುವ ಬಕಾಸುರ ಹೊಟ್ಟೆ ಬೆಳೆಸಿಕೊಂಡು ಜೀರ್ಣಿಸಿಕೊಂಡು ಆರ್ಭಟಿಸತೊಡಗಿತು.

ಒಂದು ಬೇಕೆಂದರೆ ಮತ್ತೊಂದನ್ನು ಕಳೆದುಕೊಳ್ಳಲಿಕ್ಕೆ ಸಿದ್ಧವಾಗಲೇಬೇಕು. ಜಾಗತೀಕರಣ ತೆರೆದು ತೋರಿದ ಈ ಭೂಮಿಯ ವಿಶ್ವಮಾರುಕಟ್ಟೆ, ರಿಯಲ್ ಎಸ್ಟೇಟ್ ಉದ್ಯಮವನ್ನೂ ವ್ಯಾಪಾರ–ವಹಿವಾಟನ್ನು ಹೆಚ್ಚಿಸಿತು ನಿಜ; ಆದರೆ ನಮ್ಮ ಸಾಮಾಜಿಕ ಜನಜೀವನದ ಯಜಮಾನನಂತಿದ್ದ ನಾಲಿಗೆಯ ಸ್ವಾಸ್ಥ್ಯವನ್ನು ಮಾತಿಗೆ ನಿಲ್ಲುವ ಮನುಷ್ಯನ ನೈತಿಕ ಶಕ್ತಿಯನ್ನು ಕೆಡಿಸಿಬಿಟ್ಟಿತು. ದುಡ್ಡು ತನ್ನ ಮದವೇರಿಸುವ ವಾಸನೆಯಿಂದ ಮೂಗಿನ ಮೂಲಕ ತಲೆಗೆ ಏರಿ ಪಿತ್ತ ನೆತ್ತಿಗೇರಿಸಿತು. ನಾಲಿಗೆ ಬಿದ್ದು ಹೋಯಿತು. ಅಂದರೆ ಕೆಲವರು ಮಾತಿಗೆ ನಿಲ್ಲುವ ಬದಲು ಜಾಸ್ತಿ ದುಡ್ಡು ಸಿಗುತ್ತವೆ ಎನ್ನುವ ಕಾರಣಕ್ಕೆ ಮಾತಿಗೆ ತಪ್ಪಲು ಶುರು ಮಾಡಿದರು. ಗಲಾಟೆಗಳಾದವು. ಹತ್ಯೆಗಳಾದವು. ಪಾತಕ ಲೋಕದ ಕೈಗಳು ಉದ್ಯಮಕ್ಕೆ ಲಗ್ಗೆಯಿಟ್ಟಿತು. ಮಾತು ನಾಲಿಗೆಯ ಅಂಕುಶದಲ್ಲಿದ್ದ ವ್ಯಾಪಾರ ವಹಿವಾಟುಗಳು ಅಗ್ರಿಮೆಂಟು, ಅಕೌಂಟುಗಳಿಗೆ ಬಂದು ನಿಂತಿತು. ಆದರೂ ಕೆಲಪ್ರಕರಣಗಳು ಊರ್ಜಿತವಾಗದೆ ಆತ್ಮೀಯತೆಗಳು ರೂಪಾಯಿ ಬಣ್ಣದ ಮಾತುಕತೆಯಲ್ಲಿ ನಲುಗಿ ಹೋದವು. ಇಂಥ ವಿಷಯದ ಬಗ್ಗೆ ಬರೆಯಲು ಹೊರಟರೆ ಸಾವಿರ ಸಾವಿರ ಸಂಖ್ಯೆಯ ನೈಜ ಘಟನೆಗಳು ನಮಗೆ ಉದಾಹರಣೆಗಳಾಗಿ ಸಿಕ್ಕುತ್ತವೆ.

ಆದರೆ ಅದಾವುದೂ ನಮಗಿಲ್ಲಿ ಮುಖ್ಯವಲ್ಲ, ನಮ್ಮ ವ್ಯಾಪಾರ ವಹಿವಾಟಿನಲ್ಲೂ ಇದ್ದಂತಹ ಮಣ್ಣಿನ ಮಾತೆಂಬ ನಾಲಿಗೆಯ ಶಕ್ತಿಯ ಯಾವ ವ್ಯಾಪಾರವೂ ಜಗತ್ತಿನಲ್ಲಿ ಇಲ್ಲ. 'ವ್ಯಾಪಾರಂ ದ್ರೋಹ ಚಿಂತನಂ' ಎಂಬ ಮಾತಿದೆಯಾದರೂ ಅದು ಸರ್ವಕಾಲ ದಲ್ಲೂ ಎಲ್ಲವೂ ಅದೇ ಆಗಿರುತ್ತದೆಂದು ಒಪ್ಪಲು ಆಗುವುದಿಲ್ಲ. ಇವತ್ತು ವಿಶ್ವದ ಬಹುತೇಕ ರಾಷ್ಟ್ರಗಳು ಟೂರಿಸಂ ನಂಬಿ ವ್ಯವಹಾರ ನಡೆಸುತ್ತವೆ. ವಿಶ್ವದ ನಾನಾ ಕಡೆ ಪ್ರವಾಸೋದ್ಯಮದ ಚಟುವಟಿಕೆಗಳು ಕೂಡ ಗ್ರಾಹಕ ಸ್ನೇಹಿಯಾಗಿರುತ್ತದೆ ಅಂತ ವಿಶ್ವಮಾರು ಕಟ್ಟೆ ಇಂದು ಮಾತಾಡಿಕೊಳ್ಳುತ್ತಿದೆ. ಅಂದ ಮೇಲೆ ಎಲ್ಲಾ ಕಡೆ ವ್ಯಾಪಾರ ದ್ರೋಹ ಚಿಂತನವೇ ಎಂದು ನಂಬಬೇಕಿಲ್ಲ. ವ್ಯಾಪಾರದ ಮೂಲವೇ ಲಾಭ. ಅಂದ ಮೇಲೆ ಬುದ್ಧಿವಂತಿಕೆಯೇ ಅಲ್ಲಿ ಪ್ರಧಾನ.

ಇಷ್ಟೆಲ್ಲಾ ಬ್ರೈನ್ ಗೇಮ್ ಥರ ಓಡಿದ ಈ ರಿಯಲ್ ಎಸ್ಟೇಟು ಮೊದಮೊದಲು ನಾಲಿಗೆಯ ತುದಿಯಲ್ಲಿ 'ಕೊಟ್ಟ ಮಾತಿಗೆ ತಪ್ಪಲಾರೆನು ಕೆಟ್ಟ ಯೋಚನೆ ಮಾಡಲಾರೆನು' ಎಂಬ ಪುಣ್ಯಕೋಟಿಯ ಹಾಡಿನಂತಿದ್ದುದು ಮಾತ್ರ ಸತ್ಯ. ಆದರೆ ದುಡ್ಡು ತನ್ನ ಝೇಂಕಾರದ ಸದ್ದನ್ನು ಜಾಸ್ತಿ ಮಾಡುತ್ತಿದ್ದಂತೆ ನಾಲಿಗೆ ಅಲುಗಾಡತೊಡಗಿತು. ಆರ್ಡರ್ ಕುಟ್ಟುವ ನ್ಯಾಯದಂಡ ನಾಲಿಗೆಯ ಸ್ಥಾನದಲ್ಲಿ ನಿಂತು ಮಣ್ಣಿನ ಬಗ್ಗೆ ಮಾತಾಡಬೇಕಾಯಿತು. ಬಹಳ ವರ್ಷಗಳ ಹಿಂದೆ ನನಗೆ ಪರಿಚಿತರೊಬ್ಬರು ತನ್ನದೊಂದು ಖಾಲಿ ನಿವೇಶನವನ್ನು ಗ್ರಾಹಕರೊಬ್ಬರಿಗೆ ಕರಾರು ಮಾಡಿ ಕೊಟ್ಟಿದ್ದರು. ಕರಾರು ಮಾಡಿಸಿಕೊಂಡವನಿಗಿಂತ ಮಾಡಿಕೊಟ್ಟ ಈ ವ್ಯಕ್ತಿ ಸಮಾಜದಲ್ಲಿ ದೊಡ್ಡ ಉದ್ಯೋಗ ಸ್ಥಾನದಲ್ಲಿದ್ದವರು. ಆದರೆ ಬದಲಾದ ನೈತಿಕ ಪ್ರಜ್ಞೆಯ ಪರಿಣಾಮ ಕರಾರು ಒಪ್ಪಂದವಾದ ಮೇಲೂ ಹೆಚ್ಚಿನ ದುಡ್ಡು ಕೊಡುತ್ತೇನೆಂದು ಮತ್ತೊಬ್ಬ ಗ್ರಾಹಕ ಬಂದ. ದುಡ್ಡಿನಾಸೆಗೆ ಈತ ಈ ಮೊದಲಿನ ಕರಾರು ಮುರಿದು ಜಾಸ್ತಿ ದುಡ್ಡು ಕೊಟ್ಟವನಿಗೆ ತನ್ನ ನಿವೇಶನವನ್ನು ಮಾರಿಬಿಟ್ಟ, ಈ ಮೊದಲು ಕರಾರು ಮಾಡಿಕೊಂಡಿದ್ದವ ಕೋರ್ಟಿನ ಕಟಕಟೆ ಏರಿದ. ಕೇಸು ಕೋರ್ಟಿನಲ್ಲಿ ದಾಖಲಾಯಿತು. ಇವತ್ತಿಗೂ ಅದು ಮುಗಿದಿಲ್ಲವೆನ್ನಿಸುತ್ತದೆ. ಆದರೆ ಇಲ್ಲೊಬ್ಬರಿದ್ದಾರೆ ನೋಡಿ ಮಣ್ಣಿನ ಮಾತಿಗೆ ನಿಂತವರು, ಅವರೊಬ್ಬ ಸಾಹಿತಿ ಗೀತ ರಚನೆಕಾರ. ರಾಗತಾಳಗಳ ಪ್ರತಿಮೆಗಳಲ್ಲಿ ರಸಿಕರಿಗೆ ಕರ್ಣಾನಂದ ಸೃಷ್ಟಿಸಿ, ಹೊಟ್ಟೆ ತುಂಬಿಸಿಕೊಂಡವರು. ಅವರದೊಂದು ಮನೆ ಮೈಸೂರಿನಲ್ಲಿತ್ತು. ಕಾಮಾಕ್ಷಿ ಆಸ್ಪತ್ರೆಯ ಪಕ್ಕದ ರಸ್ತೆಯಲ್ಲಿ ಕಾರ್ನರ್ ಹೌಸ್. ಹೌಸಿಂಗ್ ಬೋರ್ಡ್ ಮನೆ. ಮನೆ ನಂ.12, ಆ ಮನೆಯನ್ನು ದಾಟಿಕೊಂಡು ಮುಂದೆ ಹೋದರೆ, ಮೂರನೆಯ ಮನೆಯೇ ಖ್ಯಾತ ಕವಿ ಎಂ. ಅಕಬರ ಅಲಿ ಅವರ ಮನೆ. ಹನ್ನೆರಡನೇ ನಂಬರ್ ಮನೆಯ ಮಾಲೀಕರು ತಮ್ಮ ಕಷ್ಟಾರ್ಜಿತವಾಗಿ ಆವತ್ತಿನ ಕನ್ನಡ ಸಿನಿಮಾಗಳಿಗೆ ಹಾಡು ಬರೆದು ಸಂಪಾದಿಸಿದ ದುಡ್ಡಿನಿಂದ ಖರೀದಿಸಿದ್ದು. ಅವರ ಪತ್ನಿ ಚೆನ್ನೈನಲ್ಲೊಂದು ಶಾಲೆ ನಡೆಸುತ್ತಿದ್ದರು. ತಮ್ಮ ಅನುಕೂಲಕ್ಕಾಗಿ ಅವರು ಆ ಮನೆಯನ್ನು ಮಾರಿದರು. ಆ ಮನೆಯನ್ನು ಕೊಂಡುಕೊಂಡವರು ಒಬ್ಬರು ವೈದ್ಯರು. ಐದು ಲಕ್ಷದ ಇಪ್ಪತ್ತು ಸಾವಿರಕ್ಕೆ ವ್ಯಾಪಾರ. ವ್ಯಾಪಾರ ಮಾಡಿದಾಗ ಡಾಕ್ಟ್ರು, ಆ ಸಾಹಿತಿಗೆ ಕೊಟ್ಟ ಅಡ್ವಾನ್ಸಿನ ಹಣ ಕೇವಲ ಒಂದು ಸಾವಿರ ರೂಪಾಯಿಗಳು ಮಾತ್ರ ಯಾವ ಅಗ್ರಿಮೆಂಟೂ ಇಲ್ಲ. ಏನೂ ಇಲ್ಲ.

ಒಂದು ಸಾವಿರ ತೆಗೆದುಕೊಂಡು ಕೊಟ್ಟ ನಾಲಿಗೆಯ ತುದಿಯ ಮಣ್ಣಿನ ಮಾತು ಅಷ್ಟೇ ಕರಾರು. ಆದರೆ ಚಿತ್ರರಂಗದಲ್ಲಿ ಗೀತರಚನೆಯಲ್ಲಿ ಬ್ಯುಸಿಯಾಗಿದ್ದ ಅವರು ಸತತ ಎರಡು ವರ್ಷಗಳ ಕಾಲ ಆ ಮನೆ ವ್ಯಾಪಾರ ವ್ಯವಹಾರದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಎರಡು ವರ್ಷಗಳ ನಂತರ ಅವರಿಗೆ ದುಡ್ಡಿನ ಅವಶ್ಯಕತೆ ಬಂದೊದಗಿತು. ಕೂಡಲೇ ಮೈಸೂರಿನಲ್ಲಿರುವ ತನ್ನ ಮನೆ ಮತ್ತು ಅದನ್ನು ಒಬ್ಬರಿಗೆ ಮಾತಿನಲ್ಲೇ ವ್ಯವಹರಿಸಿ, ಪಡೆದುಕೊಂಡ ಒಂದು ಸಾವಿರ ರೂಗಳ ಅಡ್ವಾನ್ಸು ಎರಡೂ ಕೂಡ ನೆನಪಾದವು. ಕೂಡಲೇ ಕಷ್ಟಕಾಲಕ್ಕೆ ಮನೆ ಮಾರಿದ ವ್ಯವಹಾರವನ್ನು ಚುಕ್ತ ಮಾಡಿಕೊಂಡು ತಮ್ಮ ತಾಪತ್ರಯ ತೀರಿಸಿಕೊಳ್ಳುವ ಸಲುವಾಗಿ ಚೆನ್ನೈನಿಂದ ಮೈಸೂರಿಗೆ ಬಂದರು ಆ ಚಿತ್ರ ಸಾಹಿತಿ. ಆಗ ಹಳೇ ಮೆಟ್ರೋಪೋಲ್ ಹೋಟೆಲಿನಲ್ಲಿ ಉಳಿದುಕೊಂಡು, ಎರಡು ವರ್ಷದ ಹಿಂದೆ ಒಂದು ಸಾವಿರ ರೂಪಾಯಿ ಮುಂಗಡ ಹಣ ಕೊಟ್ಟಿದ್ದ ಡಾಕ್ಟರನ್ನು ಏನೋ ಮಾತಾಡಬೇಕು ಬನ್ನಿ ಎಂದು ತಮ್ಮ ರೂಮಿಗೆ ಕರೆಸಿಕೊಂಡಿದ್ದಾರೆ. ಅಷ್ಟರಲ್ಲಾಗಲೇ 'ಮಣ್ಣಿನ ಮಾತೆಂಬ' ನಮ್ಮ ದೇಸೀ ಜಗತ್ತು ರಿಯಲ್ ಎಸ್ಟೇಟ್ ಎಂಬ ಉದ್ಯಮವಾಗಿ ಪರಿವರ್ತಿತವಾಗಿ ಹೋಗಿತ್ತು. ಸಾಲದ್ದಕ್ಕೆ ಆ ಚಿತ್ರಸಾಹಿತಿಯ ಪತ್ನಿ ಡಾ. ಲಲಿತ ಅವರ ಸಹೋದರ ಸಂಬಂಧಿಯೊಬ್ಬರು ಮೈಸೂರಿನಲ್ಲಿಯೇ ಇದ್ದರು. ಅವರಿಗೆ ಮೈಸೂರಿನ ಭೂಮಿಯ ರೇಟು ಕಟೌಟ್ ಏರಿದಂತೆ ಏರುತ್ತಿದ್ದುದು ಗೊತ್ತಾಗಿತ್ತು. ಮೇಲಾಗಿ ಆ ಮನೆ ಅವರಿಗೇ ಬೇಕಾಗಿತ್ತು. ತಮ್ಮ ಭಾವನವರನ್ನು ಹೇಗೋ ಒಪ್ಪಿಸಿ ಮೈಸೂರಿಗೆ ಕರೆಸಿಕೊಂಡಿದ್ದರು. ಆ ಚಿತ್ರ ಸಾಹಿತಿ ಆ ಮನೆಯನ್ನು ಎರಡು ವರ್ಷದ ಹಿಂದೆ ಮಾತು ಕೊಟ್ಟಿದ್ದು ನಾಲ್ಕು ಲಕ್ಷದ ಇಪ್ಪತ್ತು ಸಾವಿರಕ್ಕೆ. ಎರಡು ವರ್ಷದ ನಂತರ ಅವರ ಸೋದರ ಸಂಬಂಧಿ ಕೊಳ್ಳಲು ತಯಾರಿದ್ದಿದ್ದು. ಏಳು ಲಕ್ಷದ ಐವತ್ತು ಸಾವಿರಕ್ಕೆ. ಅನಾಯಾಸವಾಗಿ 2 ಲಕ್ಷದ 30 ಸಾವಿರ ರೂಪಾಯಿ ಆ ಸಾಹಿತಿಗೆ ಬರುತ್ತಿತ್ತು.

ದುಡ್ಡಿಗೆ ಬೆಲೆಯಿದ್ದ ಕಾಲ ಅದು. 2 ಲಕ್ಷದ 30 ಸಾವಿರ ಆ ಕಾಲಕ್ಕೆ ದೊಡ್ಡ ದುಡ್ಡು. ಅದರಲ್ಲೂ ದುಡ್ಡು ಕೊಡುವವರು ಸಂಬಂಧಿಕರೂ ಕೂಡ! ದುಡ್ಡಿಗೆ ದುಡ್ಡೂ ಬಂತು, ಸಂಬಂಧಕ್ಕೆ ಸಂಬಂಧವೂ ಉಳಿಯಿತು ಎನ್ನುವ ಸಂದರ್ಭ ಸೃಷ್ಟಿಯಾಯಿತು. ವಿಶ್ವ ಮಾರುಕಟ್ಟೆಯ ರಿಯಲ್ ಎಸ್ಟೇಟಿನ ಮಾರ್ಕೆಟಿಂಗ್ ಸ್ಟ್ರಾಟರ್ಜಿಗಳು ಒಂದೆಡೆಯಾದರೆ, ದೇಸೀತನದ ಮಣ್ಣಿನ ಮಾತು ಮತ್ತೊಂದೆಡೆ. ಆ ಸಾಹಿತಿಯ ಮುಂದೆ ಮುಖಾಮುಖಿಯಾದವು. ಎರಡು ವರ್ಷಗಳ ಹಿಂದೆ ಮಾತು ಕೊಟ್ಟಿದ್ದರೂ ಕೊಟ್ಟಿರುವುದು ಕೇವಲ ಒಂದು ಸಾವಿರ ರೂ ಮಾತ್ರ, ಕರಾರಿಲ್ಲ, ಮುಕಾರಿಲ್ಲ, ಬರಿಯ ಮಾತು. ದುಡ್ಡು ಯಾರಿಗೆ ಬೇಡ? ಬಹುಶಃ ಈ ಮನೆಯ ಕತೆ ಮುಗಿದ ಅಧ್ಯಾಯ ಎಂಬಂತೆ ಆ ವೈದ್ಯರು ಮನೆ ಕೊಳ್ಳುವ ಅವರ ಆಸೆಗೆ ಎಳ್ಳು ನೀರು ಬಿಟ್ಟಿದ್ದರು. ಕಾರಣ ರಿಯಲ್ ಎಸ್ಟೇಟ್ ಉದ್ಯಮವಾಗಿತ್ತೆಂಬ ವಾಸ್ತವ ಆ ವೈದ್ಯರಿಗೂ ಗೊತ್ತಿತ್ತು. ಆದರೆ ಕನ್ನಡ ಚಿತ್ರರಸಿಕರಿಗೆ

ಬಾಳೊಂದು ಭಾವಗೀತೆ
ಆನಂದ ತುಂಬಿದ ಕವಿತೆ
ಬಡವ ಬಲ್ಲಿದ ಭೇದವಿಲ್ಲದ
ಭೂಲೋಕ ಸ್ವರ್ಗವಿದ್ದಂತೆ ? ಎಂದು ಬರೆದಿದ್ದವರು.

ಸುಖದಾ ಸ್ವಪ್ನಗಾನ
ಎದೆಯಾ ಆಸೆ ತಾನ
ಒಲವಾ ಭಾವ ವೀಣಾ
ನೀ ಮಿಡಿಯೆ, ನಾನುಡಿಯೇ ಅದುವೇ ಜೀವನ
ಎಂಬ ಪ್ರೇಮಗೀತೆ ಬರೆದವರು
ನಿನ್ನೊಲುಮೆ ನನಗಿರಲಿ ತಂದೆ
ಕೈಹಿಡಿದು ನೀ ನಡೆಸು ಮುಂದೆ

ಹೀಗೆ ಬರೆದವರು ಬೇರ್‍ಯಾರೂ ಅಲ್ಲ, ಚಿತ್ರ ಸಾಹಿತಿ ಆರ್.ಎನ್. ಜಯಗೋಪಾಲ್! ಮೈಸೂರಿನವರೇ ಆದ ಆರ್. ನಾಗೇಂದ್ರರಾಯರ ಮಗ ಅವರು. ಇಂತಹ ಸಂದರ್ಭದಲ್ಲಿ ಆರ್.ಎನ್. ಜಯಗೋಪಾಲ್ ಮಾಡಿದ್ದೇನು ಗೊತ್ತ? ತನ್ನ ಸೋದರ ಸಂಬಂಧಿ ಹಾಗೂ ಆ ವೈದ್ಯರು ಇಬ್ಬರನ್ನೂ ಒಟ್ಟಿಗೆ ಕೂರಿಸಿಕೊಂಡು ವ್ಯಾಪಾರ ಸೆಟ್ಲ್ ಮಾಡಿಬಿಟ್ಟರು. ಅದು ಹೇಗೆ ಗೊತ್ತ?

ತನ್ನ ಸೋದರ ಸಂಬಂಧಿಯ ಆಸೆಗೂ ಮಣ್ಣೆರಚದೆ, ಆ ವೈದ್ಯರಿಗೂ ನಿರಾಶೆಗೊಳಿಸದೆ, ದುಡ್ಡಿನ ಧನದಾಹಕ್ಕೆ ತಾನೂ ಒಳಗಾಗದೆ, ಮಣ್ಣಿನ ಮಾತಿನ ಹೀಗೊಂದು ರಿಯಲ್ ಎಸ್ಟೇಟ್ ಮಾಡಿದರು. ನಾನು ಕೊಟ್ಟ ಮಾತಿಗೆ ನಿಲ್ಲುವವನು ಒಂದು ಸಾವಿರ ಮುಂಗಡವೇ ನನ್ನ ದುಡ್ಡು ನಾನು ಕೊಟ್ಟ ಮಾತೇ ಮಾತು. ಹೆಚ್ಚಿಗೆ ದುಡ್ಡು ಕೊಡಲು ಬಂದಿರುವ ಸೋದರ ಸಂಬಂಧಿಯ ದುಡ್ಡು ನನಗೆ ಬೇಡ. ಒಂದು ಸಾವಿರ ರೂಪಾಯಿಗೆ ಬಂದಿರುವ ಲಾಭದ ಹಣ ಎರಡು ಲಕ್ಷದ ಮೂವತ್ತು ಸಾವಿರವನ್ನು ಆ ವೈದ್ಯರೇ ತೆಗೆದುಕೊಳ್ಳಲಿ. ಅವರು ಒಪ್ಪಿದರೆ ನನ್ನ ಮನೆ ನಿಮಗೆ, ಅವರು ಒಪ್ಪದಿದ್ದರೆ ಸೋದರ ಸಂಬಂಧಿಯಾದರೂ ಸರಿ, ನನ್ನ ಮನೆ ಅವರಿಗೆ ಅಂದರೆ ಆ ವೈದ್ಯರಿಗೆ. ನನ್ನದು 'ಮಾತಿಗಾಗಿ ಬದುಕು' ಎಂದು ಇಬ್ಬರನ್ನೂ ಕೂರಿಸಿಕೊಂಡು ಹೇಳಿದರಂತೆ. ಆರ್.ಎನ್. ಜಯಗೋಪಾಲರ ಹೀಗೊಂದು ರಿಯಲ್ ಎಸ್ಟೇಟು ಇಬ್ಬರನ್ನೂ ದಂಗುಬಡಿಸಿದೆ. ಒಂದು ಸಾವಿರ ಕೊಟ್ಟ ಆ ವೈದ್ಯರು ನೀವು ಮಾತಿಗೆ ನಿಂತವರು. ನಾನಲ್ಲಿ ವಾಸಕ್ಕೆ ನಿಲ್ಲುತ್ತೇನೆ ಎಂದರಂತೆ. ಸೋದರ ಸಂಬಂಧಿ ಭಾವನ ವ್ಯಕ್ತಿತ್ವಕ್ಕೆ ಸೋತು ಭಾವುಕರಾಗಿ ಹೋದರಂತೆ.

ನೋಡಿ, ಹೀಗೊಂದು ರಿಯಲ್ ಎಸ್ಟೇಟು ವ್ಯಾಪಾರ–ವಹಿವಾಟಿನಲ್ಲೂ ನೈತಿಕತೆಯು ನಾಲಿಗೆಗೆ ಮಣ್ಣಿನ ಮಾತಾಯ್ತು. ಇತ್ತೀಚೆಗೆ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆಯ ಹಿಂಭಾಗದ ಆ ಮನೆಯ ಮುಂದೆ ನಾನು ಹಾದು ಹೋದಾಗ ಆರ್.ಎನ್. ಜಯಗೋಪಾಲ್ ನೆನಪಾದರು! ಆ ಮನೆ ನೆನಪಾಯಿತು! ಅದನ್ನು ನಿಮ್ಮೊಂದಿಗೆ ಹಂಚಿಕೊಂಡೆ ಅಷ್ಟೆ! ಏನಂತೀರಿ?

ಪೌತಿ ಖಾತೆ ಅಭಿಯಾನ ಸದುಪಯೋಗಕ್ಕೆ ರೈತರಿಗೆ ಸಲಹೆ

ಮೈಸೂರು, ಫೆ.5(ಎಸ್‌ಬಿಡಿ)– ತಾಲೂಕಿನಲ್ಲಿ ಪೌತಿ ಖಾತೆ ಅಭಿಯಾನ ನಡೆಯುತ್ತಿದ್ದು, ಈ ಅವಕಾಶವನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಹಶೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್ ಮನವಿ ಮಾಡಿದ್ದಾರೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆ, ಬರ ಪರಿಹಾರ ಇನ್ನಿತರ ಸರ್ಕಾರದ ಯೋಜನೆ ಗಳ ಸೌಲಭ್ಯ ಪಡೆಯಲು ಫ್ರೂಟ್ಸ್ ಐಡಿ ಕಡ್ಡಾಯವಾಗಿದೆ. ಆದರೆ ತಾಲೂಕಿನ ಹಲವು ರೈತರು, ತಮ್ಮ ಜಮೀನಿನ ಮೂಲ ಖಾತೆ ದಾರರು ನಿಧನ ಹೊಂದಿದ್ದರೂ ಹಲವು ವರ್ಷಗಳಿಂದ ಪೌತಿ ಖಾತೆ ಮಾಡಿಸಿಕೊಂಡಿಲ್ಲ. ಇದರಿಂದಾಗಿ ಸರ್ಕಾರದ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ. ಇಂತಹ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಜನವರಿ 22ರಿಂದ ತಾಲೂಕಿನಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪೌತಿ ವಾರಸು ಖಾತೆಯಾಗದೆ ಇರುವ ರೈತರು ಅಥವಾ ಹಕ್ಕುದಾರರು ಚಾಲ್ತಿ ಸಾಲಿನ ಪಹಣಿ(ಆರ್‌ಟಿಸಿ), ಕಂದಾಯ ಇಲಾಖೆಯಿಂದ ಪಡೆದ ಆರ್‌ಡಿಎಸ್ ವಂಶವೃಕ್ಷ, ಮೂಲ ಖಾತೆದಾರರ ಮರಣ ಪ್ರಮಾಣ ಪತ್ರ, ಅರ್ಜಿದಾರ ಹಾಗೂ ವಾರಸು ದಾರರ ಆಧಾರ್ ಕಾರ್ಡ್ ಇನ್ನಿತರ ದೃಢೀಕೃತ ದಾಖಲೆಗಳೊಂದಿಗೆ ಪೌತಿ ಖಾತೆ ಕೋರಿ ಅರ್ಜಿಯನ್ನು ಗ್ರಾಮ ಆಡಳಿತಾಧಿಕಾರಿಗಳಿಗೆ ಸಲ್ಲಿಸುವ ಮೂಲಕ ಅಭಿಯಾನವನ್ನು ಸದುಪಯೋಗಪಡಿಸಿಕೊಳ್ಳಿ ಎಂದು ತಹಸೀಲ್ದಾರ್ ಮಹೇಶ್‌ಕುಮಾರ್ ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗೆ ತಾಲೂಕಿನ ಆರ್‌ಆರ್‌ಟಿ ಶಿರಸ್ತೇದಾರ್ ಎನ್.ಕೆ. ಭರತ್ ಕುಮಾರ್ (9611199912), ಉಪ ತಹಶೀಲ್ದಾರ್‌ಗಳಾದ ಕುಬೇರ್ (9901313464), ಲತಾ ಶರಣಮ್ಮ (934144 3484), ನಿಂಗಪ್ಪ (9535277035), ರಾಜಸ್ವ ನಿರೀಕ್ಷಕರಾದ ರಾಘವೇಂದ್ರ ನಾಯಕ್(9739 597217), ಶಿವಕುಮಾರ್ (98454 38055), ಶಂಕರ್ (9449628328) ಹಾಗೂ ಲೋಹಿತ್ (9611668571) ಅವರನ್ನು ಸಂಪರ್ಕಿಸಬಹುದು ಎಂದು ತಹಶೀಲ್ದಾರ್ ತಿಳಿಸಿದ್ದಾರೆ.



ರಾಜ್ಯ ಮಟ್ಟದ ಅಬಾಕಸ್ ಬಿಇಎಂ ಪ್ಲಸ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ವಿಜಯವಿಠಲ ಶಾಲೆಯ ವಿದ್ಯಾರ್ಥಿ ಆರ್. ಪ್ರಾವ್ ಅವರನ್ನು ಕಲಾಮಂದಿರದಲ್ಲಿ ನಡೆದ ಬಿಇಎಂ ಪ್ಲಸ್ ಅಕಾಡೆಮಿ ಅಬಾಕಸ್ ಪದವಿ ಪ್ರದಾನ ಸಮಾರಂಭದಲ್ಲಿ ಅಭಿನಂದಿಸಲಾಯಿತು. ಬಿಇಎಂ ಪ್ಲಸ್ ನಿರ್ದೇಶಕ ಶ್ರೀಕಾಂತ್, ಸಿ.ಎ.ಅಕ್ಷಯ್ ಕೃಷ್ಣ ಪ್ರಶಸ್ತಿ ಪತ್ರ ಹಾಗೂ ಫಲಕ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಮಂಗಳವಾರ 6 ಫೆಬ್ರವರಿ 2024

ಮೈಸೂರಲ್ಲಿ ನಾಳೆಯಿಂದ 15ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ

7 ದಿನ ದೇಶದ ವಿವಿಧ ರಾಜ್ಯಗಳ ಪ್ರತಿನಿಧಿಗಳು ಭಾಗಿ

ಮೈಸೂರು,ಫೆ.5(ಬಿಎಲ್‌ಯು)–ಮೈಸೂರಿನಲ್ಲಿ 15ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ ಫೆಬ್ರವರಿ 7ರಿಂದ ಆರಂಭವಾಗಲಿದ್ದು, 7 ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ನೆಹರು ಯುವ ಕೇಂದ್ರ ಸಂಘಟನೆಯ ದಕ್ಷಿಣ ರಾಜ್ಯಗಳ ಪ್ರಾದೇಶಿಕ ನಿರ್ದೇಶಕ ಎಂ.ಎನ್.ನಟರಾಜ್ ತಿಳಿಸಿದರು.

ಮೈಸೂರಿನ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ವಿವರ ನೀಡಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ 7 ದಿನಗಳ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ ನಡೆಯಲಿದೆ ಎಂದರು.

ಫೆಬ್ರವರಿ 7ರಂದು ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಕ್ರೀಡಾ ಸಚಿವ ಬಿ.ನಾಗೇಂದ್ರ, ಶಾಸಕರಾದ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್ ಹಾಗೂ ಸುಮಲತಾ ಅಂಬರೀಷ್ ಕಾರ್ಯಕ್ರಮದಲ್ಲಿ ಹಾಜರಿರುವರು.

ಫೆಬ್ರವರಿ 7ರಿಂದ ಆರಂಭವಾಗುವ ಕಾರ್ಯಕ್ರಮ ಫೆ.12ರವರೆಗೆ 7 ದಿನಗಳ ಕಾಲ ನಡೆಯಲಿದ್ದು, ಜಾರ್ಖಂಡ್, ಮಹಾರಾಷ್ಟ್ರ, ಬಿಹಾರ ಮತ್ತು ಒಡಿಶಾ ರಾಜ್ಯಗಳ 200 ಯುವ ಜನರು ಮತ್ತು 20 ಮಂದಿ ಉಸ್ತುವಾರಿ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ನಟರಾಜ್ ವಿವರಿಸಿದರು.

ದೇಶದ ವಿವಿಧ ರಾಜ್ಯಗಳಿಂದ ಆಗಮಿಸುವ ಯುವ ಜನರು 7 ದಿನಗಳ ಕಾಲ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದು, ಸ್ಥಳೀಯ ಕಲೆ, ಸಂಸ್ಕೃತಿ, ಆಚಾರ–ವಿಚಾರ, ರೀತಿ–ರಿವಾಜು, ಉಡುಗೆ–ತೊಡುಗೆ, ಆಹಾರ ಪದ್ಧತಿ, ಜೀವನ ಶೈಲಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಸ್ಟೂಡೆಂಟ್ ಹಾಸ್ಟೆಲ್‌ನಲ್ಲಿ ಎಲ್ಲರಿಗೂ ಊಟ, ತಿಂಡಿ, ವಾಸ್ತವ್ಯದ ವ್ಯವಸ್ಥೆ ಮಾಡಲಾಗಿದೆ ಎಂದರು.

ಫೆಬ್ರವರಿ 9ರಂದು ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ಪ್ರತಿನಿಧಿಗಳನ್ನು ಮೈಸೂರು ಅರಮನೆ, ಚಾಮುಂಡಿಬೆಟ್ಟ, ಇನ್ಫೋಸಿಸ್ ಕ್ಯಾಂಪಸ್, ಕೆಆರ್‌ಎಸ್ ಹಾಗೂ ಸುತ್ತೂರು ಮಠಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ನೆಹರು ಯುವ ಕೇಂದ್ರ ಹಾಗೂ ನೆಹರು ಯುವ ಕೇಂದ್ರ ಸಂಘಟನೆ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿದೆ ಎಂದು ನಟರಾಜ್ ತಿಳಿಸಿದರು. ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಅಭಿಷೇಕ್ ಚವರೆ, ಸುವಾಸ್, ಸಂಜಯ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪುನೀತ್ ಹುಟ್ಟುಹಬ್ಬದ ಅಂಗವಾಗಿ ಉಚಿತ ಸಾಮೂಹಿಕ ವಿವಾಹ

ಮೈಸೂರು,ಫೆ.5(ಬಿಎಲ್‌ಯು)– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಮಾರ್ಚ್ 17ರಂದು ಮೈಸೂರಿನಲ್ಲಿ ಸಪ್ತಪದಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಡಾ.ಪುನೀತ್ ರಾಜ್‌ಕುಮಾರ್ ಸಮಾಜ ಸೇವಾ ಸಮಿತಿ ಅಧ್ಯಕ್ಷ ಎನ್.ರಾಜು ತಿಳಿಸಿದರು.



ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಉಚಿತ ಸಾಮೂಹಿಕ ವಿವಾಹ ಆಯೋಜನೆ ಮಾಡಲಾಗಿದೆ ಎಂದರು.

ಉಚಿತ ಸಾಮೂಹಿಕ ವಿವಾಹದಲ್ಲಿ ಭಾಗಿಯಾಗುವ ವಧುವಿಗೆ ಸೀರೆ, ಮಾಂಗಲ್ಯ, ಕಾಲುಂಗುರ ಹಾಗೂ ವರನಿಗೆ ಶಲ್ಯ, ಪಂಚೆ ಮತ್ತು ಶರ್ಟ್ ನೀಡಲಾಗುವುದು ಎಂದರು. ಹೆಚ್ಚಿನ ಮಾಹಿತಿಗೆ ಮಂಜು ನಾಥ್(9482545878), ಸತೀಶ್(9945888809), ಶಿವರಾಜ್ (8050064986) ಹಾಗೂ ಸೂರಿ(9008229950) ನ್ನು ಸಂಪರ್ಕಿಸುವಂತೆ ರಾಜು ಮನವಿ ಮಾಡಿದ್ದಾರೆ. ಸಮಿತಿ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಬಿಜೆಪಿ ಕಾರ್ಯಾಲಯದಲ್ಲಿ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾಗಿ ನಿಯುಕ್ತಿಗೊಂಡ ಹೆಚ್.ಜಿ.ಗಿರಿಧರ್, ಬಿ.ಎಂ.ರಘು, ಕೇಬಲ್ ಮಹೇಶ್ ಅವರನ್ನು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸನ್ಮಾನಿಸಿ, ಶುಭ ಕೋರಿದರು.



ಕನ್ನಡದ ನಿತ್ಯೋತ್ಸವ ಕವಿ ನಾಡೋಜ ಡಾ.ಕೆ.ಎಸ್.ನಿಸಾರ್ ಅಹಮದ್ ಅವರ 88ನೇ ಜನ್ಮದಿನಾಚರಣೆಯನ್ನು ಭೂಮಿಗಿರಿ ಪ್ರಕಾಶನ ವತಿಯಿಂದ ಆಚರಿಸಲಾಯಿತು. ಭೂಮಿಗಿರಿ ಪ್ರಕಾಶನದ ಎನ್ ಬೆಟ್ಟೇಗೌಡ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ,ಎಸ್.ಕೃಷ್ಣಕುಮಾರ್,ವಿಕ್ರಾಂತ್ ನಾಗರಾಜ್, ಒಕ್ಕಲಗೇರಿ ಶಿವಕುಮಾರ್, ಪಾಲ್ಕನ್ ಮಾದೇಗೌಡ, ಗೋವಿಂದ ಇತರರಿದ್ದರು.



ಮೈಸೂರಿಗೆ ಭೇಟಿ ನೀಡಿದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗದ ಸಂಚಾಲಕ ವರದರಾಜ ಅವರನ್ನು ಮೈಸೂರು ನಗರ ಹಾಗೂ ರಾಜ್ಯ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ನಗರ ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಎಸ್ಸಿ ಘಟಕದ ಅಧ್ಯಕ್ಷ ರಮೇಶ್, ಅಲ್ಪಸಂಖ್ಯಾತರ ಘಟಕದ ಕೈಸರ ಅಹಮದ್, ಎಸ್‌ಟಿ ಘಟಕದ ಅಧ್ಯಕ್ಷ ರೋಹಿತ್, ಕಾರ್ಮಿಕ ಘಟಕದ ಮಹಮದ್ ಶಿಫ್ವಾನ್, ನಗರ ಘಟಕದ ಸಿದ್ದಪ್ಪಾಜಿ, ವೆಂಕಟೇಶ್, ಕುಮಾರ್, ರವಿ, ದಿನೇಶ್, ಮಹೇಶ್, ರಾಜು, ರಾಮು, ರಾಜ್ಯ ಘಟಕದ ಕಮಲ ಅನಂತರಾಮ್, ಶ್ರೀಕಾಂತ್, ಮೊಗಣ್ಣಚಾರಿ, ಸ್ವರೂಪ್ ಇನ್ನಿತರರು ಉಪಸ್ಥಿತರಿದ್ದರು.

ಫೆ.16, ಸಾಮೂಹಿಕ ಸೂರ್ಯ ನಮಸ್ಕಾರ

ಮೈಸೂರು, ಫೆ.5– ಮೈಸೂರು ಯೋಗ ಒಕ್ಕೂಟದ 23ನೇ ವಾರ್ಷಿಕೋತ್ಸವ ಮತ್ತು ರಥಸಪ್ತಮಿ ಅಂಗವಾಗಿ ಫೆ.16ರಂದು ಬೆಳಗ್ಗೆ 5.45ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದ ಆವರಣದಲ್ಲಿ ಸಾಮೂಹಿಕ 108 ಸೂರ್ಯ ನಮಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಎಲ್ಲಾ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಯೋಗ ಕೇಂದ್ರಗಳ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಬಹುದು. ಭಾಗವಹಿಸುವವರು ಬಿಳಿ ಉಡುಪನ್ನು ಧರಿಸಿರಬೇಕು. ಎಲ್ಲರಿಗೂ ಪ್ರಾತಿನಿಧ್ಯ ಪತ್ರ ನೀಡಲಾಗುವುದು. ಮಾಹಿತಿಗೆ ಮೊ. 9481170530, 9886083318, 9449886387, 9945623146 ಸಂಪರ್ಕಿಸಬಹುದು.

ಫೆ.11, ಪ್ರಮತಿಯಲ್ಲಿ ಮುಕ್ತ ದಿನಾಚರಣೆ

ಮೈಸೂರು,ಫೆ.5–ಮೈಸೂರಿನ ಪ್ರಮತಿ ಹಿಲ್‌ವ್ಯೂ ಅಕಾಡೆಮಿ ಶಾಲೆಯಲ್ಲಿ ಫೆ.11ರಂದು ಮುಕ್ತ ದಿನಾಚರಣೆ ಆಯೋಜಿಸಲಾಗಿದೆ. ಅಲ್ಲದೆ ಮೂರರಿಂದ ಎಂಟು ವರ್ಷದ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ ಹಾಗೂ ಬಣ್ಣ ತುಂಬುವ ಸ್ಪರ್ಧೆ ನಡೆಯಲಿದೆ. 3ರಿಂದ 5 ವರ್ಷದ ಮಕ್ಕಳಿಗೆ ಬಣ್ಣ ತುಂಬುವ ಸ್ಪರ್ಧೆ, 6ರಿಂದ 8 ವರ್ಷದ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ನಡೆಸಲಾಗುವುದು. ಆಸಕ್ತರು ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 8746040476, 8762348149 ಸಂಪರ್ಕಿಸಬಹುದು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಇಂದಿನಿಂದ ಸಂಸ್ಕೃತಿ ಉತ್ಸವ ಸುತ್ತೂರು ಜಾತ್ರೆ







ದೇಶದಲ್ಲಿ ಬೇಕಾದಷ್ಟು ಧಾರ್ಮಿಕ ಕ್ಷೇತ್ರಗಳಿವೆ. ಗುರು ಪರಂಪರೆಯ ಶ್ರೀಮಠಗಳಿವೆ. ಅಂತೆಯೇ, ಬಹಳಷ್ಟು ಜಾತ್ರೆಗಳಿವೆ. ಆದರೆ ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವಿರುವ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರ ಮತ್ತು ಇಲ್ಲಿನ ಗುರು ಪರಂಪರೆ ಹಾಗೂ ಶ್ರೀ ಮಠದ ವಿಶಿಷ್ಟತೆಯೇ ಬೇರೆ. ಅದರಲ್ಲೂ ಇಲ್ಲಿ ಪ್ರತಿ ವರ್ಷ ಸಾಮಾನ್ಯವಾಗಿ ಜನವರಿ ತಿಂಗಳಲ್ಲಿ ಜರುಗುವ "ಸುತ್ತೂರು ಜಾತ್ರೆ" ಎಂದೇ ವಿಶ್ವ ವಿಖ್ಯಾತಿ ಹೊಂದಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವಂತೂ ಬಹು ವೈಶಿಷ್ಟ್ಯವಾಗಿದ್ದು, ಜಗತ್ತಿನ ಎಲ್ಲಾ ಜಾತ್ರೆಗಳಿಗೂ ಮಾದರಿಯಾಗುವಂತಾದ್ದು! ಈ ಸುತ್ತೂರು ಜಾತ್ರೆಯಲ್ಲಿ ಏನಿಲ್ಲ ಎನ್ನುವಂತಿಲ್ಲ. ಎಲ್ಲಾ ರೀತಿಯ ಪಾರಂಪರಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಜನಪದೀಯ, ಸಾಂಸ್ಕೃತಿಕ ಮಹೋತ್ಸವಗಳ ಮಹಾಸಂಗಮವಿದು.

ಒಟ್ಟು ಆರು ದಿನಗಳು ಬಹು ವೈವಿಧ್ಯಮಯವಾಗಿ ನಡೆಯುವ ಸುತ್ತೂರು ಜಾತ್ರೆಯಲ್ಲಿ ಮೊದಲ ದಿನ ಶ್ರೀಮಠದಿಂದ ಆದಿ ಜಗದ್ಗುರು ಶಿವಯೋಗಿಗಳ ಉತ್ಸವ ಮೂರ್ತಿಯನ್ನು ಕರ್ತೃಗದ್ದುಗೆಗೆ ಬಿಜಯಂಗೈಸಿಕೊಳ್ಳಲಾಗುವುದು. ಎರಡನೇ ದಿನ ಸಹಸ್ರ ಕುಂಭೋತ್ಸವ, ಮೂರನೇ ದಿನ ಬೆಳಿಗ್ಗೆ ರಥೋತ್ಸವ, ನಾಲ್ಕನೇ ದಿನ ಸಂಜೆ ಶ್ರೀ ಮಹದೇಶ್ವರ ಕೊಂಡೋತ್ಸವ ಮತ್ತು ಮುತ್ತಿನ ಪಲ್ಲಕ್ಕಿ ಉತ್ಸವ, ಐದನೇ ದಿನ ರಾತ್ರಿ ಲಕ್ಷ ದೀಪೋತ್ಸವದ ಮಹಾಬೆಳಕಿನಲ್ಲಿ ತೆಪ್ಪೋತ್ಸವ, ಆರನೇ ದಿನ ಅನ್ನ ಬ್ರಹ್ಮೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಕೊಂಡೋತ್ಸವಗಳು ಲಕ್ಷಾಂತರ ಭಕ್ತ ಸಮೂಹದ ನಡುವೆ ಜರುಗುತ್ತವೆ. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿರುವ ಕರ್ತೃಗದ್ದುಗೆ ಮತ್ತು ಪುರಾಣ ಪ್ರಸಿದ್ಧ ಶ್ರೀಸೋಮೇಶ್ವರ, ಶ್ರೀಮಹದೇಶ್ವರ, ಶ್ರೀಶಂಕರ ನಾರಾಯಣ, ಶ್ರೀವೀರಭದ್ರೇಶ್ವರ, ಶ್ರೀನಾರಾಯಣ ಸ್ವಾಮಿ ದೇವಾಲಯಗಳಲ್ಲಿ ತ್ರಿಕಾಲ ಪೂಜೆ, ಮಹಾರುದ್ರಾಭಿಷೇಕ, ನವನೀತಾಲಂಕಾರ, ಹಸಿರುವಾಣಿ ಅಲಂಕಾರ ಹಾಗೂ ಗುರು ಪರಂಪರೆಯ ಸಂಸ್ಮರಣೋತ್ಸವಗಳು ಭಕ್ತಿಯ ದ್ಯೋತಕವಾಗಿ ನಡೆಯುತ್ತವೆ. ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ, ಛತ್ರಿ, ಚಾಮರ, ಸೂರಾಪಾನಿ, ಗಾರುಡಿ ಗೊಂಬೆ, ಮರಗಾಲು ಕುಣಿತ, ನೃತ್ಯ, ವೀರಗಾಸೆ, ಡೊಳ್ಳು ಹಾಗೂ ಪೂಜಾ ಕುಣಿತ, ಕರಡಿ ಮೇಳ, ನಾದಸ್ವರಗಳೊಂದಿಗೆ ಬೇರೆ ಬೇರೆ ರಾಜ್ಯಗಳ ವಿವಿಧ ಜನಪದ ಕಲಾತಂಡಗಳು ಮೇಳೈಸಿ ಜರುಗುವ ಸುತ್ತೂರು ಜಾತ್ರೆಯ ವೈಭವವನ್ನು ನೋಡಿಯೇ ಸವಿಯಬೇಕು.

ಶ್ರೀ ಕ್ಷೇತ್ರದ ಇತಿಹಾಸ: ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಕಥೆ, ಕಂಚಿಯ ರಾಜೇಂದ್ರ ಚೋಳನಿಗೂ ತಲಕಾಡಿನ ಗಂಗರಾಜ ರಾಚಮಲ್ಲನಿಗೂ ಬಹಳ ಕಾಲದಿಂದಲೂ ಇದ್ದ ರಾಜಕೀಯ ದ್ವೇಷಾಗ್ನಿಯಿಂದ ಇವರಿಬ್ಬರೂ ಯುದ್ಧೋನ್ಮಾದದಲ್ಲಿ ಮುಳುಗಿ ಒಬ್ಬರನ್ನೊಬ್ಬರು ಕೊಲ್ಲಲು ಭಾರೀ ಸೈನ್ಯದೊಡನೆ ಕಾದಾಟಕ್ಕೆ ನುಗ್ಗುತ್ತಾರೆ. ಆಗ ರಾಜೇಂದ್ರ ಚೋಳನ ಕುದುರೆ ಏನು ಮಾಡಿದರೂ ಹಿಡಿತಕ್ಕೆ ಸಿಗದೆ ಶರವೇಗದಲ್ಲಿ ಮಿಂಚಿನಂತೆ ಓಡುತ್ತದೆ. ಹೀಗೆ ಓಡಿ ಬಂದ ಕುದುರೆ ದಕ್ಷಿಣಕಾಶಿ ಎಂದೇ ಹೆಸರಾದ ಕಪಿಲಾ ನದಿ ತೀರದಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಸುತ್ತ ಭಕ್ತಿಯಿಂದ ಪ್ರದಕ್ಷಿಣೆ ಹಾಕಿ ಅವರ ಬಳಿ ಶಾಂತವಾಗಿ ನಿಲ್ಲುತ್ತದೆ. ತನ್ನ ಮೆಚ್ಚಿನ ಕುದುರೆಯ ವರ್ತನೆ ಕಂಡು ಅಚ್ಚರಿಗೊಂಡ ರಾಜೇಂದ್ರ ಚೋಳ ಅಲ್ಲಿ ಧ್ಯಾನಮಗ್ನರಾಗಿದ್ದ ಶ್ರೀಶಿವರಾತ್ರೀಶ್ವರ ಶಿವಯೋಗಿ ಮಹಾಮುನಿಗಳನ್ನು ಕಂಡು ಮತ್ತಷ್ಟು ಮಹದಾಶ್ಚರ್ಯದಿಂದ ಕೂಡಲೇ ಕುದುರೆಯಿಂದಿಳಿದು ಭಕ್ತಿಯಿಂದ ಅವರ ಪಾದ ಕಮಲಗಳಿಗೆರಗಿ ಪೂಜಿಸುತ್ತಾನೆ. ಅಷ್ಟರಲ್ಲಿ ಇವನನ್ನು ಹಿಂಬಾಲಿಸಿಕೊಂಡು ಬಂದ ರಾಚಮಲ್ಲನೂ ಅಲ್ಲಿನ ಘಟನೆ ನೋಡಿ ಶ್ರೀಶಿವರಾತ್ರೀಶ್ವರರಿಗೆ ಶಿರಬಾಗಿ ನಮಿಸುತ್ತಾನೆ. ಆಗ ಧ್ಯಾನದಿಂದ ಕಣ್ತೆರೆದ ತೇಜೋಮೂರ್ತಿ ಶ್ರೀಶಿವರಾತ್ರೀಶ್ವರ ಮಹಾ ಮುನಿಗಳು ಯುದ್ಧದಿಂದಾಗುವ ಅನಾಹುತ ಮತ್ತು ದುರಂತಗಳನ್ನು ವಿವರಿಸಿ ಶಾಂತಿ, ಸಂಯಮ, ಸಹಬಾಳ್ವೆಯಲ್ಲಿ ಮನುಷ್ಯತ್ವದಿಂದ ಬದುಕಬೇಕೆಂದು ಉಪದೇಶಿಸಿ ಇಬ್ಬರಿಗೂ ಆಶೀರ್ವದಿಸುತ್ತಾರೆ. ಆ ಕ್ಷಣ ಅವರಿಬ್ಬರಲ್ಲಿದ್ದ ದ್ವೇಷದ ಅಗ್ನಿ ತಣ್ಣಗಾಗಿ ಯುದ್ಧೋನ್ಮಾದ ಇಳಿಯುತ್ತದೆ. ಮಾನವತೆಯ ಮಹಾಬೆಳಕು ಪ್ರಜ್ವಲಿಸಿ ಅವರಲ್ಲಿ ಪರಿವರ್ತನೆಯ ಹೂವು ಅರಳಿ ರಾಜರೀರ್ವರೂ ಯುದ್ಧಕ್ಕೆ ತಿಲಾಂಜಲಿ ಹೇಳುತ್ತಾರೆ. ಮತ್ತು ತಮಗೆ ದರ್ಶನ ನೀಡಿದ ಈ ಪುಣ್ಯ ಸ್ಥಳದಲ್ಲಿಯೇ ತಾವು ನೆಲೆಗೊಳ್ಳಬೇಕೆಂದು ಶ್ರೀಶಿವರಾತ್ರೀಶ್ವರ ಮುನಿಗಳಲ್ಲಿ ಕೋರಿಕೊಂಡು ಅವರು ಅಲ್ಲೇ ನೆಲೆಸುವಂತೆ ಮಾಡುತ್ತಾರೆ.

ಆ ಪುಣ್ಯ ಸ್ಥಳವೇ ಈ ಸುತ್ತೂರು ಶ್ರೀ ಕ್ಷೇತ್ರ. ಮಾನವತೆಯ ನೆಲೆಯಲ್ಲಿ ಆದಿಗುರು ಶ್ರೀಶಿವರಾತ್ರೀಶ್ವರರಿಂದ ಉದಯವಾದ ಇಲ್ಲಿನ ಸುತ್ತೂರು ವೀರಸಿಂಹಾಸನ ಮಠವು ಹತ್ತು ಶತಮಾನಗಳಿಗೂ ಮೀರಿದ ಸುದೀರ್ಘ ಪರಂಪರೆಯನ್ನು ಹೊಂದಿದ್ದು ಆದಿಗುರು ಶ್ರೀಶಿವರಾತ್ರೀಶ್ವರ ಭಗವತ್ಪಾದರ (ಕ್ರಿ.ಶ. 950–1030) ಆದಿಯಾಗಿ ರಾಜಗುರುತಿಲಕ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು (1926–1986) ಸೇರಿದಂತೆ ಇಪ್ಪತ್ಮೂರು ಸಾರ್ಥಕ ಜಗದ್ಗುರುಗಳ ಸೇವಾ ಕೈಂಕರ್ಯಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಮಾನವ ಕುಲದ ಉದ್ಧಾರಕ್ಕಾಗಿ ಈ ಮಹಾತ್ಮರೆಲ್ಲರೂ ಕಂಡ ಮಹಾಕನಸುಗಳನ್ನೆಲ್ಲಾ ಸಾಕಾರಗೊಳಿಸುವತ್ತ ಟೊಂಕಕಟ್ಟಿ ನಿಂತಿರುವ ಪ್ರಸ್ತುತ 1986 ರಿಂದ 24ನೇ ಪೀಠಾಧಿಕಾರಿಗಳಾಗಿ ಕಾಯಕ ನಿರತರಾಗಿರುವ ಕಾಯಕಯೋಗಿ ಶ್ರೀ ಶಿವರಾತ್ರಿದೇಶೀಕೇಂದ್ರ ಮಹಾಸ್ವಾಮಿಗಳು ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಎಲ್ಲಕ್ಕಿಂತ ಮಿಗಿಲಾಗಿ "ಶಿಕ್ಷಣ ಯಜ್ಞ" ವನ್ನು ನಡೆಸಿ ಇಡೀ ಜಗತ್ತೇ ಸುತ್ತೂರಿನತ್ತ ಸುಳಿಯುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸಾಧನೆ: ಶಿಕ್ಷಣದ ವಿಷಯಕ್ಕೆ ಬಂದರೆ ಸುತ್ತೂರು ಶ್ರೀ ಮಠದ ಶೈಕ್ಷಣಿಕ ಸಾಧನೆಗೆ ಸರಿಗಟ್ಟುವ ಮಠವೇ ಆಗಲಿ, ಸಂಸ್ಥೆಯೇ ಆಗಲಿ ಬಹುಶಃ ಇಡೀ ವಿಶ್ವದಲ್ಲೇ ಮತ್ತೊಂದಿರಲಾರದೇನೋ! ಹಾಗೆಯೇ ಇದರ ಹಿಂದಿನ ಧೀಶಕ್ತಿಯಾಗಿ ಶಿಕ್ಷಣ ಯಜ್ಞವನ್ನು ಒಂದು ತಪಸ್ಸು ಮಾಡಿಕೊಂಡಿರುವ ದೂರದೃಷ್ಟಿಯುಳ್ಳ ಇಂಥ ಪವಾಡ ಸದೃಶರಾದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳಂಥವರೂ ಕೂಡ ಪ್ರಪಂಚದಲ್ಲಿ ಅಪರೂಪವೆ! ಊಟ ಮತ್ತು ವಸತಿಗಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅನುಭವಿಸುತ್ತಿದ್ದ ಕಷ್ಟವನ್ನು ಕಂಡು ಹಿಂದಿನ ಜಗದ್ಗುರುಗಳಾಗಿದ್ದ ರಾಜಗುರು ತಿಲಕ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಬಾಡಿಗೆ ಮನೆಯೊಂದರಲ್ಲಿ 1941ರಲ್ಲಿ ಕೇವಲ ಹನ್ನೆರಡು ಮಂದಿ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಆರಂಭಿಸಿ ಅನ್ನ ಮತ್ತು ಶಿಕ್ಷಣ ದಾಸೋಹದ ಬೀಜ ಬಿತ್ತಿದ್ದರು. ಹಲವಾರು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಉದಯದೊಡನೆ ಗಿಡವಾಗಿ ಬೆಳೆಯತೊಡಗಿ ಇದೀಗ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ' ಎಂಬ ನಾಮಾಂಕಿತದಲ್ಲಿ ಹೆಮ್ಮರವಾಗಿ ಬೆಳೆದಿದೆ. ಒಂದು ರೀತಿಯಲ್ಲಿ ಸುತ್ತೂರು ಶ್ರೀ ಕ್ಷೇತ್ರ ಜೆ.ಎಸ್.ಎಸ್. ಮಹಾವಿದ್ಯಾ ಪೀಠದಿಂದಾಗಿ 'ಶಿಕ್ಷಣ ಕಾಶಿ'ಯಾಗಿ ರೂಪುಗೊಂಡಿದೆ.

ಶಿಶುವಿಹಾರದ ವಿದ್ಯಾರ್ಥಿಯಾಗಿ ಇಲ್ಲಿಗೆ ಪ್ರವೇಶಿಸಿದರೆ ಸಾಕು,ಉನ್ನತ ಪದವಿಯೊಡನೆ ಶಿಕ್ಷಕನೋ, ವೈದ್ಯನೋ, ವಿಜ್ಞಾನಿಯೋ, ಇಂಜಿನಿಯರೋ, ಆಡಳಿತಗಾರನೋ ಆಗಿ ಇಲ್ಲಿಂದ ಹೊರಹೊಮ್ಮಿ ಬರಬಹುದು. ಅಷ್ಟರಮಟ್ಟಿಗೆ ಶಿಶುವಿಹಾರದಿಂದ ಹಿಡಿದು ವೈದ್ಯಕೀಯ, ತಾಂತ್ರಿಕ ಕಾಲೇಜುಗಳ ತನಕ ಎಲ್ಲಾ ಬಗೆಯ ಉನ್ನತ ಶಿಕ್ಷಣಗಳೂ ಇಲ್ಲಿ ಲಭ್ಯ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಲ್ಲಿ ಯಾವುದೂ ಇಲ್ಲ ಎನ್ನುವಂತಿಲ್ಲ. ಹತ್ತಾರು ಪ್ರಾಥಮಿಕ ಶಿಕ್ಷಕರ ಮತ್ತು ಪ್ರೌಢಶಿಕ್ಷಕರ ತರಬೇತಿಯ ಡಿ.ಎಡ್, ಬಿ.ಎಡ್, ಸಿ.ಪಿ.ಎಡ್, ಬಿ.ಪಿ.ಎಡ್, ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಆಯುರ್ವೇದ ಕಾಲೇಜುಗಳು, ಕಾನೂನು ಕಾಲೇಜುಗಳು, ಹಿಂದಿ ವಿದ್ಯಾಲಯ, ಸಂಸ್ಕೃತ ಪಾಠಶಾಲೆ, ನರ್ಸಿಂಗ್ ಕಾಲೇಜುಗಳು, ಫಾರ್ಮಸಿ ಕಾಲೇಜುಗಳು, ಕೇಂದ್ರೀಯ ಶಾಲೆಗಳು, ವೃತ್ತಿಪರ ಶಿಕ್ಷಣ ಸಂಸ್ಥೆಗಳು, ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಐನೂರಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಇಲ್ಲಿ ಜ್ಞಾನ ದೀಪಗಳಾಗಿ ಬೆಳಗುತ್ತಿವೆ. ಸುತ್ತೂರಿನಂತಹ ಪುಟ್ಟ ಗ್ರಾಮದಿಂದ ಹಿಡಿದು ದೂರದ ಅಮೆರಿಕಾದಂಥ ವಿದೇಶಗಳವರೆಗೂ ಜೆಎಸ್‌ಎಸ್ ವಿದ್ಯಾಸಂಸ್ಥೆಗಳು ವಿಸ್ತಾರಗೊಂಡಿವೆ. ಸದಾಶಯದಿಂದ ಶಿಕ್ಷಣ ಬೀಜವನ್ನು ಬಿತ್ತಿದ್ದ ಹಿಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರಾದರೂ ಅವರ ಆಶಯವನ್ನೂ ಮೀರಿ ಅದನ್ನು ಅತ್ಯದ್ಭುತವಾಗಿ ಬೆಳೆಸಿದ ಕೀರ್ತಿ ಇಂದಿನ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮಿಗಳಿಗೆ ಸಂಪೂರ್ಣವಾಗಿ ಸಲ್ಲುತ್ತದೆ. ಅಂದು ಕೇವಲ ಹನ್ನೆರಡು ವಿದ್ಯಾರ್ಥಿಗಳಿಂದ ಬಾಡಿಗೆ ಮನೆಯಲ್ಲಿ ಆರಂಭವಾದ ಶಿಕ್ಷಣ ಕೈಂಕರ್ಯ ಇಂದು ಸ್ವಂತ ನೆಲದಲ್ಲಿ ವಿಶ್ವದ ಉದ್ದಗಲಕ್ಕೂ ಹಿಮಾಲಯದಂತೆ ಬೆಳೆದಿದ್ದು ಅರ್ಧ ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಜೆ.ಎಸ್.ಎಸ್. ಮಹಾವಿದ್ಯಾಪೀಠದ ಬೃಹತ್ ಆಲದ ನೆರಳಿನಲ್ಲಿದ್ದಾರೆಂದರೆ ಇದರ ಚೈತನ್ಯ ಶಕ್ತಿಯಾಗಿರುವ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಶಿಕ್ಷಣ ಯಜ್ಞಕ್ಕೆ ಎಂಥವರೂ ಶರಣೆನ್ನಲೇಬೇಕು.

ಪ್ರತಿವರ್ಷ ಪರಂಪರಾನುಗತವಾಗಿ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜರುಗುವ ಸುತ್ತೂರು ಜಾತ್ರಾ ಮಹೋತ್ಸವವಂತೂ ಇಡೀ ದೇಶ ಇತ್ತ ತಿರುಗಿ ನೋಡುವಂಥಾದ್ದು. ಇಂದಿನ ಆಧುನಿಕ ಸಮಾಜದ ಅಭಿವೃದ್ಧಿಗೆ ಪೂರಕವಾದ ಹಲವು ಹತ್ತು ಸಾರ್ಥಕ ಕಾರ್ಯಕ್ರಮಗಳು ಇಲ್ಲಿ ಮೇಳೈಸಿ ಸುತ್ತೂರಿಗೆ ಸುತ್ತೂರೇ ನಾಡಿನ ಲಕ್ಷಾಂತರ ಜನ ಸಮೂಹದಿಂದ ಜಾತ್ರೆಯಲ್ಲಿ ಸಂಭ್ರಮಿಸುವುದುಂಟು. ದೇಶದ ಪ್ರಧಾನಿ ಮತ್ತು ರಾಷ್ಟ್ರಪತಿಯಾದಿಯಾಗಿ ರಾಷ್ಟ್ರದ ಗಣ್ಯಾತಿಗಣ್ಯರೆಲ್ಲಾ ಸುತ್ತೂರು ಜಾತ್ರೆಗೆ ಭೇಟಿ ನೀಡುತ್ತಾರೆಂದರೆ ಸುತ್ತೂರು ಶ್ರೀ ಕ್ಷೇತ್ರದ ಅಪೂರ್ವತೆ ಎಂಥವರಿಗೂ ಅರಿವಾದೀತು. ಸುತ್ತೂರೆಂದರೆ ಹಾಗೇನೇ ಮಹಾತ್ಮರ ಪಾದ ಧೂಳಿನಿಂದ ಪಾವನವಾಗಿರುವ ಪುಣ್ಯ ಸ್ಥಳ.

ಧಾರ್ಮಿಕ ಉತ್ಸವಗಳ ಜೊತೆಗೆ ವಾರ ಪೂರ್ತಿ ಆರೋಗ್ಯ ಮೇಳ, ಕೃಷಿ ಮೇಳ, ಉತ್ಪಾದಕ ಮತ್ತು ಗ್ರಾಹಕ ಮೇಳ, ಕ್ರೀಡಾ ಮೇಳ, ಸಾಂಸ್ಕೃತಿಕ ಮೇಳ, ಶೈಕ್ಷಣಿಕ ಮೇಳ, ಸಾಹಿತ್ಯ ಮತ್ತು ಪುಸ್ತಕ ಮೇಳ, ಸರ್ವಧರ್ಮ ಸಮ್ಮಿಲನ, ಸಾಮೂಹಿಕ ವಿವಾಹ, ವಿವಿಧ ವಸ್ತು ಪ್ರದರ್ಶನಗಳು, ದನಗಳ ಜಾತ್ರೆ, ಜಾನಪದ ಜಾತ್ರೆ, ಕುಸ್ತಿ ಪಂದ್ಯಾವಳಿ, ನಗೆ ಉತ್ಸವ, ನಾಟಕ, ನೃತ್ಯ, ವಚನಗಾಯನ, ಸುಗಮ ಸಂಗೀತ, ಯಕ್ಷಗಾನ... ಹೀಗೆ ಎಲ್ಲಾ ರೀತಿಯ ಕಾರ್ಯಕ್ರಮಗಳು, ಉತ್ಸವಗಳು ಇಲ್ಲಿ ಸಾರ್ಥಕ ರೀತಿಯಲ್ಲಿ ನಡೆಯುತ್ತವೆ. ಅಲ್ಲದೆ ಸಾಮಾಜಿಕ ಜಾಗೃತಿ ಉಂಟು ಮಾಡುವಲ್ಲಿ "ಸುತ್ತೂರು ಜಾತ್ರೆ" ಸಂಪೂರ್ಣವಾಗಿ ತನ್ನನ್ನು ತೆರೆದು ಕೊಳ್ಳುತ್ತದೆಂಬುದೇ ಇಲ್ಲಿನ ವಿಶೇಷ.

ಇದೇ ಫೆಬ್ರವರಿ 6 ರಿಂದ 11ರವರೆಗೆ ಆರು ದಿನಗಳ ಕಾಲ ಸುಪ್ರಸಿದ್ಧ ಸುತ್ತೂರು ಜಾತ್ರೆ ಜರುಗುತ್ತಿದೆ. ತನ್ನಿಮಿತ್ತ ಈ ಲೇಖನ.

ಮೈಸೂರು ಹೃದಯಭಾಗ ಕೆ.ಆರ್.ವೃತ್ತದಲ್ಲೇ ಫುಟ್‌ಪಾತ್ ಅತಿಕ್ರಮಿಸಿ ವ್ಯಾಪಾರ ವಹಿವಾಟು; ಕಣ್ಮುಚ್ಚಿ ಕುಳಿತಿರುವ ಪಾಲಿಕೆ ಅಧಿಕಾರಿ ವರ್ಗ





ಮೈಸೂರಿನ ಹೃದಯ ಭಾಗದಲ್ಲಿರುವ ಗಾಂಧಿಚೌಕ ಸಂಪರ್ಕಿಸುವ ರಸ್ತೆಯಲ್ಲಿ ರಸ್ತೆಬದಿ ವ್ಯಾಪಾರಿಗಳು ರಸ್ತೆಯಲ್ಲೇ ವ್ಯಾಪಾರ ವಹಿವಾಟು ನಡೆಸುತ್ತಿರುವ ದೃಶ್ಯ.

ಮೈಸೂರು,ಫೆ.5(ಎಸ್‌ಪಿಎನ್)– ಕೆ.ಆರ್.ವೃತ್ತದಲ್ಲಿ ಫುಟ್‌ಪಾತ್ ಅತಿಕ್ರಮಣದಿಂದ ಪಾದಚಾರಿಗಳ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದ್ದು, ಈ ಜಾಗದಲ್ಲಿ ಬೀದಿ ವ್ಯಾಪಾರಿಗಳಿಗೆ ಕಡಿವಾಣ ಹಾಕುವಂತೆ ಸಾರ್ವಜನಿಕರು, ವಾಹನ ಸವಾರರು, ಹಿರಿಯ ನಾಗರಿಕರು ಒತ್ತಾಯಿಸಿದ್ದಾರೆ.

ನ್ಯೂ ಸಯ್ಯಾಜಿರಾವ್ ರಸ್ತೆ, ದೇವರಾಜ ಮಾರುಕಟ್ಟೆ ಆಸುಪಾಸು, ಗಾಂಧಿಚೌಕ ಸೇರಿದಂತೆ ಇತರೆ ಪ್ರಮುಖ ರಸ್ತೆಗಳ ಇಕ್ಕೆಲಗಳಲ್ಲಿ ರಸ್ತೆಬದಿ ವ್ಯಾಪಾರಿಗಳು ರಸ್ತೆಯಲ್ಲೇ ವ್ಯಾಪಾರ ನಡೆಸುತ್ತಿದ್ದಾರೆ. ಒಂದೆಡೆ ವಾಹನಗಳ(ದ್ವಿ ಚಕ್ರ ವಾಹನ, ಕಾರು) ಪಾರ್ಕಿಂಗ್, ಮತ್ತೊಂದೆಡೆ ಬೀದಿ ಬದಿ ವ್ಯಾಪಾರ. ಇದರಿಂದ ಪಾದಚಾರಿಗಳು ರಸ್ತೆಗಿಳಿದು ಓಡಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಲ್ಲೂ ಈ ಮಾರ್ಗದಲ್ಲಿ ಹಿರಿಯರ ಓಡಾಟ ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಅದರಲ್ಲೂ ಮಹಿಳಾ ಪಾದಚಾರಿಗಳು ಓಡಾಟದ ಸಂದರ್ಭದಲ್ಲಿ ರೋಡ್ ರೋಮಿಯೊಗಳ ಕಿಟಲೆ ಬೇರೆ!. ಇದರ ಬಗ್ಗೆ ದೇವರಾಜ, ಲಷ್ಕರ್ ಠಾಣೆ ಪೊಲೀಸರು ಹಾಗೂ ಪಾಲಿಕೆ ಆಯುಕ್ತರಿಗೆ ಮನವಿ ಮಾಡಿದರೂ ಏನು ಪ್ರಯೋಜನವಾಗುತ್ತಿಲ್ಲ ಎನ್ನುತ್ತಾರೆ ಪಾದಚಾರಿ ಗಿರೀಶ್.

ಗಾಂಧಿ ಚೌಕದ ಬಳಿ ಕಿರಿದಾದ ರಸ್ತೆ: ಪುರಭವನದ ಮುಂದಿರುವ ದೊಡ್ಡ ಗಡಿಯಾರದ ವೃತ್ತದಿಂದ ಗಾಂಧಿಚೌಕ ಹಾದು ಸಯ್ಯಾಜಿರಾವ್ ರಸ್ತೆ ಸಂಪರ್ಕಿಸುವ ರಸ್ತೆಯ ಎರಡೂ ಬದಿಯ ಫುಟ್‌ಪಾತ್ ಅತಿಕ್ರಮಣದಿಂದ ಪಾದಚಾರಿಗಳು ರಸ್ತೆಯಲ್ಲೇ ಓಡಾಡುವಂತಾಗಿದೆ. ಈ ರಸ್ತೆಗಳಲ್ಲಿ ಫುಟ್‌ಪಾತ್ ಒತ್ತುವರಿ ಮಾಡಿ ವ್ಯಾಪಾರ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಗರ ಪಾಲಿಕೆಗೆ ಈ ಕುರಿತು ದೂರು ನೀಡಿದರೆ, ಅಭಯ ತಂಡ ಬಂದು ಸಾಮಾಗ್ರಿಗಳನ್ನು ತುಂಬಿಕೊಂಡು ಹೋಗುತ್ತಾರೆ. ಹಾಗೆ ಹೋದ ಐದೇ ನಿಮಿಷಕ್ಕೆ ಮತ್ತೆ ಪಾಲಿಕೆ ಅಧಿಕಾರಿಗಳಿಂದ ಬಿಡಿಸಿಕೊಂಡು ಬಂದು ಅದೇ ಜಾಗದಲ್ಲಿ ವ್ಯಾಪಾರ ಶುರು ಮಾಡಿರುತ್ತಾರೆ. ಇದರಿಂದ ಈ ಸಮಸ್ಯೆ ಬಗ್ಗೆ ಯಾರಿಗೂ ದೂರು ಕೊಟ್ಟರೂ ಪ್ರಯೋಜನವಾಗುತ್ತಿಲ್ಲ ಎಂದು 'ಮೈಸೂರು ಮಿತ್ರ'ನ ಬಳಿ ಬೇಸರ ವ್ಯಕ್ತಪಡಿಸಿದರು.



ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್ ರಸ್ತೆ ಬದಿ ವ್ಯಾಪಾರಿಗಳು ಫುಟ್‌ಪಾತ್ ಆವರಿಸಿರುವ ದೃಶ್ಯ.

ಕಾಮುಕರ ಕಿಟಲೆ: ನಗರದ ಕೆ.ಆರ್. ವೃತ್ತದ ಆಸುಪಾಸು ರಸ್ತೆಯಲ್ಲಿ ಗ್ರಾಮೀಣ ಭಾಗದ ಯುವತಿಯರು ಕಾಲೇಜು ಮುಗಿಸಿ, ಗ್ರಾಮಾಂತರ ಬಸ್ ನಿಲ್ದಾಣಕ್ಕೆ ತೆರಳುವಾಗ ಕಾಮುಕರ ಕಿಟಲೆಗಳು ಹೆಚ್ಚಾಗಿವೆ. ಇದರ ಬಗ್ಗೆ ಕ್ರಮ ವಹಿಸುವಂತೆ ನಗರ ಪೊಲೀಸರಲ್ಲಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎನ್ನುತ್ತಾರೆ ಪಿಯು ಕಾಲೇಜಿನ ವಿದ್ಯಾರ್ಥಿನಿ ಸುಮಾ ಮತ್ತು ಇತರೆ ಸ್ನೇಹಿತರು.

ಜಿಲ್ಲಾಡಳಿತ ಜಾಣ ಕುರುಡು: ನಾವು ರಸ್ತೆಬದಿ ವ್ಯಾಪಾರಕ್ಕೆ ವಿರೋಧಿಸುತ್ತಿಲ್ಲ. ಆದರೆ, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುವಂತೆ ಫುಟ್‌ಪಾತ್ ಅತಿಕ್ರಮಣ ಮಾಡಿಕೊಂಡು ವ್ಯಾಪಾರ ಮಾಡುವುದಕ್ಕೆ ನಮ್ಮ ವಿರೋಧವಿದೆ. ಈ ಸಮಸ್ಯೆ ಬಗ್ಗೆ ಪೊಲೀಸ್ ಇಲಾಖೆ, ನಗರಪಾಲಿಕೆ ಅಧಿಕಾರಿಗಳು, ಜಿಲ್ಲಾಡಳಿತಕ್ಕೆ ಸಂಪೂರ್ಣ ಮಾಹಿತಿ ಇದ್ದರೂ ಫುಟ್‌ಪಾತ್ ತೆರವಿಗೆ ಮುಂದಾಗುತ್ತಿಲ್ಲ ಎಂದು ತೀವ್ರ ಆಕ್ರೋಶ ಹೊರಹಾಕಿದರು.

ಮಂಡ್ಯದಲ್ಲಿ ಬಿಜೆಪಿಯಿಂದ ಹನುಮ ಧ್ವಜ ವಿತರಣೆ ಅಭಿಯಾನ

ಮಂಡ್ಯ,ಫೆ.5– ಕೆರಗೋಡು ಗ್ರಾಮದ ಹನುಮ ಧ್ವಜ ವಿವಾದದ ಹಿನ್ನೆಲೆಯಲ್ಲಿ ಕೆರಗೋಡು ಗ್ರಾಮದ ಪ್ರತಿ ಮನೆ ಮನೆಗಳಿಗೆ ಹನುಮ ಧ್ವಜ ವಿತರಣೆ ಅಭಿಯಾನ ನಡೆಸಿದ್ದ ಜಿಲ್ಲಾ ಬಿಜೆಪಿ ಘಟಕ ಸೋಮವಾರದಿಂದ ಮಂಡ್ಯ ನಗರದಲ್ಲಿ ಧ್ವಜ ವಿತರಣೆ ಅಭಿಯಾನ ಆರಂಭಿಸಿದೆ.

ಮಂಡ್ಯ ನಗರದ ಶಂಕರನಗರ, ಗುತ್ತಲು, ಚಿಕ್ಕಮಂಡ್ಯ ಕೆರೆ ಅಂಗಳ ಸೇರಿದಂತೆ ಹಲವೆಡೆ ಮನೆ ಮನೆಗೆ ಹನುಮ ಧ್ವಜ ವಿತರಣೆ ಕಾರ್ಯಕ್ರಮ ನಡೆಸಿತು.

ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಮಂಜುಳಾ ಹಾಗೂ ಜಿಲ್ಲಾಧ್ಯಕ್ಷ ಡಾ. ಇಂದ್ರೇಶ್ ನೇತೃತ್ವದಲ್ಲಿ ಹನುಮ ಧ್ವಜ ಹಿಡಿದು ಮೆರವಣಿಗೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಬಳಿಕ ಮನೆ ಮನೆಗೆ ಹನುಮ ಧ್ವಜ ಕಟ್ಟಿ 'ಜೈ ಶ್ರೀರಾಮ್, ಜೈ ಹನುಮ' ಎಂದು ಘೋಷಣೆ ಕೂಗಿದರು.



ಮಂಡ್ಯ ನಗರದಲ್ಲಿ ಬಿಜೆಪಿ ವತಿಯಿಂದ ಪ್ರತಿ ಮನೆ ಮನೆಗಳಿಗೆ ಹನುಮ ಧ್ವಜ ವಿತರಣೆ ಅಭಿಯಾನ ಸೋಮವಾರ ನಡೆಯಿತು.

ಬಳಿಕ ಮಾತನಾಡಿದ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಮಂಜುಳಾ, ಶಾಂತಿಯುತವಾಗಿದ್ದ ಕೆರಗೋಡಿನಲ್ಲಿ ಹನುಮ ಧ್ವಜ ವಿವಾದದ ಮೂಲಕ ಶಾಂತಿ ಕದಡಿದ್ದು, ಕ್ಷೇತ್ರದ ಶಾಸಕ ಗಣಿಗ ರವಿಕುಮಾರ್. ಆ ಭಾಗದಲ್ಲಿ ತಮಗೆ ಮತ ಕೊಟ್ಟಿಲ್ಲ ಎಂಬ ಕಾರಣಕ್ಕೆ ಜನರನ್ನು ಎತ್ತಿಕಟ್ಟುವ ಕೆಲಸ ಮಾಡಿದ್ದಾರೆ. ಇದಕ್ಕೆ ಸಚಿವ ಚಲುವರಾಯಸ್ವಾಮಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಮ್ಮಕ್ಕಿದೆ. ಈ ನಿಟ್ಟಿನಲ್ಲಿ ಬಿಜೆಪಿ ಪಕ್ಷವು ಕೇವಲ ಕೆರಗೋಡು ಮಾತ್ರವಲ್ಲದೇ ಜಿಲ್ಲೆಯಾದ್ಯಂತ ಹನುಮ ಧ್ವಜ ಅಭಿಯಾನ ನಡೆಸುತ್ತಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್ ಮಾತನಾಡಿ, ಕೆರಗೋಡು–ಮಂಡ್ಯ ಮಾತ್ರವಲ್ಲ ರಾಜ್ಯಾದ್ಯಂತ ಲಕ್ಷಾಂತರ ಹನುಮ ಬಾವುಟ ಹಾಕುತ್ತೇವೆ. ಫೆ.9 ರಂದು ನಡೆಯುವ ಮಂಡ್ಯ ಬಂದ್‌ಗೆ ಬಿಜೆಪಿ ಸಂಪೂರ್ಣ ಬೆಂಬಲ ನೀಡಿದೆ.

ಧ್ವಜ ಇಳಿಸಿದ ಜಾಗದಲ್ಲಿ ಹನುಮ ಧ್ವಜ ಹಾರಿಸಬೇಕು ಎಂದು ಶಾಸಕ ಗಣಿಗ ರವಿ ಬಳಿ ನಾವು ಮನವಿ ಮಾಡುತ್ತೇವೆ. ಅದೇ ಧ್ವಜ ಕಂಬದಲ್ಲಿ ಹನುಮ ಧ್ವಜ ಹಾರಿಸಿದರೆ ನಾವು ಬಂದ್ ವಾಪಸ್ ಪಡೆಯುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ವಿವೇಕ್, ಶ್ರೀಧರ್, ಜಿಲ್ಲಾ ವಕ್ತಾರ ಸಿ.ಟಿ. ಮಂಜುನಾಥ್, ಮುಡಾ ಮಾಜಿ ಅಧ್ಯಕ್ಷೆ ವಿದ್ಯಾ ನಾಗೇಂದ್ರ ಇತರರಿದ್ದರು.

ನಾಲೆಗಳಿಗೆ ನೀರು ಬಿಡಲು ಆಗ್ರಹಿಸಿ ಹೆದ್ದಾರಿ ತಡೆ



ಶ್ರೀರಂಗಪಟ್ಟಣ, ಫೆ5– ಜನ–ಜಾನುವಾರು ಹಾಗೂ ಕುಡಿಯುವ ನೀರಿಗಾಗಿ ತಕ್ಷಣ ದಿಂದಲೇ ನಾಲೆಗಳ ಮೂಲಕ ನೀರು ಹರಿಸುವಂತೆ ಒತ್ತಾಯಿಸಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ಹಾಗೂ ರೈತ ಮುಖಂಡ ಕೆ.ಎಸ್ ನಂಜುಂಡೇಗೌಡ ನೇತೃತ್ವದಲ್ಲಿ 50ಕ್ಕೂ ಹೆಚ್ಚು ರೈತರು ಜಮಾವಣೆಗೊಂಡು ಹೆದ್ದಾರಿ ತಡೆದು ಸರ್ಕಾರದ ವಿರುದ್ಧ ಘೋಷಣೆ ಮಾಡಿ, ಆಕ್ರೋಶ ವ್ಯಕ್ತಪಡಿಸಿದರು.

ಜಲಾಶಯದಲ್ಲಿ ನೀರಿಲ್ಲದಿದ್ದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸಿ ಇದೀಗ ಇಲ್ಲಿನ ಜನ–ಜಾನುವಾರುಗಳಿಗೆ ಕುಡಿಯಲು ನೀರಿಲ್ಲದೆ ಮಾಡಿದೆ. ರೈತರಿಗೆ ಅಲ್ಪ ಸ್ವಲ್ಪ ಬೆಳೆ ಬೆಳೆಯಲು ಕಟ್ಟು ನೀರು ಬಿಡಲು ಒಪ್ಪದ ಸರ್ಕಾರ ತಮಿಳುನಾಡಿನ ಪರ ನಿಂತು ಕೆಲಸ ಮಾಡಿ ನಾಡಿನ ಜನರಿಗೆ ಕುಡಿಯಲು ನೀರು ಕೊಡದೆ ಇಲ್ಲಿನ ಜನರನ್ನೇ ಬಲಿ ಕೊಡುವಂತೆ ಕೆಲಸ ನಿರ್ವಹಿಸುತ್ತಿದೆ ಎಂದು ಆರೋಪಿಸಿದರು.

ಬತ್ತಿಹೋಗುತ್ತಿರುವ ಅಂತರ್ ಜಲ ಉಳಿಸಲು ಹಾಗೂ ಜನ ಜಾನುವಾರುಗಳು ನೀರು ಕುಡಿದು ಬದುಕಲು ತಕ್ಷಣ ನಾಲೆಗಳ ಮೂಲಕ ನೀರು ಹರಿಸಬೇಕು ಎಂದು ಆಗ್ರಹಿಸಿದರು. ಭೂಮಿತಾಯಿ ಹೋರಾಟ ಸಮಿತಿಯ ಮುಖಂಡರಾದ ಮಹದೇವು, ಕೃಷ್ಣ ರವಿಲಕ್ಷ್ಮಣ, ಶ್ರೀನಿವಾಸು ರಾಮಚಂದ್ರು, ಮಹದೇವು ಸೇರಿದಂತೆ ಇತರ 50ಕ್ಕೂ ಹೆಚ್ಚು ಮಂದಿ ಇದ್ದರು.

ಮುತ್ತತ್ತಿಯಲ್ಲಿ ಯುವಕ ನೀರುಪಾಲು



ಹಲಗೂರು,ಫೆ.5– ಇಲ್ಲಿನ ಮುತ್ತತ್ತಿಯ ಕಾವೇರಿ ನದಿಯಲ್ಲಿ ಈಜಲು ಹೋಗಿದ್ದ ಯುವಕನೊಬ್ಬ ನೀರುಪಾಲಾದ ಘಟನೆ ಸೋಮವಾರ ಸಂಭವಿಸಿದೆ.

ಬೆಂಗಳೂರಿನ ನಾಯಂಡಹಳ್ಳಿಯ ಡಿ.ಬಿ.ವಿಶ್ವಾಸ್ (27) ನೀರುಪಾಲಾದ ಯುವಕನಾಗಿದ್ದು, ಈತ ಐವರು ಸ್ನೇಹಿತರೊಂದಿಗೆ ಬೆಂಗಳೂರಿನಿಂದ ಮಳವಳ್ಳಿ ತಾಲೂಕಿನ ಹಲಗೂರು ಸಮೀಪವಿರುವ ಪ್ರಸಿದ್ಧ ಪ್ರವಾಸಿ ತಾಣ ಮುತ್ತತ್ತಿಗೆ ಆಂಜನೇಯಸ್ವಾಮಿ ದರ್ಶನ ಪಡೆಯಲು ಆಗಮಿಸಿದ್ದಾನೆ.

ದೇವರ ದರ್ಶನಕ್ಕೂ ಮುನ್ನ ಕಾವೇರಿ ನದಿಗೆ ಇಳಿದಿದ್ದ ವಿಶ್ವಾಸ್, ಸುಳಿಗೆ ಸಿಲುಕಿ ಸಾವನ್ನಪ್ಪಿದ್ದಾನೆ. ಹಲಗೂರು ಠಾಣೆ ಪೊಲೀಸರು ಶವವನ್ನು ಮೇಲೆತ್ತಿ ಮರಣೋತ್ತರ ಪರೀಕ್ಷೆಯ ನಂತರ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಕೆರಗೋಡು ಸರ್ಕಾರಿ ಶಾಲೆಯಲ್ಲಿ ಆರ್‌ಎಸ್‌ಎಸ್ ಮುಖಂಡನಿಂದ ಧ್ವಜಾರೋಹಣ ಆರೋಪ

ಮುಖ್ಯ ಶಿಕ್ಷಕಿ ವಿರುದ್ಧ ಜಿಲ್ಲಾಡಳಿತಕ್ಕೆ ದೂರು

ಮಂಡ್ಯ: ಕೆರಗೋಡು ಹನುಮ ಧ್ವಜ ವಿವಾದ ದಿನಕ್ಕೊಂದು ಹೊಸ ತಿರುವು ಪಡೆಯುತ್ತಿದ್ದು, ಇದೀಗ ಜಿಲ್ಲಾಡಳಿತಕ್ಕೆ ಮತ್ತೊಂದು ಅರ್ಜಿ ಸಲ್ಲಿಕೆಯಾಗಿದ್ದು, ಸರ್ಕಾರಿ ನಿಯಮ ಉಲ್ಲಂಘಿಸಿ ಆರ್‌ಎಸ್‌ಎಸ್ ಮುಖಂಡನೋರ್ವ ಗಣರಾಜ್ಯೋತ್ಸವದಲ್ಲಿ ಸರ್ಕಾರಿ ಶಾಲೆಯಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದು, ಗ್ರಾಮದ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕಿಯ ವಿರುದ್ಧ ಕ್ರಮಕ್ಕೆ ಒತ್ತಾಯಿಸಲಾಗಿದೆ.

ಗಣರಾಜ್ಯೋತ್ಸವ ದಿನ ನಿಯಮಗಳ ಪ್ರಕಾರ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಅಥವಾ ಮುಖ್ಯ ಶಿಕ್ಷಕರು ಧ್ವಜಾರೋಹಣ ಮಾಡಬೇಕು. ಆದರೆ ಇಬ್ಬರು ಇದ್ದರೂ ಕೆರಗೋಡಿನ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್‌ಎಸ್‌ಎಸ್ ಸಂಚಾಲಕರಿಂದ ಧ್ವಜಾರೋಹಣ ಮಾಡುವ ಮೂಲಕ ನಿಯಮಗಳ ಉಲ್ಲಂಘಿಸಲಾಗಿದೆ ಎಂದು ದೂರಿನಲ್ಲಿ ಎಸ್‌ಡಿಎಂಸಿ ಸದಸ್ಯರು ಹಾಗೂ ಪೋಷಕರು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಪೋಷಕರಾದ ಸಂತೋಷ್ ಕುಮಾರ್, ಕೆ.ಲೋಕೇಶ್, ಕಾವ್ಯ, ಕೆ.ಸಿ. ಉಮಾಶಂಕರ, ಮಂಗಳ ಗೌರಮ್ಮ, ಸ್ವಾಮಿ, ಕುಮಾರಸ್ವಾಮಿ, ಹನುಮಂತಯ್ಯ, ಜಯಮ್ಮ ಸೇರಿದಂತೆ ಮತ್ತಿತರರು ಸಹಿ ಮಾಡಿರುವ ದೂರಿನ ಪ್ರತಿಯನ್ನು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಶಿಕ್ಷಣ ಇಲಾಖೆಯ ಡಿಡಿಪಿಐ, ಬಿಇಒ ಅವರಿಗೆ ನೀಡಿ ಮುಖ್ಯ ಶಿಕ್ಷಕಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ಶಾಲೆಯ ಮುಖ್ಯ ಶಿಕ್ಷಕಿ ಸುಶೀಲಮ್ಮ ಸರ್ಕಾರದ ನಿಯಮಾವಳಿ ಉಲ್ಲಂಘಿಸಿ ತಾಲೂಕು ಆರ್‌ಎಸ್‌ಎಸ್ ಸಂಚಾಲಕ ಹಾಗೂ ಪಂಚೇಗೌಡನದೊಡ್ಡಿ ಗ್ರಾಮದ ಗ್ರಾಪಂ ಸದಸ್ಯ ಕೆ.ಜಿ.ಮಹೇಶ್ ಎಂಬುವರಿಂದ ಧ್ವಜಾರೋಹಣ ಮಾಡಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಲ್ಲದೆ, ಜ.22ರಂದು ಅಯೋಧ್ಯೆ ರಾಮಮಂದಿರ ಪ್ರತಿಷ್ಠಾಪನೆಗೆ ತಯಾರಿಸಿದ್ದ ಜೈ ಶ್ರೀರಾಮ್ ಚಿಹ್ನೆ ಮುದ್ರಿತವಿರುವ ಲಾಡುವನ್ನು ಗಣರಾಜ್ಯೋತ್ಸವ ದಿನ ಮಕ್ಕಳಿಗೆ ವಿತರಿಸಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಗಣರಾಜ್ಯೋತ್ಸವ ಕಾರ್ಯಕ್ರಮದ ಮಧ್ಯ ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರಸ್ತುತ ವಿವಾದಿತ ಸ್ಥಳದಲ್ಲಿರುವ ಗೌರಿ ಶಂಕರ ಸೇವಾ ಟ್ರಸ್ಟ್‌ನ ಧ್ವಜಾರೋಹಣ ಕಾರ್ಯಕ್ರಮಕ್ಕೆ ಒಂದು ಧರ್ಮದ ಪರವಾಗಿ ಏಕಾಏಕಿಯಾಗಿ ತನ್ನ ಶಾಲಾ ವಿದ್ಯಾರ್ಥಿಗಳೊಂದಿಗೆ ಭಾಗಿಯಾಗುವ ಮೂಲಕ ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಫೆ.15ರಂದು ದಿಶಾ ಸಭೆ

ಮಂಡ್ಯ, ಫೆ.5– ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಅಧ್ಯಕ್ಷತೆಯಲ್ಲಿ ಫೆ.15 ರಂದು ಬೆಳಗ್ಗೆ 11:30 ಗಂಟೆಗೆ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ದಿಶಾ ಸಭೆಯನ್ನು ನಡೆಸಲಾಗುವುದು ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನಾಳೆಯಿಂದ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ, ಫೆ.5– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಫೆ.7 ರಿಂದ 27 ರವರೆಗೆ ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ.

ಫೆ.7 ರಂದು ಕೀಲಾರ ಸರ್ಕಾರಿ ಆರೋಗ್ಯ ಕೇಂದ್ರ, ಫೆ.13 ರಂದು ಕೆ.ಆರ್. ಪೇಟೆ ತಾಲೂಕು ಆಸ್ಪತ್ರೆ, ಫೆ.14 ರಂದು ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಫೆ.16 ರಂದು ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ, ಫೆ.17 ರಂದು ಮದ್ದೂರು ತಾಲೂಕಿನ ಸರ್ಕಾರಿ ಆರೋಗ್ಯ ಕೇಂದ್ರ, ಫೆ.20 ರಂದು ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ, ಫೆ.21 ರಂದು ಪಾಂಡವಪುರ ಉಪ ವಿಭಾಗ ಆಸ್ಪತ್ರೆಯಲ್ಲಿ, ಫೆ.22 ರಂದು ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಫೆ.23 ರಂದು ಮಂಡ್ಯ ಮಿಮ್ಸ್, ಫೆ.27ರಂದು ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್‌ನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಫೆ.5– ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಗಾಂಧಿನಗರ ಫೀಡರ್‌ನಲ್ಲಿ ತುರ್ತು ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಫೆ.6 ರಂದು ಬೆಳಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್‌ನಲ್ಲಿ ವ್ಯತ್ಯಯ ಉಂಟಾಗುವುದು.

ನಗರ ಪ್ರದೇಶಗಳಾದ ಗಾಂಧಿನಗರ, ಕುವೆಂಪುನಗರ, ಕೆ.ಇ.ಬಿ ಕಾಲೋನಿ, ಕ್ಯಾತುಂಗೆರೆ 2ನೇ ಹಂತ, ಅನ್ನಪೂರ್ಣೇಶ್ವರಿನಗರ 2ನೇ ಹಂತ, ಶಂಕರನಗರ, ಕೆ.ಎಚ್.ಬಿ ಬೋರ್ಡ್, ವಿನಾಯಕನಗರ 3ನೇ ಹಂತ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಿರಿಯ ರಂಗಕರ್ಮಿ ಶಾಮಣ್ಣ ನಿಧನ



ಮೇಲುಕೋಟೆ, ಫೆ.5– ಪ್ರಥಮ ವರ್ಷದ ರಾಜ್ಯಮಟ್ಟದ ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿಗೆ ಭಾಜನರಾಗಿದ್ದ ಮೇಲುಕೋಟೆ ಸಮೀಪದ ಪಗಡೆಕಲ್ಲಹಳ್ಳಿ ಗ್ರಾಮದ ರಂಗಕರ್ಮಿ ಶಾಮಣ್ಣ(75) ಸೋಮವಾರ ಮುಂಜಾನೆ ನಿಧನರಾಗಿದ್ದಾರೆ.

ನಾಲ್ಕು ದಶಕಗಳಿಗೂ ಹೆಚ್ಚುಕಾಲ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಶಾಮಣ್ಣ ಜನಾನುರಾಗಿಯಾಗಿದ್ದು, ಗ್ರಾ.ಪಂ ಸದಸ್ಯ ಹಾಗೂ ತಾಲೂಕು ಪಂಚಾಯಿತಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಮೇಲುಕೋಟೆಯಲ್ಲಿ ಫೆ.15 ರಂದು ರಥಸಪ್ತಮಿಯ ಜಾನಪದ ಸಂಜೆ ಕಾರ್ಯಕ್ರಮದಲ್ಲಿ ಶಾಮಣ್ಣರನ್ನು ಸನ್ಮಾನಿಸಲು ಸಿದ್ಧತೆಯಾಗಿತ್ತು. ಪುತ್ರ ಅಶೋಕ್, ನಾಲ್ವರು ಪುತ್ರಿಯರು, ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಸಂಜೆ ನೆರವೇರಿತು. ಮೃತರ ನಿಧನಕ್ಕೆ ಚಿತ್ರದುರ್ಗದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಸಚಿವ ಶಿವರಾಜತಂಗಡಗಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಂತಾಪ ಸೂಚಿಸಿದ್ದಾರೆ.

ಹೆಚ್.ಎಂ.ಶಿವಸ್ವಾಮಿ



ಹಲಗೂರು: ಬಿಜೆಪಿ ಮಳವಳ್ಳಿ ತಾಲೂಕು ಘಟಕದ ಮಾಜಿ ಅಧ್ಯಕ್ಷ ಹೆಚ್.ಎಂ.ಶಿವಸ್ವಾಮಿ(72) ಭಾನುವಾರ ಸಂಜೆ ನಿಧನರಾಗಿದ್ದಾರೆ. ಉದ್ಯಮಿಯಾಗಿ, ವೀರಶೈವ ಹಾಗೂ ಬಿಜೆಪಿ ಮುಖಂಡರಾಗಿದ್ದರು. ಅವರ ಪುತ್ರಿ ನೆದರ್‌ಲ್ಯಾಂಡ್‌ನಲ್ಲಿರುವುದರಿಂದ ಮಂಗಳವಾರ ಹಲಗೂರಿನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಆರ್‌ಬಿಐ ನಿಯಮ ಪಾಲಿಸುತ್ತಿರುವುದನ್ನು ಖಚಿತ ಪಡಿಸಿಕೊಂಡು ಸಹಕಾರಿ ಬ್ಯಾಂಕ್‌ನಲ್ಲಿ ಠೇವಣಿ ಇಡಿ

ಹಿರಿಯ ಲೆಕ್ಕ ಪರಿಶೋಧಕ ಕೇಶವ್ ಡೋಂಗ್ರೆ ಸಲಹೆ



'ಹಿರಿಯ ನಾಗರಿಕರಿಗೆ ತೆರಿಗೆ ವಿನಾಯ್ತಿ ಹಾಗೂ ಇತರೆ ಅನುಕೂಲಗಳು' ಕುರಿತು ಹಿರಿಯ ಲೆಕ್ಕ ಪರಿಶೋಧಕ ಕೇಶವ್ ಡೋಂಗ್ರೆ ಮಾತನಾಡಿದರು.

ಮೈಸೂರು, ಫೆ5(ಎಸ್‌ಪಿಎನ್)– ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಮೊದಲು ಆ ಬ್ಯಾಂಕ್‌ಗಳಲ್ಲಿ ಆರ್‌ಬಿಐ ನಿಯಮ ಪಾಲಿಸಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಂಡು ಠೇವಣಿ ಇಡುವಂತೆ ಹಿರಿಯ ಲೆಕ್ಕ ಪರಿಶೋಧಕ ಕೇಶವ್ ಡೋಂಗ್ರೆ ಸಲಹೆ ನೀಡಿದರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಸರಸ್ವತಿ ಸಮುದಾಯ ಭವನದಲ್ಲಿ ಸೋಮವಾರ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಆಯೋಜಿಸಿದ್ದ 'ಹಿರಿಯ ನಾಗರಿಕರಿಗೆ ತೆರಿಗೆ ವಿನಾಯ್ತಿ ಹಾಗೂ ಇತರೆ ಅನುಕೂಲಗಳು' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿರಿಯ ನಾಗರಿಕರು ತಮ್ಮ ವೃತ್ತಿ ಜೀವನದಲ್ಲಿ ಕಷ್ಟಪಟ್ಟು ದುಡಿದು ಉಳಿಸಿದ ಹಣವನ್ನು ಯಾವ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟರೆ ಹೆಚ್ಚಿನ ಬಡ್ಡಿ ಬರುತ್ತದೆ ಎಂಬುದನ್ನಷ್ಟೇ ಆಲೋಚನೆ ಮಾಡುತ್ತೀರಿ. ಆದರೆ, ಹೆಚ್ಚಿನ ಬಡ್ಡಿ ನೀಡುವ ಬ್ಯಾಂಕ್ ನಿಮ್ಮ ಹಣಕ್ಕೆ ಭದ್ರತೆ ಒದಗಿಸುತ್ತದೆಯೇ ಎಂಬುದನ್ನು ಯೋಚಿಸುವುದಿಲ್ಲ. ಮುಖ್ಯವಾಗಿ ಹಣಕ್ಕೆ ಬಡ್ಡಿಗಿಂತ ಭದ್ರತೆ ನೀಡುವ ಬ್ಯಾಂಕ್‌ಗಳಲ್ಲಿ ಠೇವಣಿ ಮಾಡುವುದು ಉತ್ತಮ ಎಂದರಲ್ಲದೆ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಮೊದಲು ಆ ಬ್ಯಾಂಕ್‌ಗಳು ಆರ್‌ಬಿಐ ನಿಯಮ ಪಾಲಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ ಎಂದರು. ಹಿರಿಯ ನಾಗರಿಕರು ಠೇವಣಿ ಇಡಲು ಸಹಕಾರಿ ಬ್ಯಾಂಕ್ ಬದಲು ರಾಷ್ಟ್ರೀಯ ಬ್ಯಾಂಕ್ ಅಥವಾ ಅಂಚೆ ಕಚೇರಿ ಸೂಕ್ತವಾಗಿದ್ದು, ನಿಮ್ಮ ಠೇವಣಿ ಹಣಕ್ಕೂ ಗ್ಯಾರಂಟಿ ಇರಲಿದೆ. ಇತ್ತೀಚಿನ ದಿನಗಳಲ್ಲಿ ಸಹಕಾರಿ ಬ್ಯಾಂಕ್‌ಗಳಲ್ಲಿ ಠೇವಣಿ ಮಾಡುವ ಹಣಕ್ಕೆ ಭದ್ರತೆ ಇಲ್ಲದ್ದಂತಾಗಿದ್ದು, ಮಹಾರಾಷ್ಟ್ರ ಮತ್ತು ಬೆಂಗಳೂರಿನಲ್ಲಿ ಹೆಚ್ಚಿನ ಕೋ–ಆಪರೇಟಿವ್ ಬ್ಯಾಂಕ್‌ಗಳು ಮುಚ್ಚಿರುವುದು ಕಾಣುತ್ತೇವೆ ಎಂದು ತಿಳಿಸಿದರು.

ಕಪ್ಪು ಹಣಕ್ಕೆ ಕಡಿವಾಣ: ಭಾರತದಲ್ಲಿ ಕಪ್ಪು ಹಣ ವ್ಯವಹಾರಕ್ಕೆ ಶೇ.80 ರಷ್ಟು ಕಡಿವಾಣ ಹಾಕಲಾಗಿದೆ. ಅಲ್ಲದೆ, ಹಿರಿಯ ನಾಗರಿಕರು ಪ್ರತಿ ವರ್ಷ ಸಲ್ಲಿಸುವ ಆದಾಯ ತೆರಿಗೆ ಮೇಲೆ ಸದಾ ನಿಗಾ ವಹಿಸಲಾಗುತ್ತಿದೆ ಆದ್ದೂ ಹಿರಿಯ ನಾಗರಿಕರು ನಿಮ್ಮ ಮಕ್ಕಳು, ಮೊಮ್ಮಕ್ಕಳು ನಿಮ್ಮ ಹೆಸರಿನಲ್ಲಿ ಇಡುವ ಠೇವಣಿ ಹಣದ ಮೂಲದ ಬಗ್ಗೆ ಖಚಿತತೆ ಹಾಗೂ ತಜ್ಞರ ಅಭಿಪ್ರಾಯ ಪಡೆದು ಹಣಕಾಸು ವ್ಯವಹಾರ ಮುಂದುವರೆಸುವಂತೆ ಸಲಹೆ ನೀಡಿದರು.

ಮುಪ್ಪಿನಲ್ಲಿ ನಿಮ್ಮ ಬಳಿ ಹಣ ಇರಲಿ: ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿಮ್ಮ ಉಳಿತಾಯ ಹಣವನ್ನು ಯಾರಿಗೂ ನೀಡಬೇಡಿ. ಯಾರ ಹೆಸರಿನಲ್ಲೂ ಪೂರ್ಣ ಹಣ ವರ್ಗಾಯಿಸುವ ಮೊದಲು ನಿಮ್ಮ ಜೀವನ ಭದ್ರತೆಗೆ ಸಾಕಾಗುವಷ್ಟು ಹಣ ಉಳಿಸಿಕೊಳ್ಳುವಂತೆ ಕಿವಿಮಾತು ಹೇಳಿದರು. ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಕೆ.ಎಂ. ನಾಗರಾಜು, ಪದಾಧಿಕಾರಿಗಳಾದ ಎಸ್.ವಿ. ಗೌಡಪ್ಪ, ಕೆ.ಎಸ್.ಕೃಷ್ಣಪ್ಪ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವೀರ ಮಡಿವಾಳ ಮಾಚಿದೇವರಿಗೆ ಪಂಚಲೋಹ ಮುಖವಾಡ ಧಾರಣೆ ಸಹಿತ ವಿಶೇಷ ಪೂಜೆ

ಶೋಷಿತ ಸಮುದಾಯಗಳ ಸುಧಾರಣೆಗೆ ಶ್ರಮಿಸಿದ ದಾರ್ಶನಿಕ: ಸ್ಮರಣೆ

ಮೈಸೂರು, ಫೆ5(ಎಸ್‌ಬಿಡಿ)– ಸಮಾಜದ ಸುಧಾರಣೆಗೆ ಶ್ರಮಿಸಿದ ವೀರ ಮಡಿವಾಳ ಮಾಚಿದೇವರ ಜಯಂತಿಯ ಅಂಗವಾಗಿ ಮೈಸೂರಿನ ಸರಸ್ವತಿಪುರಂನಲ್ಲಿರುವ ವೀರ ಮಡಿವಾಳ ಮಾಚಿದೇವರ ದೇವಸ್ಥಾನದಲ್ಲಿ ಪಂಚಲೋಹ ಮುಖವಾಡ ಧಾರಣೆ ಸಹಿತ ವಿಶೇಷ ಪೂಜೆ ಸಲ್ಲಿಸಿ, ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.



ವೀರ ಮಡಿವಾಳ ಮಾಚಿದೇವರ ಜಯಂತಿ ಅಂಗವಾಗಿ ಮೈಸೂರಿನ ಸರಸ್ವತಿಪುರಂನಲ್ಲಿರುವ ವೀರ ಮಡಿವಾಳ ಮಾಚಿದೇವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ಈ ವೇಳೆ ಮೈಸೂರು ನಗರದ ಮಡಿವಾಳ ಸಂಘದ ನಗರಾಧ್ಯಕ್ಷ ವರುಣ ಮಹದೇವ್ ಮಾತನಾಡಿ, ತುಳಿತಕ್ಕೊಳಗಾಗಿದ್ದ ಸಮುದಾಯಗಳಿಗೆ ಸಮಾನ ಅವಕಾಶ ಕಲ್ಪಿಸುವುದರ ಜೊತೆಗೆ ಸಮಾಜದ ಸುಧಾರಣೆಗಾಗಿ 12ನೇ ಶತಮಾನದಲ್ಲಿ ಶ್ರಮಿಸಿದ ಮಹಾನ್ ನಾಯಕ ಮಡಿವಾಳ ಮಾಚಿದೇವರನ್ನು ಸದಾ ಸ್ಮರಿಸಿಕೊಳ್ಳಬೇಕು ಎಂದರು.

ಹಿಂದುಳಿದ ಹಾಗೂ ಶ್ರಮಿಕ ವರ್ಗದವರಿಗಾಗಿ ಸಾಮಾಜಿಕ ಕ್ರಾಂತಿ ಮಾಡಿದವರಲ್ಲಿ ಮಾಚಿದೇವರು ಪ್ರಮುಖರು. ಬಡವರು, ಸಾಮಾಜಿಕ ಬಹಿಷ್ಕಾರ ಹಾಗೂ ಶೋಷಣೆಗೆ ಒಳಗಾದವರ ಬಗ್ಗೆ ಚಿಂತಿಸಿ, ವ್ಯಕ್ತಿ ವ್ಯಕ್ತಿಗಳ ನಡುವಿನ ಅಂತರವನ್ನು ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರು. ಆಧ್ಯಾತ್ಮಿಕ ಮಾರ್ಗದಲ್ಲಿ 3 ಲಕ್ಷಕ್ಕೂ ಹೆಚ್ಚು ವಚನಗಳ ಮೂಲಕ ಜನರಲ್ಲಿ ಭಕ್ತಿ ಪ್ರಧಾನ ಚಿಂತನೆಗಳನ್ನು ಬಿತ್ತಿದರು ಎಂದು ತಿಳಿಸಿದರು.

ಅಹಿಂಸಾ ತತ್ವವನ್ನು ಅಳವಡಿಸಿಕೊಂಡಿದ್ದ ಮಡಿವಾಳ ಮಾಚಿದೇವರು, ಜಾತಿ ಪದ್ಧತಿ ವಿರುದ್ಧ ದನಿಯೆತ್ತಿ ಎಲ್ಲರೂ ಸಮಾನರು ಎನ್ನುವ ಭಾವನೆಯೊಂದಿಗೆ ಹೋರಾಟ ಮಾಡಿದರು. ಇಂತಹ ದಾರ್ಶನಿಕರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಆಯಾ ಸಮುದಾಯದವರು ಸಂಘಟಿತರಾಗಿ, ಇಡೀ ಸಮಾಜದ ಸಾಮರಸ್ಯಕ್ಕೆ ಶ್ರಮಿಸಬೇಕು. ಈ ನಿಟ್ಟಿನಲ್ಲಿ ಯುವಜನತೆ ಹೆಚ್ಚು ಗಮನ ಹರಿಸುವ ಅಗತ್ಯವಿದೆ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಜಟ್ಟಿ ಹುಂಡಿ ಗೋಪಾಲ್, ರವಿ, ಮೈಸೂರು ಜಿಲ್ಲಾ ಮಡಿವಾಳರ ಸಂಘದ ಉಪಾಧ್ಯಕ್ಷ ಎಸ್.ಜೆ. ಪ್ರಶಾಂತ್, ಪ್ರಧಾನ ಕಾರ್ಯದರ್ಶಿ ಚನ್ನಕೇಶವ, ಖಜಾಂಜಿ ಸಿದ್ದಪ್ಪಾಜಿ, ಮೈಸೂರು ತಾಲೂಕು ಅಧ್ಯಕ್ಷ ಜಯರಾಮ್, ಶಂಕರ, ಕುಮಾರ್, ಶಿವಕುಮಾರ್, ನಂಜುಂಡಯ್ಯ ಇನ್ನಿತರರು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ




ಮೈಸೂರು, ಫೆ. 5– ಜೆ.ಪಿ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ 10ನೇ ತರಗತಿಗಳ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು.

ಪ್ರಾಂಶುಪಾಲರಾದ ಶ್ರೀಮತಿ ಸ್ಮಿತಾ ಕುರುಪ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹಿತವಚನ ನೀಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಪಬ್ಲಿಕ್ ಶಾಲಾ ವಿಭಾಗದ ಉಪನಿರ್ದೇಶಕ ಅಶೋಕ್ ಪಾಳ್ಯ ಅವರು ವಿದ್ಯಾರ್ಥಿಗಳಿಗೆ ತಿಳುವಳಿಕೆಯ ಮಾತುಗಳನ್ನು ಹೇಳಿದರು. ವ್ಯಕ್ತಿತ್ವ ವಿಕಸನ ತರಬೇತಿದಾರ ಸಿ.ಸಿ ಪಾವಟೆಯವರು ತಮ್ಮ ಹಾಸ್ಯ ಹಾಗೂ ಸಮಯೋಚಿತ ಮಾತುಗಳ ಮೂಲಕ ನೆರೆದವರನ್ನು ರಂಜಿಸಿದರು.

ಜೆಡಿಎಸ್ ಎಸ್ಸಿ, ಎಸ್ಟಿ ಘಟಕದ ರಾಜ್ಯಾಧ್ಯಕ್ಷರಾಗಿ ಡಾ.ಕೆ.ಅನ್ನದಾನಿ

ಮಂಡ್ಯ, ಫೆ.5– ಜೆಡಿಎಸ್ ಎಸ್ಸಿ–ಎಸ್ಟಿ ಘಟಕದ ರಾಜ್ಯಾಧ್ಯಕ್ಷರನ್ನಾಗಿ ಮಳವಳ್ಳಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ ಅವರನ್ನು ನೇಮಕ ಮಾಡಿ ಜೆಡಿಎಸ್ ರಾಜ್ಯಾಧ್ಯಕ್ಷರೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆದೇಶ ಹೊರಡಿಸಿದ್ದಾರೆ.



ಸೋಮವಾರ ಬೆಂಗಳೂರಿನ ಜೆಪಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅನ್ನದಾನಿ ಅವರನ್ನು ನೂತನ ರಾಜ್ಯಾಧ್ಯಕ್ಷರನ್ನಾಗಿ ಹೆಚ್ಡಿಕೆ ನೇಮಿಸಿ, ಆದೇಶ ಪತ್ರ ನೀಡಿದರು. ಎರಡು ಬಾರಿ ಮಳವಳ್ಳಿ ಕ್ಷೇತ್ರದಿಂದ ಶಾಸಕರಾಗಿದ್ದ ಅವರು, ಮೈತ್ರಿ ಸರ್ಕಾರದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ಕರ್ನಾಟಕ ರೈತ ಕಲ್ಯಾಣ ಸಂಘಕ್ಕೆ ನೇಮಕ



ಮೈಸೂರು, ಫೆ. 5– ಕರ್ನಾಟಕ ರೈತ ಕಲ್ಯಾಣ ಸಂಘದ ಸೇವೆ ಹಾಗೂ ಧ್ಯೇಯೋದ್ದೇಶಕ್ಕೆ ಕೈ ಜೋಡಿಸುವ ಇಂಗಿತ ವ್ಯಕ್ತಪಡಿಸಿ, ಹಾಸನ ಜಿಲ್ಲೆ ಹಾಗೂ ಹೊಳೆನರಸೀಪುರ ತಾಲೂಕಿನ ಮುಖಂಡರು ಸಂಘಕ್ಕೆ ಸೇರ್ಪಡೆಯಾದರು.

ಸೋಮವಾರ ಸಂಘದ ಪ್ರಧಾನ ಕಚೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಹಾಸನ ಜಿಲ್ಲೆಯ ಮುಖಂಡ ಲೋಕೇಶ್,ಆನಂದ್, ಈ.ಮಂಜುನಾಥ್ ಹಾಗೂ ಹೊಳೆನರಸೀಪುರದ ಶ್ರೀನಿವಾಸ್ ಎಚ್.ಬಿ ಸಂಘಕ್ಕೆ ಸೇರ್ಪಡೆಗೊಂಡರು.

ಇದೇ ವೇಳೆ ಲೋಕೇಶ್ ಅವರಿಗೆ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ, ಆನಂದ್ ಹಾಸನ ಜಿಲ್ಲಾಧ್ಯಕ್ಷ, ಈ.ಮಂಜುನಾಥ್ ಹಾಸನ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಹಾಗೂ ಶ್ರೀನಿವಾಸ್ ಎಚ್.ಬಿ ಹೊಳೆನರಸೀಪುರ ತಾಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಹೇಮಂತ್‌ಕುಮಾರ್, ರಾಜ್ಯ ಕಾರ್ಯಾಧ್ಯಕ್ಷ ಕಣೇನೂರು ಜಗದೀಶ್, ರಾಜ್ಯ ಯುವ ಘಟಕದ ಅಧ್ಯಕ್ಷ ರುದ್ರ, ರಾಜ್ಯ ಪತ್ರಿಕಾ ಕಾರ್ಯದರ್ಶಿ ಹರೀಶ್.ಪಿ.ಗೌಡ, ಮನು ಮತ್ತು ರಾಕೇಶ್ ಉಪಸ್ಥಿತರಿದ್ದರು.

ವಿಶಾಖಪಟ್ಟಣದಲ್ಲಿ ಗೆದ್ದು ಬೀಗಿದ ಭಾರತ

●ಆಂಗ್ಲರ ವಿರುದ್ಧ 106 ರನ್ ಜಯ ●1-1 ರಿಂದ ಸರಣಿ ಸಮಬಲ



ವಿಶಾಖಪಟ್ಟಣ, ಫೆ.5– ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಮುಗ್ಗರಿಸಿದ್ದ ಭಾರತ ಎರಡನೇ ಟೆಸ್ಟ್ ಪಂದ್ಯದಲ್ಲಿ 106 ರನ್‌ಗಳ ಗೆಲುವಿನ ನಗೆ ಬೀರಿದೆ. ಆ ಮೂಲಕ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಜಿಗಿದಿದ್ದು, 5 ಪಂದ್ಯಗಳ ಸರಣಿಯಲ್ಲಿ 1–1 ಅಂತರದಿಂದ ಸಮಬಲ ಸಾಧಿಸಿದೆ.

ಇಲ್ಲಿನ ವೈ.ಎಸ್.ರಾಜಶೇಖರ ರೆಡ್ಡಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ನೀಡಿದ 399 ರನ್‌ಗಳ ಗುರಿ ಬೆನ್ನತ್ತಿದ ಆಂಗ್ಲರು 292 ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿದರು. ಮೂರನೇ ದಿನದಾಟದ ಅಂತ್ಯಕ್ಕೆ 1 ವಿಕೆಟ್ ನಷ್ಟಕ್ಕೆ 67 ರನ್ ಗಳಿಸಿದ್ದ ಇಂಗ್ಲೆಂಡ್ ಪಂದ್ಯ ಗೆಲ್ಲುವ ವಿಶ್ವಾಸದೊಂದಿಗೆ ನಾಲ್ಕನೇ ದಿನದಾಟ ಆರಂಭಿಸಿತು. ಆದರೆ ಜಸ್ಪ್ರೀತ್ ಬುಮ್ರಾ ಹಾಗೂ ಆರ್.ಅಶ್ವಿನ್ ದಾಳಿಗೆ ತತ್ತರಿಸಿದರು. ಆರಂಭಿಕ ಆಟಗಾರ ಝ್ಯಾಕ್ ಕ್ರಾವ್ಲಿ 73 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಅಂತಿಮವಾಗಿ ಬೆನ್ ಡಕೆಟ್ 28, ರೆಹಾನ್ ಅಹಮ್ಮದ್, ಒಲ್ಲಿ ಪೋಪ್ ತಲಾ 23, ಜೋ ರೂಟ್ 16, ನಾಯಕ ಬೆನ್ ಸ್ಟೋಕ್ಸ್ 11, ಜಾನಿ ಬೈರ್‌ಸ್ಟೋ 26, ಬೆನ್ ಫೋಕ್ಸ್, ಟಾಮ್ ಹಾರ್ಟ್ಲೀ ತಲಾ 36 ರನ್ ಗಳಿಸಿದರು. ಭಾರತದ ಪರ ಜಸ್ಪ್ರೀತ್ ಬುಮ್ರಾ ಹಾಗೂ ಆರ್.ಅಶ್ವಿನ್ ತಲಾ 3, ಮುಖೇಶ್ ಕುಮಾರ್, ಕುಲದೀಪ್ ಯಾದವ್ ಹಾಗೂ ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಜಸ್ಪ್ರೀತ್ ಬುಮ್ರಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸರಣಿಯ ಮೂರನೇ ಪಂದ್ಯ ಫೆ.15ರಂದು ರಾಜ್‌ಕೋಟ್‌ನಲ್ಲಿ ಆರಂಭವಾಗಲಿದೆ.

ಎರಡನೇ ಸ್ಥಾನಕ್ಕೆ ಜಿಗಿತ: ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಅಂಕ ಪಟ್ಟಿಯಲ್ಲಿ ಭಾರತ ಈಗ ಎರಡನೇ ಸ್ಥಾನಕ್ಕೆ ಜಿಗಿದಿದೆ. 6 ಪಂದ್ಯಗಳಿಂದ ಭಾರತ 38 ಅಂಕ ಕಲೆ ಹಾಕಿದ್ದರೆ ಆಸ್ಟ್ರೇಲಿಯಾ 10 ಪಂದ್ಯಗಳಿಂದ 66 ಅಂಕ ಕಲೆ ಹಾಕಿ ಮೊದಲ ಸ್ಥಾನ ಪಡೆದಿದೆ.

ಸಂಕ್ಷಿಪ್ತ ಸ್ಕೋರ್

ಭಾರತ ಮೊದಲ ಇನ್ನಿಂಗ್ಸ್
396/10

ಇಂಗ್ಲೆಂಡ್ ಮೊದಲ ಇನ್ನಿಂಗ್ಸ್
253/10

ಭಾರತ ಎರಡನೇ ಇನ್ನಿಂಗ್ಸ್
255/10

ಇಂಗ್ಲೆಂಡ್ ಎರಡನೇ ಇನ್ನಿಂಗ್ಸ್
292/10

ಸಂಚಾರ ದಂಡ ವಸೂಲಿಯಲ್ಲಿ ಗಣನೀಯ ಹೆಚ್ಚಳ

●2021ರಲ್ಲಿ 5.74 ಕೋಟಿ ರೂ., 2022ರಲ್ಲಿ 6.52 ಕೋಟಿ ರೂ., 2023ರಲ್ಲಿ 17.33 ಕೋಟಿ ರೂ. ಸಂಗ್ರಹ. ●2024ರ ಫೆ.4ರ ಮಧ್ಯಾಹ್ನದಿಂದ ಸಂಜೆಯವರೆಗೆ 704 ಹೆಲ್ಮೆಟ್‌ರಹಿತ ದ್ವಿಚಕ್ರ ವಾಹನ ಚಾಲನೆ ಪ್ರಕರಣ; 3.50 ಲಕ್ಷ ದಂಡ ವಸೂಲಿ



ಮೈಸೂರು, ಫೆ.5(ಆರ್‌ಕೆ)– ಕಳೆದ 3 ವರ್ಷಗಳಲ್ಲಿ ಮೈಸೂರು ನಗರದಾದ್ಯಂತ ಸಂಚಾರ ನಿಯಮ ಉಲ್ಲಂಘಿಸುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಹಾಗೆಯೇ ಇದರ ವಿರುದ್ಧ ಕಾರ್ಯಾಚರಣೆ ವೇಳೆ ಪೊಲೀಸರು, ವಾಹನ ಚಾಲಕರಿಂದ ಭಾರಿ ದಂಡವನ್ನೇ ವಸೂಲಿ ಮಾಡಿದ್ದಾರೆ.

ಸಂಚಾರ ಪೊಲೀಸರ ಅಂಕಿ ಅಂಶಗಳ ಪ್ರಕಾರ 2023ರಲ್ಲಿ ಭಾರತೀಯ ಮೋಟಾರು ವಾಹನಗಳ ಕಾಯ್ದೆಯಡಿ 11,69,896 ಪ್ರಕರಣ ದಾಖಲಿಸಿ ಒಟ್ಟು 17,33,91,500 ರೂ. ದಂಡ ವಸೂಲಿ ಮಾಡಲಾಗಿದೆ. 2022 ರಲ್ಲಿ 10,30,771 ಪ್ರಕರಣಗಳಲ್ಲಿ 6,52,70,500 ರೂ. ಸಂಗ್ರಹಿಸಿದ್ದರೆ, 2021ನೇ ಸಾಲಿನಲ್ಲಿ ಕೋವಿಡ್ ಸಂಕಷ್ಟ ಪರಿಸ್ಥಿತಿ ವೇಳೆಯೇ 12,28,285 ಪ್ರಕರಣ ದಾಖಲಿಸಿ 5,74,64,800 ರೂ. ದಂಡ ವಸೂಲಿ ಮಾಡಲಾಗಿದೆ.

ಮೈಸೂರು ನಗರದಲ್ಲಿ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಮ ಪಾಲಿಸುವಂತೆ ಎಷ್ಟೇ ಜಾಗೃತಿ ಮೂಡಿಸಿದರೂ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದ್ದು, ಸಾವು ನೋವುಗಳೂ ಜಾಸ್ತಿಯಾಗುತ್ತಿವೆ. ಅಪಘಾತಗಳಲ್ಲಿ ಕೆಲವರು ಜೀವ ಕಳೆದುಕೊಂಡಿದ್ದರೆ, ಮತ್ತೆ ಕೆಲವರಿಗೆ ಕೈ–ಕಾಲು ಮುರಿದು ಶಾಶ್ವತ ಅಂಗವಿಕಲರಾಗಿದ್ದಾರೆ.

ಜನವರಿಯಲ್ಲಿ 104 ಅಪಘಾತ 15 ಮಂದಿ ಸಾವು

8 ಮಕ್ಕಳೂ ಸೇರಿ 126 ಮಂದಿಗೆ ಗಾಯ

ಮೈಸೂರು, ಫೆ.5(ಆರ್‌ಕೆ)–ಮೈಸೂರು ನಗರದಾದ್ಯಂತ 2024ರ ಜನವರಿಯಲ್ಲಿ 104 ರಸ್ತೆ ಅಪಘಾತಗಳು ಸಂಭವಿಸಿ 15 ಮಂದಿ ಮೃತಪಟ್ಟಿದ್ದು, 32 ಮಹಿಳೆಯರು ಹಾಗೂ 8 ಮಕ್ಕಳು ಸೇರಿ ಒಟ್ಟು 126 ಮಂದಿ ಗಾಯಗೊಂಡಿದ್ದಾರೆ.

31 ದಿನಗಳಲ್ಲಿ 14 ಮಾರಣಾಂತಿಕ ಹಾಗೂ 90 ಮಾರಣಾಂತಿಕವಲ್ಲದ ಅಪಘಾತಗಳಾಗಿವೆ. ದೇವರಾಜ ಸಂಚಾರ ಠಾಣಾ ವ್ಯಾಪ್ತಿಯಲ್ಲಿ 5, ಕೆ.ಆರ್.ನಲ್ಲಿ 37, ಎನ್.ಆರ್.ನಲ್ಲಿ 15, ಸಿದ್ಧಾರ್ಥನಗರದಲ್ಲಿ 22, ವಿವಿ ಪುರಂನಲ್ಲಿ 25 ಅಪಘಾತಗಳು ಸಂಭವಿಸಿವೆಯಾದರೂ, ವಿವಿ ಪುರಂ ಮತ್ತು ಕೆ.ಆರ್. ಸಂಚಾರ ಠಾಣಾ ವ್ಯಾಪ್ತಿಯಲ್ಲಿ ತಲಾ 6 ಮಂದಿ ಸಾವನ್ನಪ್ಪಿದ್ದಾರೆ. ಸಿದ್ಧಾರ್ಥನಗರದಲ್ಲಿ ಇಬ್ಬರು ಹಾಗೂ ಎನ್.ಆರ್.ನಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ಅದೇ ರೀತಿ 2024ರ ಜನವರಿ 1ರಿಂದ 31ರವರೆಗೆ ಮೈಸೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ 1,11,905 ಪ್ರಕರಣ ದಾಖಲಿಸಲಾಗಿದ್ದು, 16,98,400 ರೂ. ಸ್ಥಳದಲ್ಲೇ ದಂಡ, ಎಎಂಸಿ ನೋಟೀಸ್ ಮೂಲಕ 8,19,100 ರೂ. ಸೇರಿ 25,17,500 ರೂ. ಹಾಗೂ ಕೋರ್ಟ್‌ನಲ್ಲಿ 14,86,500 ರೂ. ದಂಡ ಪಾವತಿಸಿಕೊಳ್ಳಲಾಗಿದೆ.

2023ರಲ್ಲಿ 953 ಅಪಘಾತಗಳು ಸಂಭವಿಸಿ 168 ಮಂದಿ ಸಾವನ್ನಪ್ಪಿದ್ದು, 984 ಮಂದಿ ಗಾಯಗೊಂಡಿದ್ದಾರೆ. ಅದೇ ರೀತಿ 2022ನೇ ಸಾಲಿನಲ್ಲಿ 777 ಅಪಘಾತಗಳು ಸಂಭವಿಸಿ 172 ಮಂದಿ ಸಾವನ್ನಪ್ಪಿದ್ದು, 776 ಮಂದಿಗೆ ಗಾಯಗಳಾಗಿತ್ತು. 2021ರಲ್ಲಿ 650 ಅಪಘಾತಗಳಲ್ಲಿ 121 ಮಂದಿ ಸಾವನ್ನಪ್ಪಿದ್ದರೆ, 675 ಮಂದಿ ಗಾಯಗೊಂಡಿದ್ದರು.

ಕಳೆದ ವರ್ಷ 2023ರ ಜುಲೈನಲ್ಲಿ ಅತೀ ಹೆಚ್ಚು 96 ಅಪಘಾತಗಳಾಗಿದ್ದರೆ, ಮಾರ್ಚ್ ತಿಂಗಳಲ್ಲಿ ಅತೀ ಕಡಿಮೆ 59 ಅಪಘಾತ ಪ್ರಕರಣಗಳು ದಾಖಲಾಗಿವೆ. ಮೈಸೂರಿನ ವಿವಿ ಪುರಂ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಅತೀ ಹೆಚ್ಚು 283 ಅಪಘಾತಗಳಾಗಿದ್ದರೆ, ಕೆ.ಆರ್. ಸಂಚಾರ ಠಾಣಾ ಸರಹದ್ದಿನಲ್ಲಿ 277, ಸಿದ್ಧಾರ್ಥ ನಗರ ಸಂಚಾರ ಠಾಣಾ ವ್ಯಾಪ್ತಿಯಲ್ಲಿ 231, ಎನ್.ಆರ್.ನಲ್ಲಿ 105 ಹಾಗೂ ದೇವರಾಜ ಸರಹದ್ದಿನಲ್ಲಿ ಅತೀ ಕಡಿಮೆ ದಾಖಲಾಗಿವೆ.

ಸಂಚಾರ ಪೊಲೀಸರಿಗೊಂದು ಸಲಹೆ

ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರರ ವಿರುದ್ಧ ಮೈಸೂರು ನಗರ ಸಂಚಾರ ಪೊಲೀಸರು ಕಾರ್ಯಾಚರಣೆಯನ್ನು ಪುನರಾರಂಭಿಸಿರುವುದು ಮಾತ್ರವಲ್ಲದೆ, ತೀವ್ರಗೊಳಿಸಿದ್ದಾರೆ. ಇದರ ಪರಿಣಾಮ ಫೆ.4ರ ಭಾನುವಾರ, ಒಂದೇ ದಿನದಲ್ಲಿ 3.50 ಲಕ್ಷ ರೂ. ದಂಡ ಗಣನೀಯ ಪ್ರಮಾಣದಲ್ಲಿ ಸಂಗ್ರಹವಾಗಿದೆ.

ಮೈಸೂರು ನಗರದ ಎಲ್ಲಾ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಅಂದು ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಸವಾರಿ ಮಾಡಿದ 700 ಪ್ರಕರಣಗಳನ್ನು ದಾಖಲಿಸಿದ್ದು, ಪ್ರತಿ ಪ್ರಕರಣದಲ್ಲಿಯೂ ತಲಾ 500 ರೂ. ದಂಡವನ್ನು ಸ್ಥಳದಲ್ಲಿ ವಸೂಲಿ ಮಾಡಲಾಗಿದೆ. ಹಲವು ಬಾರಿ ಎಚ್ಚರಿಕೆ ಜೊತೆಗೆ ಸಲಹೆ–ಸೂಚನೆ ನೀಡಿದರೂ ದ್ವಿಚಕ್ರ ವಾಹನ ಸವಾರರು ಮಾತ್ರವಲ್ಲದೆ, ಹಿಂಬದಿ ಸವಾರರೂ ಹೆಲ್ಮೆಟ್ ಧರಿಸದೇ ಕಾನೂನು ಉಲ್ಲಂಘಿಸುತ್ತಿರುವುದು ಸಾಮಾನ್ಯವಾಗಿದೆ.

ಈ ಕುರಿತಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಹಿರಿಯ ನಾಗರಿಕರೊಬ್ಬರು, ಪೊಲೀಸರು ಪ್ರಸ್ತುತ ಅನುಸರಿಸುತ್ತಿರುವ ವಿಧಾನಕ್ಕಿಂತ ಮಫ್ತಿಯಲ್ಲಿದ್ದು, ಯಾವ ಸುಳಿವು ಸಿಗದಂತಹ ಮೊಬೈಲ್ ವಾಹನಗಳ ಮೂಲಕ ಕಾರ್ಯಾಚರಣೆ ನಡೆಸುವುದು ಸೂಕ್ತವಾಗಿದೆ. ಹೆಲ್ಮೆಟ್ ಧರಿಸದೇ ನಿಯಮ ಉಲ್ಲಂಘಿಸುವ ಪ್ರಕರಣಗಳು ಹೆಚ್ಚಿರುವ ಕೆಲ ಪ್ರದೇಶಗಳಲ್ಲಿ ಈ ರೀತಿಯ ಕಾರ್ಯಾಚರಣೆ ನಡೆಸಬೇಕಿದೆ. ಹೀಗೆ ಕೇವಲ ಎರಡು ತಿಂಗಳು ಹಗಲು–ರಾತ್ರಿ ಕ್ರಮ ಕೈಗೊಳ್ಳುವ ಮೂಲಕ ಪ್ರಕರಣಗಳನ್ನು ದಾಖಲಿಸಿದರೆ, ಪಾಶ್ಚಿಮಾತ್ಯ ದೇಶಗಳಲ್ಲಿ ಇರುವಂತಹ ಸಂಚಾರ ಶಿಸ್ತು ಮೈಸೂರಿನಲ್ಲೂ ಬರಲಿದೆ. ಆದರೆ ರಾಜಕಾರಣಿಗಳು ಅಥವಾ ಪ್ರಭಾವಿಗಳ ಹಸ್ತಕ್ಷೇಪ ಇರಬಾರದಷ್ಟೇ ಎಂದು ಅವರು ಅಭಿಪ್ರಾಯಪಟ್ಟರು.

–ಸಂಪಾದಕ.

ಮೈಸೂರು ನಗರ ಸಂಚಾರ ಪೊಲೀಸರು ಹೆಲ್ಮೆಟ್ ಧರಿಸದೇ ವಾಹನ ಚಾಲನೆ ಮಾಡುವವರ ವಿರುದ್ಧ 2023 ರಲ್ಲಿ 6,48,003 ಪ್ರಕರಣ ದಾಖಲಿಸಿ 1,19,72,200 ರೂ. ದಂಡ ವಸೂಲಿ ಮಾಡಿದರು. ಜೊತೆಗೆ ಹೆಲ್ಮೆಟ್ ಧರಿಸದ ಹಿಂಬದಿ ಸವಾರರಿಗೂ 3,64,878 ಕೇಸು ದಾಖಲಿಸಿ, 1,07,86,250 ದಂಡ ವಸೂಲಿ ಮಾಡಲಾಗಿದೆ.

ಅದರ ಜೊತೆಗೆ ನಿಷೇಧಿತ ಸ್ಥಳದಲ್ಲಿ ವಾಹನ ನಿಲುಗಡೆ, ಇನ್ನಿತರೆ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ 3,34,050 ರೂ., ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸುವವರಿಂದ 3,21,700 ರೂ. ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆಗೆ 19,67,050 ರೂ., ಟ್ರಾಫಿಕ್ ಜಂಕ್ಷನ್ ಉಲ್ಲಂಘಿಸಿದವರಿಂದ 450 ರೂ. ಡಿ.ಎಲ್. ಇಲ್ಲದೆ ವಾಹನ ಚಾಲನೆಗೆ 7,66,000 ರೂ., ಪ್ರವೇಶ ನಿಷಿದ್ಧಿತ ಚಾಲನೆಗೆ 10,01,600 ರೂ., ವಿಮೆ ಇಲ್ಲದವರಿಂದ 5,33,000 ರೂ., ಟ್ರಿಬಲ್ ರೈಡಿಂಗ್‌ನಿಂದ 9,67,400 ರೂ., ದಾಖಲೆ ಗಳಿಲ್ಲದ್ದಕ್ಕೆ 3,64,000 ರೂ. ಹಾಗೂ ಇನ್ನಿತರೆ ರೀತಿ ಸಂಚಾರ ನಿಯಮ ಉಲ್ಲಂಘನೆ ಮಾಡಿರುವವರಿಂದ 14,01,87,550 ರೂ. ದಂಡ ವಸೂಲಿ ಮಾಡಲಾಗಿದೆ.

ಬಾಕಿ ದಂಡ ಇತ್ಯರ್ಥ : 17,17,04,750 ರೂ. ದಂಡ ಬಾಕಿ ಪೈಕಿ ರಿಯಾಯಿತಿ ನೀಡಿದ್ದ ಅವಧಿಯಲ್ಲಿ 7,69,301 ಪ್ರಕರಣ ಇತ್ಯರ್ಥವಾಗಿವೆ. 2023ರ ಫೆಬ್ರವರಿ 3 ರಿಂದ 11ರವರೆಗೆ 12,30,58,650 ರೂ., 2023ರ ಮಾರ್ಚ್ 4 ರಿಂದ 18ರವರೆಗೆ 3,32,60,500 ರೂ. ಹಾಗೂ 2023ರ ಜುಲೈ 6 ರಿಂದ ಸೆಪ್ಟೆಂಬರ್ 9ರವರೆಗೆ 1,53,85,600 ರೂ. ದಂಡ ವಸೂಲಿ ಆಗಿದೆ.

ಜಯದೇವ ಹೃದ್ರೋಗ ಸಂಸ್ಥೆ ವಿಶ್ರಾಂತ ನಿರ್ದೇಶಕ

ಡಾ.ಸಿ.ಎನ್.ಮಂಜುನಾಥರಿಗೆ ಫೆ.26 ರಂದು 'ನಾಗರಿಕ ಸನ್ಮಾನ'



ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರಿಗೆ 'ಸನ್ಮಾನ ಕಾರ್ಯಕ್ರಮ' ಆಯೋಜನೆ ಸಂಬಂಧ ವಿವಿಧ ಸಂಘಟನೆಗಳ ಮುಖಂಡರು ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ಸಭೆ ನಡೆಸಿದರು


ಮೈಸೂರು, ಫೆ.5(ಎಂಕೆ)– ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಫೆ.26 ರಂದು ಮೈಸೂರಿನ ಕಲಾಮಂದಿರದಲ್ಲಿ ಜಾತ್ಯಾತೀತವಾಗಿ ಸರ್ವಜನಾಂಗದ ವತಿಯಿಂದ 'ನಾಗರಿಕ ಸನ್ಮಾನ' ನೀಡಿ ಗೌರವಿಸಲು ಒಕ್ಕೊರಲಿನಿಂದ ತೀರ್ಮಾನಿಸಲಾಯಿತು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ಸಭೆ ನಡೆಸಿದ ಒಕ್ಕಲಿಗ ಸಮುದಾಯದ ವಿವಿಧ ಸಂಘಟನೆಗಳ ಮುಖಂಡರು, ಜಾತಿ–ಮತವೆನ್ನದೆ ಸಾವಿರಾರು ಜನರ ಸೇವೆ ಮಾಡಿರುವ ಖ್ಯಾತ ಹೃದ್ರೋಗ ತಜ್ಞರಾದ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಒಕ್ಕಲಿಗರು ಸೇರಿದಂತೆ ಎಲ್ಲಾ ಸಮುದಾಯಗಳ ಮುಖಂಡರು ಸೇರಿ ಜಾತ್ಯಾತೀತವಾಗಿ ಸನ್ಮಾನಿಸಿ ಗೌರವಿಸಲು ನಿರ್ಧರಿಸಲಾಯಿತು.

ಡಾ.ಸಿ.ಎನ್.ಮಂಜುನಾಥ್ ಅವರು ಒಂದು ಸಮುದಾಯದಕ್ಕೆ ಮಾತ್ರವಲ್ಲದೆ ತಮ್ಮ ಸೇವೆಯ ಮೂಲಕ ಸಮಾಜಕ್ಕೆ ಗೌರವ ತಂದಿದ್ದಾರೆ. ಅವರ ಸೇವೆಯನ್ನು ಸ್ಮರಿಸುವ ನಿಟ್ಟಿನಲ್ಲಿ ಸನ್ಮಾನ ಕಾರ್ಯಕ್ರಮ ರೂಪಿಸಬೇಕು. ಸುತ್ತೂರು ಶ್ರೀಗಳು, ಆದಿಚುಂಚನಗಿರಿ ಶ್ರೀಗಳು ಸಮಾಜದ ಗಣ್ಯರನ್ನು ಆಹ್ವಾನಿಸಿ ಅರ್ಥಪೂರ್ಣವಾಗಿ ಅಭಿನಂದಿಸಬೇಕು. ಡಾ.ಮಂಜುನಾಥ್ ಅವರ ಸಾಧನೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜನೆಯಾಗಬೇಕು ಎಂದು ಚರ್ಚಿಸಲಾಯಿತು.

ಸನ್ಮಾನ ಕಾರ್ಯಕ್ರಮಕ್ಕೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಿಂದ ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಮಾಡಲಾಗಿದೆ. ವೇದಿಕೆ ಕಾರ್ಯಕ್ರಮ, ಊಟದ ವ್ಯವಸ್ಥೆ ಸೇರಿದಂತೆ ಎಲ್ಲವೂ ಅಚ್ಚುಕಟ್ಟಾಗಿ ನಡೆಯಬೇಕು. ಎಲ್ಲರೂ ಒಟ್ಟಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹಲವರು ತಮ್ಮ ತಮ್ಮ ಅಭಿಪ್ರಾಯ ತಿಳಿಸಿದರು.

ನಗರಪಾಲಿಕೆ ಮಾಜಿ ಸದಸ್ಯರಾದ ಎಸ್.ಬಿ.ಎಂ ಮಂಜು, ಪ್ರೇಮಾ ಶಂಕರೇಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ.ಹೇಮಂತ್‌ಕುಮಾರ್ ಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ಮುಖಂಡರಾದ ಕವೀಶ್‌ಗೌಡ, ರವಿಚಂದ್ರೇಗೌಡ, ಮಂಜುಳಾ ಮಾನಸ, ಹೇಮಾ ನಂದೀಶ್, ನೇಹಾ ನೈನಾ, ಸತೀಶ್‌ಜವರೇಗೌಡ, ಚೇತನ್, ಹರ್ಷ, ಸತೀಶ್‌ಗೌಡ, ವಿಜಯನಗರ ಮಂಜು, ಗೋಕುಲ್ ಗೋವರ್ಧನ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.



ಮೈಸೂರು ತಾಲೂಕು ಮರಟಿಕ್ಯಾತನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತರಾದ ಎಂ.ವೆಂಕಟೇಶ್ ಅಧ್ಯಕ್ಷರಾಗಿ ಹಾಗೂ ಸೋಮಶೇಖರ್ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಯಜಮಾನರಾದ ಬೂದಿಸಿದ್ದೇಗೌಡ, ಗಂಗಾಧರ್, ಜಗದೀಶ್, ಪುಟ್ಟಣ್ಣಿಗೌಡ, ಜವರೇಗೌಡ, ಗಿರಿಗೌಡ, ಕೃಷ್ಣೇಗೌಡ, ವಕೀಲರಾದ ಸಿದ್ದರಾಜು, ಜೆಡಿಎಸ್ ಮುಖಂಡರಾದ ಸುರೇಶ್, ಲೋಕೇಶ್, ಶಂಕರ್, ಸಂಘದ ಕಾರ್ಯದರ್ಶಿ ರಾಜೇಶ್, ನಿರ್ದೇಶಕರಾದ ಮಾದೇಗೌಡ, ಚಾಮರಾಜು, ಮರಿಗೌಡ, ಗಿರಿಗೌಡ, ಪುಟ್ಟಶೆಟ್ಟಿ, ದಿವ್ಯ ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

ಅಂತರರಾಷ್ಟ್ರೀಯ ಭೀಮ್‌ಸ್ಟೆಕ್ ಚಾಂಪಿಯನ್ ಶಿಪ್‌ಗೆ ಮೈಸೂರಿನ ಎಸ್.ತಾನ್ಯ ಆಯ್ಕೆ



ಮೈಸೂರು, ಫೆ.5 (ಎಸ್‌ಪಿಎನ್)– ನವದೆಹಲಿ ಎಸ್.ಪಿ.ಮುಖರ್ಜಿ ಕ್ರೀಡಾಂಗಣದಲ್ಲಿ ನಾಳೆಯಿಂದ 13ರವರೆಗೆ ನಡೆಯುವ ಅಂತರರಾಷ್ಟ್ರೀಯ ಭೀಮ್ ಸ್ಟೆಕ್ (BIMSTEC- The Bay of Bengal initiative for Multi-Sectoral Technical and Economic Co-Operation) ಚಾಂಪಿಯನ್ ಶಿಪ್‌ಗೆ (ಈಜು ಸ್ಪರ್ಧೆ) ಮೈಸೂರಿನ ಶಾರದಾ ಪಬ್ಲಿಕ್ ಶಾಲಾ ವಿದ್ಯಾರ್ಥಿನಿ ಹಾಗೂ ಈಜುಪಟು ಎಸ್.ತಾನ್ಯ ಅವರನ್ನು ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾ ಆಯ್ಕೆ ಮಾಡಿದೆ.

ಸ್ಪರ್ಧೆಯಲ್ಲಿ ಭಾರತ, ಬಾಂಗ್ಲಾದೇಶ, ಭೂತಾನ್, ಮಯನ್ಮಾರ್, ನೇಪಾಳ, ಶ್ರೀಲಂಕಾ, ಥೈಲ್ಯಾಂಡ್ ಸೇರಿದಂತೆ ಒಟ್ಟು 7 ದೇಶಗಳ ಆಟಗಾರರು ಭಾಗವಹಿಸಲಿದ್ದು, ಮೈಸೂರಿನ ಎಸ್.ತಾನ್ವಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಈಜುಪಟು ತಾನ್ಯ ಜೆ.ಪಿ.ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದಲ್ಲಿ ಕಳೆದ 5 ವರ್ಷಗಳಿಂದ ಪಿ.ಪ್ರೇಮ್ ಕುಮಾರ್ ಬಳಿ ತರಬೇತಿ ಪಡೆದಿದ್ದಾರೆ. ಅಲ್ಲದೆ, ಕಳೆದ ತಿಂಗಳು ತಮಿಳುನಾಡಿನಲ್ಲಿ ನಡೆದ ರಾಷ್ಟ್ರಮಟ್ಟದ ಖೇಲೋ ಯೂತ್ ಗೇಮ್ಸ್‌ನ 400 ಮೀಟರ್ ಇಂಡೂವಿಷ್ಯೂಯಲ್ ಮಿಡ್ಲೆ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದ್ದರು. ಈ ಹಿಂದೆಯೂ ಬೇರೆ ಬೇರೆ ಸ್ಥಳಗಳಲ್ಲಿ ನಡೆದ ಈಜು ಸ್ಪರ್ಧೆಯಲ್ಲಿ ಸ್ಪರ್ಧಿಸಿ ಉತ್ತಮ ಸ್ಥಾನಗಳಿಸಿದ್ದರು. ಈ ಹಿನ್ನೆಲೆಯಲ್ಲಿ ಈಜುಪಟು ತಾನ್ಯ ಅವರ ಸಾಮರ್ಥ್ಯ ಪರಿಗಣಿಸಿರುವ ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾ ಪದಾಧಿಕಾರಿಗಳು ಈ ಸ್ಪರ್ಧೆಗೆ ಆಯ್ಕೆ ಮಾಡಿದ್ದಾರೆ ಎಂದು ಕರ್ನಾಟಕ ಸ್ವಿಮ್ಮಿಂಗ್ ಫೆಡರೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.

ಜೀವನ ಮೌಲ್ಯ ಪಸರಿಸುವ ಜಾನಪದ ರಂಗಭೂಮಿ

ಹಿರಿಯ ರಂಗಕರ್ಮಿ ಪ್ರಕಾಶ್ ಗರುಡ



ಮೈಸೂರು,ಫೆ.5(ಪಿಎಂ)– ಜಾನಪದ ರಂಗಭೂಮಿ ಕೇಂದ್ರೀಕರಣದ ಪರಿಧಿ ಹೊಂದಿರುವುದಿಲ್ಲ ಇದು ಜೀವನ ಮೌಲ್ಯಗಳನ್ನು ಪಸರಿಸುವ ಜೊತೆಗೆ ಪ್ರತಿರೋಧವೊಡ್ಡುವ ಗುಣಲಕ್ಷಣ ಹೊಂದಿರುತ್ತದೆ ಎಂದು ಹಿರಿಯ ರಂಗಕರ್ಮಿ ಪ್ರಕಾಶ್ ಗರುಡ ಹೇಳಿದರು.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಸಂಯುಕ್ತಾಶ್ರಯದಲ್ಲಿ ಫೆ.9ರವರೆಗೆ ಹಮ್ಮಿಕೊಂಡಿರುವ 'ರಂಗಸಂಯುಕ್ತ–ರಂಗಭೂಮಿ, ಅದರ ಪೂರಕ ಕಲೆಗಳು' ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಸೋಮವಾರ 'ಜಾನಪದ' ಕುರಿತು ಅವರು ಮಾತನಾಡಿದರು.

ಸ್ವಾತಂತ್ರ್ಯೋತ್ತರದಲ್ಲಿ ಅಧ್ಯಯನಕ್ಕಾಗಿ ಶಾಸ್ತ್ರೀಯ, ಜಾನಪದ ಮತ್ತು ಆಧುನಿಕ ರಂಗಭೂಮಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. 10ನೇ ಶತಮಾನದಲ್ಲಿ ಶಾಸ್ತ್ರೀಯ ರಂಗಭೂಮಿ ಹಿಂದಕ್ಕೆ ಸರಿಯಿತು. ಅದಕ್ಕೆ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಕಾರಣಗಳೂ ಇವೆ. ಸಂಸ್ಕೃತವನ್ನು ಸಾಮಾನ್ಯ ಜನತೆಗೆ ಬಿಟ್ಟುಕೊಡದ ಕಾರಣವೂ ಸೇರಿದೆ. ಅಲ್ಲದೆ, ಈ ಶಾಸ್ತ್ರೀಯ ರಂಗಭೂಮಿ ಮಾಡುವವರು ಮತ್ತು ನೋಡುವವರು ಎಲ್ಲಾ ರಾಜಮಹಾರಾಜರ ಆಸ್ಥಾನಕ್ಕೆ ಸೀಮಿತವಾಗಿತ್ತು. ವಿದ್ವತ್ ಜನತೆಗೆ ಅದು ಸೀಮಿತವಾಗಿತ್ತು ಎಂದರು.

ಈ ಶತಮಾನದ ನಂತರದಲ್ಲಿ ರಾಜಮಹಾರಾಜರು ನಿರಂತರ ಯುದ್ಧಗಳಲ್ಲಿ ನಿರತರಾದ ಹಿನ್ನೆಲೆಯಲ್ಲಿಯೂ ಶಾಸ್ತ್ರೀಯ ರಂಗಭೂಮಿ ಹಿಂದಕ್ಕೆ ಸರಿಯುವಂತಾಯಿತು. ಅಲ್ಲದೆ, ಪ್ರಾದೇಶಿಕ ಭಾಷೆಗಳು ಅಭಿವೃದ್ಧಿಯತ್ತ ಸಾಗಿದವು. ಅಲ್ಲದೆ, ಈ ಸಂದರ್ಭದಲ್ಲಿ ಹಲವು ಭಕ್ತಿಪಂಥಗಳು ಹುಟ್ಟುಕೊಳ್ಳುತ್ತವೆ. 10ನೇ ಶತಮಾನದಿಂದ ಬ್ರಿಟಿಷರು ಬರುವವರೆಗೆ ಇವು ತಮ್ಮ ಪಂಥದ ಆಚರಣೆಗಳಿಗಾಗಿ ರಂಗಭೂಮಿ ಮಾಧ್ಯಮಕ್ಕೆ ತೆರೆದುಕೊಳ್ಳುತ್ತವೆ ಎಂದು ತಿಳಿಸಿದರು.

ಜಾನಪದ ಅನ್ನುವುದು ಸರಳವಾದ ಬಂಧ. ಅದು ನೇರ ಸಂವಹನದ ಗುಣವನ್ನು ಹೊಂದಿದೆ. ಬಹುತೇಕ ಜಾನಪದ ಕಲೆಗಳು, ನಮ್ಮ ಜನ ಸಮುದಾಯದ ಶ್ರಮ ಸಂಸ್ಕೃತಿಯೊಂದಿಗೆ ನೇರ ಸಂಬಂಧ ಹೊಂದಿವೆ. ಈ ಕಲೆಗಳಲ್ಲಿ ವಾಣಿಜ್ಯೀಕರಣ ಪ್ರವೇಶ ಪಡೆದರೆ ಜಾನಪದದ ಸೊಗಡು ಇಲ್ಲವಾಗಲಿದೆ. ಅದರ ಉದ್ದೇಶ ವಾಣಿಜ್ಯೀಕರಣವಲ್ಲ ಎಂದು ಹೇಳಿದರು.

ಜಾನಪದ ನಾಟಕಗಳು ಕೇಂದ್ರೀಕೃತ ರಚನೆ ಹೊಂದಿರುವುದಿಲ್ಲ. ಜೊತೆಗೆ ಕಾಲದ ಹಂಗು ಇರುವುದಿಲ್ಲ. ಹಾಗಾಗಿ ಬ್ರಿಟಿಷರು ಕಟ್ಟಿಕೊಟ್ಟಿರುವ ಇತಿಹಾಸ ವಿಧಾನದಲ್ಲಿ ಇದನ್ನು ನೋಡಲು ಸಾಧ್ಯವಿಲ್ಲ. ನಮ್ಮಲ್ಲಿ 1970ರ ದಶಕದಲ್ಲಿ ಎರಡು ಮೂರು ನಾಟಕಗಳು ಜಾನಪದ ಶೈಲಿಯಲ್ಲಿ ಬಂದವು. ಅವುಗಳನ್ನು ಹೊಸತನದ ಸಂಚಲನ ಉಂಟು ಮಾಡಿದವೆಂದು ಪತ್ರಿಕೆಗಳು ಶ್ಲಾಘಿಸಿದವು ಎಂದು ತಿಳಿಸಿದರು.



ಸಮಾಜ ಕಲ್ಯಾಣ ಇಲಾಖೆ ವತಿಯಿಂದ ರಂಗಾಂತರಂಗ ಮೈಸೂರು ತಂಡವು ದೌರ್ಜನ್ಯ, ಅಸ್ಪೃಶ್ಯತೆ, ಅಂತರ್ಜಾತಿ ವಿವಾಹ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸೌಲಭ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ನಂಜನಗೂಡು ತಾಲೂಕು ನವಿಲೂರು ಗ್ರಾಮದಲ್ಲಿ ಬೀದಿ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.


ಇಂದು ವಿದ್ಯುತ್ ವ್ಯತ್ಯಯ

ಮೈಸೂರು, ಫೆ. 5– ಹುಣಸೂರು ತಾಲೂಕಿನ ಬನ್ನಿಕುಪ್ಪೆ 66/11 ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಫೆ 6ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ಬನ್ನಿಕುಪ್ಪೆ ಮರದೂರು, ಉದ್ದೂರು ಗ್ರಾಮ ಪಂಚಾಯ್ತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಗ್ಯಾಸ್ ಗೀಸರ್‌ನಿಂದ ವಿಷಾನಿಲ ಸೋರಿ ಸಾವಿಗೀಡಾದ ಯುವತಿ

ಕುಟುಂಬಕ್ಕೆ 39.50 ಲಕ್ಷ ಪರಿಹಾರ

ಕೊಡಗಿನ ಹೋಂಸ್ಟೇ ಮಾಲೀಕರು, ವ್ಯವಸ್ಥಾಪಕರಿಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ



ಮಡಿಕೇರಿ, ಫೆ.5–ಗ್ಯಾಸ್ ಗೀಸರ್‌ನಿಂದ ವಿಷಾನಿಲ ಸೋರಿಕೆಯಾಗಿ ಹೋಂಸ್ಟೇ ಬಾತ್‌ರೂಂನಲ್ಲಿ ಮೃತಪಟ್ಟ ಮುಂಬೈ ಮೂಲದ ಯುವತಿಯ ಕುಟುಂಬದವರಿಗೆ 39.50 ಲಕ್ಷ ರೂ. ಪರಿಹಾರ ನೀಡಬೇಕೆಂದು ಹೋಂಸ್ಟೇ ಮಾಲೀಕರು ಹಾಗೂ ವ್ಯವಸ್ಥಾಪಕರಿಗೆ ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ ನೀಡಿದೆ.

ಈ ಪ್ರಕರಣದಲ್ಲಿ ಮೃತ ಯುವತಿಯ ತಂದೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಮಡಿಕೇರಿಯ ಕೂರ್ಗ್ ವ್ಯಾಲಿ ಹೋಂಸ್ಟೇ ಮಾಲೀಕರಾದ ಶೇಖ್ ಮೊಹಮದ್, ಶೇಖ್ ಇಬ್ರಾಹಿಂ, ವ್ಯವಸ್ಥಾಪಕ ಮುಕ್ತಾರ್ ಅಹಮದ್, ಈ ಹೋಂಸ್ಟೇಯನ್ನು ಬುಕ್ ಮಾಡಲು ಏಜೆಂಟ್ ಆಗಿ ಕಾರ್ಯ ನಿರ್ವಹಿಸಿದ್ದ ಕರ್ಣಂಗೇರಿಯ ಲೀಫ್ ಕ್ಲಮ್ ಸ್ಟೇ ವ್ಯವಸ್ಥಾಪಕ ಪಾಂಡ್ಯರಾಜನ್ ಅವರಿಂದ ಪರಿಹಾರ ಕೊಡಿಸಬೇಕು ಎಂದು ಮನವಿ ಮಾಡಿದ್ದರು. ಆದರೆ ಆಯೋಗವು ಪಾಂಡ್ಯರಾಜನ್ ಅವರನ್ನು ಕೈಬಿಟ್ಟು ಉಳಿದ ಮೂವರು ಸೇರಿ ಯುವತಿ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಆದೇಶಿಸಿದೆ.

ಹಿನ್ನೆಲೆ: ಮುಂಬೈ ಮೂಲದ ಈಶ್ವರನ್ ಎಂಬುವರ ಪುತ್ರಿ ವಿಘ್ನೇಶ್ವರಿ ಈಶ್ವರ್(24) ಎಂಬಿಎ ಪದವೀಧರೆಯಾಗಿದ್ದು, ಮುಂಬೈ ಮೂಲದ ಖಾಸಗಿ ಕಂಪನಿಯ ಉದ್ಯೋಗಿಯಾಗಿದ್ದರು. 2021ರ ಮಾ.23ರಂದು ಬೆಂಗಳೂರಿಗೆ ಆಗಮಿಸಿದ್ದ ಈಕೆ, ಪಾಂಡ್ಯರಾಜನ್ ಮೂಲಕ ಆನ್ ಲೈನ್‌ನಲ್ಲಿ ಮಡಿಕೇರಿಯ ಅಗ್ನಿಶಾಮಕ ದಳದ ಕಚೇರಿಗೆ ತೆರಳುವ ರಸ್ತೆಯಲ್ಲಿರುವ ಕೂರ್ಗ್ ವ್ಯಾಲಿ ಹೋಂಸ್ಟೇನಲ್ಲಿ ರೂಂ ಬುಕ್ ಮಾಡಿದ್ದರು.

2021ರ ಮಾ.24ರಂದು ತನ್ನ ಗೆಳತಿಯರಾದ ಮಧುಶ್ರೀ, ಅಕ್ಷತಾ, ಸುರಭಿ ಮತ್ತು ಕಷಿನ್ ಸಕ್ಸೇನಾ ಎಂಬುವರೊಂದಿಗೆ ಕೂರ್ಗ್ ವ್ಯಾಲಿ ಹೋಂಸ್ಟೇಗೆ ಬಂದು ವಾಸ್ತವ್ಯ ಹೂಡಿದ್ದರು. ಅಂದು ಕೊಡಗಿನ ಕೆಲ ಪ್ರವಾಸಿ ತಾಣಗಳಿಗೆ ಹೋಗಿಬಂದ ನಂತರ ರಾತ್ರಿ 9 ಗಂಟೆ ಸುಮಾರಿನಲ್ಲಿ ಸ್ನಾನ ಮಾಡಲು ಬಾತ್‌ರೂಂಗೆ ಹೋಗಿದ್ದ ವಿಘ್ನೇಶ್ವರಿ ಅಲ್ಲೇ ಕುಸಿದು ಬಿದ್ದಿದ್ದರು. ಇದನ್ನು ಗಮನಿಸಿದ ಸ್ನೇಹಿತೆಯರು ಆಕೆಯನ್ನು ಮಡಿಕೇರಿಯ ಖಾಸಗಿ ಆಸ್ಪತ್ರೆಗೆ ರವಾನಿಸಿದರಾದರೂ, ಮಾರ್ಗ ಮಧ್ಯೆ ವಿಘ್ನೇಶ್ವರಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದರು.

ಈ ಸಂಬಂಧ ಆಕೆಯ ತಂದೆ ಈಶ್ವರನ್ ನೀಡಿದ ದೂರಿನ ಮೇರೆಗೆ ಮಡಿಕೇರಿ ಟೌನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾರಂಭಿಸಿದರು. ಈ ಮಧ್ಯೆ ಈಕೆ ಗ್ಯಾಸ್ ಗೀಸರ್‌ನಿಂದ ಕಾರ್ಬನ್ ಮೊನಾಕ್ಸೈಡ್ ಅನಿಲ ಸೋರಿಕೆಯಾಗಿದ್ದರಿಂದ ಮೃತಪಟ್ಟಿರುವುದಾಗಿ ವಿಧಿ–ವಿಜ್ಞಾನ ಪ್ರಯೋಗಾಲಯದ ವರದಿ ಬಂದ ನಂತರ ಈಶ್ವರನ್ ಅವರು 2023ರ ಜೂನ್ 30ರಂದು ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಪ್ರಭಾರಿ ಅಧ್ಯಕ್ಷೆ ರೇಣುಕಾಂಬ ಮತ್ತು ಸದಸ್ಯೆ ಗೌರಮ್ಮಣ್ಣಿ ಅವರು ಯುವತಿ ವಿಘ್ನೇಶ್ವರಿ ಗ್ಯಾಸ್ ಗೀಸರ್‌ನಿಂದ ಸೋರಿಕೆಯಾದ ವಿಷಾನಿಲದಿಂದ ಮೃತಪಟ್ಟಿದ್ದಾರೆ. ಆಕೆ ಮೃತಪಟ್ಟ ಬಾತ್‌ರೂಂನಲ್ಲಿ ಗಾಳಿ ಹೊರ ಹೋಗಲು ವೆಂಟಿಲೇಟರ್ ವ್ಯವಸ್ಥೆಯೂ ಕೂಡ ಇರಲಿಲ್ಲ ಎಂಬುದನ್ನು ಉಲ್ಲೇಖಿಸಿ, ಮೃತಪಟ್ಟ ವಿಘ್ನೇಶ್ವರಿ ಉದ್ಯೋಗಸ್ಥೆ ಯಾಗಿದ್ದು, ಆಕೆಗೆ ವೇತನವೂ ಬರುತ್ತಿತ್ತು ಎಂಬುದನ್ನು ಪರಿಗಣಿಸಿ, ಆಕೆಯ ಮೃತಪಟ್ಟ ದಿನದಿಂದ 30 ವರ್ಷಗಳವರೆಗೆ ಆಕೆ ಪಡೆಯುತ್ತಿದ್ದ ಸಂಬಳದಲ್ಲಿ ಅರ್ಧದಷ್ಟು ಅಂದರೆ ತಿಂಗಳಿಗೆ 10,417 ರೂ.ಗಳಂತೆ ಒಟ್ಟು 37,50,120 ರೂ.ಗಳನ್ನು ಶೇ.6ರಷ್ಟು ಬಡ್ಡಿ ಸೇರಿಸಿ ಆಕೆಯ ಕುಟುಂಬದವರಿಗೆ ನೀಡಬೇಕು. ಜೊತೆಗೆ ಸೇವಾ ನ್ಯೂನ್ಯತೆ ಹಾಗೂ ಅರ್ಜಿದಾರರ ಮಾನಸಿಕ ವೇದನೆ ಮತ್ತು ವ್ಯಾಜ್ಯದ ಖರ್ಚು–ವೆಚ್ಚಗಳಿಗಾಗಿ ಅವರಿಗೆ 2 ಲಕ್ಷ ರೂ.ಗಳನ್ನೂ ಕೂಡ ಶೇ.6ರ ಬಡ್ಡಿ ದರದೊಂದಿಗೆ ಹೋಂಸ್ಟೇ ಮಾಲೀಕರಾದ ಶೇಖ್ ಮೊಹಮದ್, ಶೇಖ್ ಇಬ್ರಾಹಿಂ ಮತ್ತು ವ್ಯವಸ್ಥಾಪಕ ಮುಕ್ತಾರ್ ಅಹಮದ್ ನೀಡಬೇಕು ಎಂದು ಆದೇಶಿಸಿದ್ದಾರೆ.

ಮೈಸೂರು ಮಿತ್ರ

ತಾಲೂಕು ಕಚೇರಿ, ಸಬ್‌ರಿಜಿಸ್ಟ್ರಾರ್ ದಾಖಲೆಗಳ ಡಿಜಿಟಲೀಕರಣ



ಮಡಿಕೇರಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಕಂದಾಯ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಮಾತನಾಡಿದರು. ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್‌ಗೌಡ, ಎಂಎಲ್ಸಿ ಸುಜಾ ಕುಶಾಲಪ್ಪ, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಕಂದಾಯ ಆಯುಕ್ತ ಮಂಜುನಾಥ್ ಇದ್ದರು.

• ಕಂದಾಯ ಸಚಿವ ಕೃಷ್ಣಬೈರೇಗೌಡ ಮಾಹಿತಿ • ಮಡಿಕೇರಿಯಲ್ಲಿ ಇಲಾಖೆ ಅಧಿಕಾರಿಗಳ ಸಭೆ

ಮಡಿಕೇರಿ, ಫೆ.5–ರಾಜ್ಯ ಸರ್ಕಾರ ಇಂದಿನಿಂದ (ಸೋಮವಾರ) ಎಲ್ಲಾ ಸರ್ವೆ, ತಾಲೂಕು ಕಚೇರಿ ಮತ್ತು ಸಬ್‌ರಿಜಿಸ್ಟ್ರಾರ್ ಕಚೇರಿಗಳ ದಾಖಲೆಗಳನ್ನು ಡಿಜಿಟಲೀಕರಣಕ್ಕೆ ಒಳಪಡಿಸಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಕಂದಾಯ ಇಲಾಖೆ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಂದಾಯ ಇಲಾಖೆಯಲ್ಲಿ ಅಗತ್ಯ ಕೆಲಸ ಕಾರ್ಯಗಳು ನಿಗದಿತ ವೇಳೆ ನಡೆಯದೆ ಉಂಟಾಗುತ್ತಿರುವ ಸಮಸ್ಯೆಗಳ ಬಗೆಹರಿಕೆಗೆ ಸರ್ಕಾರ ಕಳೆದ 8 ತಿಂಗಳಿಂದ ಸಾಕಷ್ಟು ಪ್ರಯತ್ನಗಳನ್ನು ಮಾಡಿದೆ. ಇದರ ಪರಿಣಾಮ ಅರ್ಜಿಗಳ ವಿಲೇವಾರಿ ಮತ್ತು ಪ್ರಕರಣಗಳ ಇತ್ಯರ್ಥ ಪ್ರಸ್ತುತ ಚುರುಕುಗೊಂಡಿದೆ ಎಂದರು.

ಕಂದಾಯ ಇಲಾಖೆ ಕಚೇರಿಗಳಲ್ಲಿ ಅರ್ಜಿಗಳ ವಿಲೇವಾರಿ ಮತ್ತು ಪ್ರಕರಣಗಳನ್ನು ಇತ್ಯರ್ಥಪಡಿಸುವ ಕಾರ್ಯ ವಿಳಂಬವಾಗುತ್ತಿದ್ದು, ಇದರಿಂದ ಸಮಸ್ಯೆ ಜಟಿಲವಾಗುತ್ತಿದೆ. ಜನಸಾಮಾನ್ಯರು ಕಂದಾಯ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಅಧಿಕಾರಿಗಳು ಜನಪರ ಕಾರ್ಯನಿರ್ವಹಿಸಬೇಕು. ಅಧಿಕಾರಿಗಳು, ಸಿಬ್ಬಂದಿ ತಮ್ಮ ಮೈಂಡ್ ಸೆಟ್ ಅಪ್ ಅನ್ನು ಬದಲಾಯಿಸಿಕೊಳ್ಳುವ ಮೂಲಕ ನಾವು ಜನರಿಂದ ಜನರಿಗಾಗಿ ಬಂದವರು ಎಂದು ಅರ್ಜಿದಾರರ ಅಹವಾಲಿಗೆ ತುರ್ತಾಗಿ ಸ್ಪಂದಿಸಬೇಕು. ಕೆಲಸ ಮಾಡುವುದು ಬೇಡ ಎನ್ನುವುದಕ್ಕೆ ನೂರು ಕಾರಣಗಳು ಸಿಗುತ್ತವೆ. ಅದೇ ಕೆಲಸ ಮಾಡಲೇಬೇಕೆನ್ನುವ ಭಾವನೆ ಇದ್ದಲ್ಲಿ ಅದಕ್ಕೆ ಹತ್ತಾರು ಹಾದಿಗಳು ತೆರೆದುಕೊಳ್ಳುತ್ತವೆ ಎಂದು ಹೇಳಿದರು.

> ಜಾಗದ ಸಮಸ್ಯೆ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಗೆ ಸರ್ವೇಯರ್‌ಗಳು ಹಾಗೂ ಆಧುನಿಕ ಸರ್ವೇ ಸಲಕರಣೆಗಳನ್ನು ನೀಡಲು ರಾಜ್ಯ ಸರ್ಕಾರ ಸಿದ್ಧ.
> –ಕೃಷ್ಣಬೈರೇಗೌಡ, ಕಂದಾಯ ಸಚಿವ.

ತಹಶೀಲ್ದಾರ್ ನ್ಯಾಯಾಲಯದಲ್ಲಿ ದಾಖಲಾಗುವ ಯಾವುದೇ ಪ್ರಕರಣಗಳು 3 ತಿಂಗಳ ಒಳಗಾಗಿ ಇತ್ಯರ್ಥಗೊಳ್ಳಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ವೇಳೆ ನಿಗದಿತ ಅವಧಿ ಕಳೆದರು ಇತ್ಯರ್ಥವಾಗದೆ ಉಳಿದಿದ್ದ 2515 ಪ್ರಕರಣಗಳಲ್ಲಿ 107 ಪ್ರಕರಣಗಳಷ್ಟೇ ಬಾಕಿ ಇವೆ. ಶೇ.95ರಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಅದೇ ರೀತಿ ಎಸಿ ನ್ಯಾಯಾಲಯದಲ್ಲಿ ಪ್ರಕರಣಗಳ ಇತ್ಯರ್ಥಕ್ಕೆ 6 ತಿಂಗಳ ಕಾಲಾವಕಾಶವಷ್ಟೇ ಇದೆ. ಅಲ್ಲಿ ಇತ್ಯರ್ಥವಾಗದ 5 ವರ್ಷಕ್ಕೂ ಮೇಲ್ಪಟ್ಟ 32,787 ಪ್ರಕರಣಗಳಿವೆ. ಸುಮಾರು 26 ರಿಂದ 27 ಸಾವಿರ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಅಂದು ಪ್ರಕರಣಗಳನ್ನು ಬಾಕಿ ಉಳಿಸಿಕೊಂಡವರು ನೀವೆ, ಇಂದು ಇತ್ಯರ್ಥಪಡಿಸಿದವರು ನೀವೆ ಎಂದು ಅಧಿಕಾರಿಗಳಿಗೆ ಶ್ಲಾಘಿಸಿದರು.

ಪರಿಹಾರ ಬಿಡುಗಡೆ: ರಾಜ್ಯಾದ್ಯಂತ ಫ್ರೂಟ್ ಆ್ಯಪ್ ಮೂಲಕ ನೋಂದಣಿ ಮಾಡಿಕೊಂಡ 31 ಲಕ್ಷ ಬೆಳೆಗಾರರಿಗೆ 650 ಕೋಟಿ ರೂ. ಪರಿಹಾರವನ್ನು ಈಗಾಗಲೇ ನೀಡಲಾಗಿದೆ. ಇದರ ನಡುವೆಯೂ ಪರಿಹಾರ ದೊರಕದಿರುವ ಪ್ರಕರಣಗಳಿದ್ದಲ್ಲಿ ಅದನ್ನು ಬಗೆಹರಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಸಚಿವರು ಸೂಚಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮಾಹಿತಿ ನೀಡಿ, ಕೊಡಗು ಜಿಲ್ಲೆಯಲ್ಲಿ 11,303 ಕೃಷಿಕ ಫಲಾನುಭವಿಗಳಿಗೆ ಈಗಾಗಲೇ 181 ಕೋಟಿ ರೂ. ಪಾವತಿಸಲಾಗಿದೆ ಎಂದು ತಿಳಿಸಿದರು.

ಬಾಡಿಗೆಗೆ ಕೊಳವೆ ಬಾವಿ: ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತೆ ವಹಿಸಬೇಕು. ಬರ ನಿರ್ವಹಿಸುವ ಸಲುವಾಗಿ ರಾಜ್ಯಾದ್ಯಂತ ಈಗಾಗಲೇ ಸರ್ಕಾರ ಸುಮಾರು 3 ಸಾವಿರ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದಲ್ಲಿ ಪಡೆದುಕೊಂಡಿದೆ. ಜಿಲ್ಲೆಗೆ ಸಂಬಂಧಿಸಿದಂತೆ ತಾಲೂಕುವಾರು ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಟೆಂಡರ್ ಕರೆದು ಟ್ಯಾಂಕರ್ ವ್ಯವಸ್ಥೆ ಮಾಡಿಕೊಳ್ಳಬೇಕು. ಕೊನೆ ಕ್ಷಣದಲ್ಲಿ ನೀರಿನ ಪೂರೈಕೆಯಲ್ಲಿ ಲೋಪಗಳಾಗಬಾರದೆಂದು ಸಚಿವರು ಹೇಳಿದರು.

ಪೈಕಿ ಖಾತೆ: ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಜಾಗಕ್ಕೆ ಸಂಬಂಧಪಟ್ಟ ಹಲವು ಸಮಸ್ಯೆಗಳಿದ್ದು, ಇವುಗಳನ್ನು ಇತ್ಯರ್ಥಪಡಿಸುವ ಬಗ್ಗೆ ಸಚಿವರು ಸಮಾಲೋಚಿಸಿದರು. ಈ ಸಂದರ್ಭ ಕಂದಾಯ ಆಯುಕ್ತ ಮಂಜುನಾಥ್, ಜಿಲ್ಲೆಯ ಜಾಗದ ಸಮಸ್ಯೆ ಬಗ್ಗೆ ಮಾಹಿತಿ ನೀಡಿದರು. ರಾಜ್ಯ ವ್ಯಾಪಿ ಅವಿಭಜಿತ ಕುಟುಂಬಗಳಿಗೆ ಸಂಬಂಧಿಸಿದ 'ಪೈಕಿ' ಆರ್‌ಟಿಸಿಗಳಿವೆ. ಇವುಗಳಲ್ಲಿ ಸುಮಾರು 35 ಸಾವಿರ ಆರ್‌ಟಿಸಿಗಳು ಕೊಡಗಿನಲ್ಲೇ ಇವೆ. ಇವುಗಳ ಇತ್ಯರ್ಥಕ್ಕಾಗಿ ಕ್ರಮ ಕೈಗೊಳ್ಳಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 'ಪೈಕಿ' ಆರ್‌ಟಿಸಿಯಲ್ಲಿ 25 ಸಾವಿರ ಪೈಕಿ ಖಾತೆಗಳು ಖಾಸಗಿಗಳಾಗಿವೆ. ಇವುಗಳಲ್ಲಿ ಸಮಸ್ಯೆಗಳು ಇಲ್ಲದ ಸುಮಾರು 12 ಸಾವಿರ ಖಾತೆಗಳ 'ಪೈಕಿ'ಯನ್ನು ತೆಗೆಯಲು ಕ್ರಮ ಕೈಗೊಳ್ಳಲಾಗಿದೆ. ಉಳಿದವುಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಸಹಕಾರದೊಂದಿಗೆ ಸರ್ವೆ ಕಾರ್ಯ, ಆಯಾ ಜಾಗದ ಪಟ್ಟೆದಾರರ ಸಮ್ಮುಖದಲ್ಲಿ ನಡೆಸಬೇಕಾಗಿದೆ ಎಂದು ತಿಳಿಸಿದರು.

ಮಡಿಕೇರಿ ತಾಲೂಕಿಗೆ ಸಂಬಂಧಿಸಿದಂತೆ ಪೈಕಿ ಖಾತೆಯ 38,300 ಏಕರೆ ಜಾಗದ ಸರ್ವೆ ಕಾರ್ಯ ನಡೆಯುತ್ತಿದೆ. ಈ ಸಂಬಂಧ ತಾಲೂಕಿನ 98 ಗ್ರಾಮಗಳಲ್ಲಿ ಪೋಡಿಮುಕ್ತ ಗ್ರಾಮ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಶಾಸಕರಾದ ಎ.ಎಸ್. ಪೊನ್ನಣ್ಣ, ಡಾ.ಮಂತರ್‌ಗೌಡ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೇಂದ್ರದಿಂದ ಮಲತಾಯಿ ಧೋರಣೆ

ಸಚಿವ ಕೃಷ್ಣಬೈರೇಗೌಡ ಆರೋಪ

ಮಡಿಕೇರಿ, ಫೆ.5– ದಕ್ಷಿಣ ಭಾರತದ ರಾಜ್ಯಗಳಿಗೆ ಬಜೆಟ್‌ನಲ್ಲಿ ಅಗತ್ಯ ಅನುದಾನ ಮೀಸಲಿಡದೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಆರೋಪಿಸಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರದ ಶಕ್ತಿ ವೃದ್ಧಿಗೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಅಗತ್ಯ ನೆರವು ನೀಡಬೇಕು. ಕರ್ನಾಟಕ ಆದಾಯದಲ್ಲಿ ಮೊದಲ ಸ್ಥಾನದಲ್ಲಿದ್ದು, ತೆರಿಗೆ ಪಾವತಿಯಲ್ಲಿ 2ನೇ ಸ್ಥಾನದಲ್ಲಿದೆ. ಆದರೂ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಸೇರಬೇಕಾದ ಆರ್ಥಿಕ ಪಾಲನ್ನು ನೀಡುತ್ತಿಲ್ಲ. ಇದರಿಂದ ದಕ್ಷಿಣ ಭಾರತದ ರಾಜ್ಯಗಳ ಶಕ್ತಿ ಕುಂದಿಸುವ ಪ್ರಯತ್ನ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2017ರ ಬಜೆಟ್‌ನಲ್ಲಿ 52 ಸಾವಿರ ಕೋಟಿ ರೂ. ಅನ್ನು ರಾಜ್ಯಕ್ಕೆ ನೀಡಿದ್ದ ಕೇಂದ್ರ ಸರ್ಕಾರ ಈ ಬಾರಿಯೂ ಅಷ್ಟೇ ಮೊತ್ತವನ್ನು ನೀಡಿದೆ. ಆದರೆ, ಬಜೆಟ್‌ನ ಗಾತ್ರ 2 ಪಟ್ಟು ಹೆಚ್ಚಾಗಿದೆ. ಗಾತ್ರ ಹೆಚ್ಚಾದಂತೆ ನಮ್ಮ ಪಾಲಿನ ಹಣವನ್ನೂ ಹೆಚ್ಚಿಗೆ ನೀಡಬೇಕಾಗಿತ್ತು. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಬರ ಪರಿಹಾರ ಕೋರಿ ಮನವಿ ಸಲ್ಲಿಸಲಾಗಿತ್ತು. ರೈತರ ಬಗ್ಗೆ ಕಾಳಜಿ ಇಲ್ಲದ ಕೇಂದ್ರ ಸರ್ಕಾರ ಇಲ್ಲಿಯವರೆಗೂ ಹಣ ನೀಡಿಲ್ಲ. ಮೇಕೆದಾಟು, ಮಹಾದಾಯಿ ಸೇರಿದಂತೆ ಬೃಹತ್ ನೀರಾವರಿ ಯೋಜನೆಗಳಿಗೆ ಅಗತ್ಯ ಸಹಕಾರ ನೀಡುತ್ತಿಲ್ಲ. ನಮ್ಮ ನದಿ ನೀರನ್ನು ನಾವು ಬಳಸಿಕೊಳ್ಳಲು ಅವಕಾಶ ನೀಡುತ್ತಿಲ್ಲ. ಕೇಂದ್ರ ನಿರಂತರವಾಗಿ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದ್ದು, ಅನುದಾನದ ವಿಚಾರದಲ್ಲಿ ಕಟ್ಟುಕಥೆ ಹೇಳುತ್ತಿದೆ. ಕೇಂದ್ರದ ಮಲತಾಯಿ ಧೋರಣೆ ಬಗ್ಗೆ ಬಹಿರಂಗ ಚರ್ಚೆಗೆ ನಾವು ಸಿದ್ಧರಿದ್ದೇವೆ. ಅಧಿವೇಶನದಲ್ಲಿ ಎಳೆ ಎಳೆಯಾಗಿ ವಿವರಿಸುತ್ತೇವೆ. ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಪ್ರತಿಭಟನೆ ನಡೆಸುತ್ತಿವೆ. ಕರ್ನಾಟಕದಿಂದಲೂ ಫೆ.7ರಂದು ದೆಹಲಿ ಚಲೋ ಹೋರಾಟ ನಡೆಸಲಾಗುತ್ತಿದೆ ಎಂದರು.



ಇಲಾಖೆಯಲ್ಲಿ ಸುಧಾರಣೆ: ಎಸಿ ಕೋರ್ಟ್‌ನಲ್ಲಿ ಕಳೆದ 8–10 ವರ್ಷಗಳಿಂದ ಇತ್ಯರ್ಥವಾಗದ 60 ಸಾವಿರಕ್ಕೂ ಅಧಿಕ ಪ್ರಕರಣಗಳು ಉಳಿದುಕೊಂಡಿವೆ. ಹಿಂದಿನವರು ನಿದ್ದೆ ಮಾಡುತ್ತಿದ್ದರೇ? ಎಂದು ಸಚಿವ ಕೃಷ್ಣಬೈರೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ನಾವು ಅಧಿಕಾರಕ್ಕೆ ಬಂದ ನಂತರ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯನ್ನು ತಂದಿದ್ದೇವೆ. ಮುಂದಿನ 2 ವರ್ಷಗಳಲ್ಲಿ ಸಮಸ್ಯೆಗಳಿಗೆ ಸಂಪೂರ್ಣ ಮುಕ್ತಿ ನೀಡುವ ಪ್ರಯತ್ನ ನಡೆಯುತ್ತಿದೆ. ದಲ್ಲಾಳಿಗಳನ್ನು ನಿಯಂತ್ರಿಸಲಾಗುವುದು ಎಂದು ತಿಳಿಸಿದರು.

ಕೂಡುಮಂಗಳೂರಿನಲ್ಲಿ ಮಾಸಿಕ ಸಂತೆ, ಮಾರಾಟ ಮೇಳ

ಕುಶಾಲನಗರ, ಫೆ.5–ಕೂಡುಮಂಗಳೂರು ಸಂತೆ ಮಾರುಕಟ್ಟೆ ಆವರಣದಲ್ಲಿ ಸಂಜೀವಿನಿ ಮಾಸಿಕ ಸಂತೆ, ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಪಂಚಾಯಿತಿ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ಕರ್ನಾಟಕ, ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಮೇಳಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಭಾಸ್ಕರ್ ನಾಯಕ್ ಚಾಲನೆ ನೀಡಿದರು.

ಸಂಜೀವಿನಿ ಜಿಲ್ಲಾ ವ್ಯವಸ್ಥಾಪಕ ಜಗನ್ನಾಥ್, ಕೂಡಿಗೆ ಯೂನಿಯನ್ ಬ್ಯಾಂಕ್ ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆಯ ಪ್ರಕಾಶ್ ಮಾತನಾಡಿದರು. ಗ್ರಾಮ ಮಟ್ಟದ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಶಾರದಮ್ಮ ಅಧ್ಯಕ್ಷತೆ ವಹಿಸಿದ್ದರು. ಸಂಜೀವಿನಿ ತಾಲೂಕು ಮೇಲ್ವಿಚಾರಕಿ ಪದ್ಮಶ್ರೀ, ಸಂಜೀವಿನಿ ಒಕ್ಕೂಟದ ಕಾರ್ಯದರ್ಶಿ ಸವಿತಾ, ಕೂಡಿಗೆ ಘಟಕದ ಅಧ್ಯಕ್ಷೆ ಪುಷ್ಪಾ, ಗ್ರಾಮ ಪಂಚಾಯಿತಿ ಸದಸ್ಯ ಚಂದ್ರಶೇಖರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂತೋಷ್, ಮುಖಂಡರಾದ ಪವಿತ್ರಾ, ಯೋಗೇಶ್, ಹರೀಶ್ ಪಾಲ್ಗೊಂಡಿದ್ದರು.

ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯ 25ಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳು ಉತ್ಪಾದಿಸಿದ ವಿವಿಧ ಆಹಾರ ವಸ್ತುಗಳನ್ನು ಸಂಜೀವಿನಿ ಸಂತೆಯಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಿಸಿದ್ದವು.

ವಿರಾಜಪೇಟೆಯಲ್ಲಿ ಗಣಕೀಕರಣ ಶಾಖೆಗೆ ಚಾಲನೆ



ವಿರಾಜಪೇಟೆ ಕಂದಾಯ ಇಲಾಖೆಯ ಗಣಕೀಕರಣ ಶಾಖೆಗೆ ಕೃಷ್ಣಬೈರೇಗೌಡ ಭೇಟಿ, ಪರಿಶೀಲಿಸಿದರು.

ವಿರಾಜಪೇಟೆ, ಫೆ.5–ಪಟ್ಟಣದ ಮಿನಿವಿಧಾನಸೌಧದ ಉಪನೋಂದಣಾಧಿಕಾರಿ ಕಚೇರಿ ಹಾಗೂ ಕಂದಾಯ ಇಲಾಖೆಯ ಗಣಕೀಕರಣ ಶಾಖೆಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಸೋಮವಾರ ಚಾಲನೆ ನೀಡಿದರು.

ಇದೇ ವೇಳೆ ಸಚಿವರು, ಕೆಲವು ಕಡತಗಳನ್ನು ಸ್ಥಳದಲ್ಲೇ ಗಣಕೀಕರಣಗೊಳಿಸುವಂತೆ ಸಿಬ್ಬಂದಿಗೆ ಸೂಚಿಸಿ, ಮಾಹಿತಿ ಪಡೆದರು.

ನಂತರ ಮಾತನಾಡಿದ ಅವರು, ಜಾಗರೂಕತೆಯಿಂದ ಸ್ಕ್ಯಾನಿಂಗ್ ಮೂಲಕ ಡಿಜಿಟಲೀಕರಣ ನಡೆಸಬೇಕು. ವಿಶೇಷವಾಗಿ ದಾಖಲೆಗಳನ್ನು ಎಚ್ಚರಿಕೆಯಿಂದ ಡಿಜಿಟಲೀಕರಣಗೊಳಿಸಬೇಕು. ಮುಂದೆ ಅಗತ್ಯವಿದ್ದಾಗ ನ್ಯಾಯಾಲಯಕ್ಕೂ ಗಣಕೀಕೃತ ದಾಖಲೆಗಳನ್ನೇ ಸಲ್ಲಿಸಬೇಕಾಗುತ್ತದೆ. ಯೋಜನೆಯ ಉದ್ದೇಶ ಸಫಲವಾಗಬೇಕು ಎಂದು ತಿಳಿಸಿದರು.

ಮೊದಲ ಬಾರಿ ವಿರಾಜಪೇಟೆಗೆ ಭೇಟಿ ನೀಡಿದ ಸಚಿವ ಕೃಷ್ಣಬೈರೇಗೌಡ ಅವರನ್ನು ಚಿಕ್ಕಪೇಟೆ ಬಳಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹಾರ ಹಾಕಿ ಸ್ವಾಗತಿಸಿದರು. ಇದೇ ವೇಳೆ ಶಾಸಕ ಎ.ಎಸ್.ಪೊನ್ನಣ್ಣ, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಹೆಚ್ಚುವರಿ ಜಿಲ್ಲಾಧಿಕಾರಿ ವೀಣಾ, ತಹಶೀಲ್ದಾರ್ ರಾಮಚಂದ್ರ, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು) ತಾಲೂಕು ಸಮಿತಿ ವತಿಯಿಂದ ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ: ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಅಂಗನವಾಡಿ ನೌಕರರ ವೇತನ ಕಡಿತಗೊಳಿಸಿದೆ ಎಂದು ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು) ತಾಲೂಕು ಸಮಿತಿ ವತಿಯಿಂದ ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನ ಆವರಣದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ತಾಲೂಕು ಅಧ್ಯಕ್ಷೆ ಎ.ನಾಗಮಣಿ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ರಸ್ತೆ ತಡೆ ನಡೆಸಿ, ಮಾನವ ಸರಪಳಿ ರಚಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ಭಿತ್ತಿಪತ್ರ ಸುಡಲು ಮುಂದಾದಾಗ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ತಳ್ಳಾಟ, ನೂಕಾಟ ಉಂಟಾಗಿ ಮಾತಿನ ಚಕಮಕಿ ನಡೆಯಿತು. ನಂತರ ಭಿತ್ತಿಪತ್ರ ಸುಡುವ ಯತ್ನವನ್ನು ಪೊಲೀಸರು ವಿಫಲಗೊಳಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಮಣಿ ಮಾತನಾಡಿ, ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಅಂಗನವಾಡಿ ನೌಕರರಿಗೆ ಯಾವುದೇ ಪ್ರಯೋಜನವಾಗಿಲ್ಲ. ನೀಡುತ್ತಿರುವ ವೇತನವನ್ನು ಕಡಿತಗೊಳಿಸಿದೆ ಬಡವರ ವಿರೋಧಿ ಸರ್ಕಾರವಾಗಿದೆ ಅಗತ್ಯವಸ್ತುಗಳ ಬೆಲೆ ಏರಿಕೆ, ದುಡಿಯುವ ಜನರ ಶೋಷಣೆ, ಉದ್ಯೋಗ ಸೃಷ್ಟಿಸುವಲ್ಲಿ ವಿಫಲವಾಗಿದೆ. ಇವೆಲ್ಲ ವಿಚಾರವನ್ನು ಮುಂದಿಟ್ಟುಕೊಂಡು ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ, ಪೊಲೀಸರನ್ನು ಬಳಕೆ ಮಾಡಿಕೊಂಡು ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಶಾಯಿದಾಬಾನು, ಕೊಳ್ಳೇಗಾಲ ತಾಲೂಕು ಅಧ್ಯಕ್ಷೆ ಶಾಂತಮ್ಮ, ಗುಂಡ್ಲುಪೇಟೆ ಅಧ್ಯಕ್ಷ ಸುಜಿಯಾ, ಯಳಂದೂರು ಅಧ್ಯಕ್ಷೆ ಮೀನಾಕ್ಷಿ ಭಾಗ್ಯ ಜಿ.ಕೆಂಪಮ್ಮ ಮಂಜುಳಾ, ದೇವಮಣಿ, ನೀಲಾವತಿ, ಸಿಐಟಿಯು ರಾಜ್ಯ ಸದಸ್ಯ ಸುನೀಲ್ ಕುಮಾರ್ ಇತರರಿದ್ದರು.

ಪ್ರೊ.ನಂಜುಂಡಸ್ವಾಮಿಗೆ ರೈತ ಸಂಘ ಕಟ್ಟಿದ ಕೀರ್ತಿ

• ಎಂಡಿಎನ್ ಒಡನಾಡಿ ಪ್ರೊ.ರವಿವರ್ಮ ಕುಮಾರ್ ಹೇಳಿಕೆ • ಜಿಲ್ಲಾ ರಂಗಮಂದಿರದಲ್ಲಿ ನಾಟಕ ಪ್ರದರ್ಶನ

ಚಾಮರಾಜನಗರ, ಫೆ.5–ರೈತರ ಸಂಕಷ್ಟಗಳಿಗೆ ಸ್ಪಂದಿಸುವ ಸಂಘಟನೆ ಬೇಕು ಎಂದು ಮೊಟ್ಟಮೊದಲ ಬಾರಿಗೆ ಕರೆಕೊಟ್ಟು ರಾಜ್ಯ ರೈತ ಸಂಘವನ್ನು ಕಟ್ಟಿದ ಕೀರ್ತಿ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರಿಗೆ ಸಲ್ಲುತ್ತದೆ ಎಂದು ಹಿರಿಯ ವಕೀಲ ಹಾಗೂ ಎಂಡಿಎನ್ ಒಡನಾಡಿ ಪ್ರೊ.ರವಿವರ್ಮ ಕುಮಾರ್ ಹೇಳಿದರು.

ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸೋಮವಾರ ವಿಶ್ವ ರೈತಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಸಂಸ್ಮರಣೆ ಅಂಗವಾಗಿ ರಂಗತರಂಗ ಟ್ರಸ್ಟ್, ಶಾಂತಲಾ ಕಲಾವಿದರು, ರೈತ ಸಂಘ, ಹಸಿರು ಸೇನೆ (ಸಾಮೂಹಿಕ ನಾಯಕತ್ವ) ವತಿಯಿಂದ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ರೈತ ಚಳವಳಿಯ ಯಶೋಗಾಥೆ ಕುರಿತ ಘಟನಾವಳಿಗಳ 'ಡೈರೆಕ್ಟ್ ಆಕ್ಷನ್' ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರೊ.ಎಂಡಿಎನ್ ನಿಧನರಾಗಿ ಎರಡು ದಶಕಗಳಾಗಿವೆ. ಕರ್ನಾಟಕದ ಅಂದಿನ ಮತ್ತು ಇಂದಿನ ರೈತ ಚಳವಳಿ ನೋಡಿದಾಗ ಇಂದಿನ ಚಳವಳಿ ನಗೆಪಾಟಲಿಗೆ ಒಳಗಾಗುತ್ತಿದೆ ಎಂದು ತಿಳಿಸಿದರು.



ಪ್ರೊ ಎಂ.ಡಿ.ನಂಜುಂಡಸ್ವಾಮಿ ಅವರ ಸಂಸ್ಮರಣೆ ಅಂಗವಾಗಿ ಚಾಮರಾಜನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ರೈತ ಚಳವಳಿಯ ಯಶೋಗಾಥೆ ಕುರಿತ ಘಟನಾವಳಿಗಳ ಕುರಿತ 'ಡೈರೆಕ್ಟ್ ಆಕ್ಷನ್' ನಾಟಕ ಪ್ರದರ್ಶಿಸಲಾಯಿತು.

ಇಂದು ಮಂಡ್ಯ ಜಿಲ್ಲೆಯ ಕೆರೆಗೋಡಿನಲ್ಲಿ ಪೊಲೀಸರು ಹನುಮಧ್ವಜ ಇಳಿಸಿದರು ಎಂಬ ಕಾರಣಕ್ಕೆ ಪ್ರತಿಭಟನೆ ನಡೆಯುತ್ತಿದೆ. ಎಂಡಿಎನ್ ಅವರು ಬದುಕಿದ್ದಾಗ ಇಂತವುಗಳಿಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ಸಿದ್ಧಾಂತದ ಆಧಾರದ ಮೇಲೆ ಹೋರಾಟ ರೂಪಿಸುತ್ತಿದ್ದ ಎಂ.ಡಿ.ನಂಜುಂಡಸ್ವಾಮಿ ಅವರ ಮಾರ್ಗದರ್ಶನವನ್ನು ಪ್ರತಿಪಕ್ಷಗಳು ಪಡೆಯುತ್ತಿದ್ದವು. ರೈತ ಸಂಘ ಗುರಿ ಮತ್ತು ಮಾರ್ಗದ ಬಗ್ಗೆ ಸ್ಪಷ್ಟತೆ ಇಟ್ಟುಕೊಂಡು ಸಾಗಬೇಕು ಎಂಬುದು ಅವರ ನಿಲುವಾಗಿತ್ತು ಎಂದರು.

ರೈತ ಸಂಘಟನೆಗೆ ಸಾತ್ವಿಕ ಸ್ವರೂಪ ಕೊಡುವ ನಿಟ್ಟಿನಲ್ಲಿ ಬೆಲೆ ನೀತಿ, ಸಾಲದ ನೀತಿ ಹಾಗೂ ಸಂಘಟನೆ ನೀತಿಯನ್ನು ಎಂಡಿಎನ್ ರೂಪಿಸಿದರು. ರಾಜ್ಯಾದ್ಯಂತ ಅದಕ್ಕೆ ಅಭೂತಪೂರ್ವ ಬೆಂಬಲ ದೊರಕಿತು. ರೈತ ಸಂಘ ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ತಾತ್ವಿಕವಾಗಿ ಬೆಳೆಯಿತು ಎಂದು ಹೇಳಿದರು.

ಎಂಡಿಎನ್ ಪುತ್ರಿ ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ಪಚ್ಚೆ ನಂಜುಂಡಸ್ವಾಮಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎ.ಎಂ. ಮಹೇಶ್ ಪ್ರಭು, ಹಸಿರು ಸೇನೆ ಸಾಮೂಹಿಕ ನಾಯಕತ್ವ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ರಂಗತರಂಗ ಟ್ರಸ್ಟ್ ಅಧ್ಯಕ್ಷ ಸೋಮಶೇಖರ್ ಬಿಸಲ್ವಾಡಿ, ಶಾಂತಲಾ ಕಲಾವಿದರು ಸಂಸ್ಥೆಯ ಅಬ್ರಹಾಂ ಡಿಸಿಲ್ವಾ, ರೈತ ಸಂಘಟನೆಗಳ ಪದಾಧಿಕಾರಿಗಳು ಹಾಜರಿದ್ದರು.

ನೋಡುಗರ ಭಾವಪರವಶವನ್ನಾಗಿಸಿದ ಡೈರೆಕ್ಟ್ ಆಕ್ಷನ್

ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಬೆಂಗಳೂರಿನ ನಗ್ನ ಥಿಯೇಟರ್ ಕಲಾವಿದರು ಅಭಿನಯಿಸಿದ ರೈತ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ಜೀವನಗಾಥೆ ಒಳಗೊಂಡ ಡೈರೆಕ್ಟ್ ಆಕ್ಷನ್ ನಾಟಕ ರೈತರೇ ಅಧಿಕವಾಗಿದ್ದ ಪ್ರೇಕ್ಷಕರನ್ನು ಭಾವಪರವಶವನ್ನಾಗಿಸಿತು.

ಪ್ರೊ.ಎಂಡಿಎನ್ ಅವರ ಕರ್ಮಭೂಮಿಗಳಲ್ಲಿ ಚಾಮರಾಜನಗರ ಜಿಲ್ಲೆಯೂ ಪ್ರಮುಖವಾದುದು. ಅವರ ಕನಸು ಕಂಡಿದ್ದ ಸುಸ್ಥಿರ ಕೃಷಿಯ ಪ್ರಯೋಗ ತಾಣ ಹಾಗೂ ಅವರ ಸಮಾಧಿ ಸ್ಥಳ ಅಮೃತ ಭೂಮಿ ಇರುವುದು ಜಿಲ್ಲೆಯಲ್ಲೇ. ಪ್ರೊಫೆಸರ್ ಅವರು ತಮ್ಮ ಕೊನೆಯ ದಿನಗಳಲ್ಲಿ ಹೆಚ್ಚು ಚಳವಳಿಗಳನ್ನು ನಡೆಸಿದ್ದು ಚಾಮರಾಜನಗರ ಜಿಲ್ಲೆಯಲ್ಲಿ. ಹೀಗಾಗಿ ಜಿಲ್ಲೆಯಲ್ಲಿ ರೈತ ಸಂಘ ಪ್ರಬಲವಾಗಿತ್ತು.

ನಾಟಕದಲ್ಲಿ ನಡೆಯುವ ಬಹುತೇಕ ಘಟನೆಗಳು ಚಾಮರಾಜನಗರ ಜಿಲ್ಲೆಗೂ ಕನೆಕ್ಟ್ ಆಗಿದ್ದ ಕಾರಣ ಸಭಿಕರಾಗಿದ್ದ ರೈತರನ್ನು, ಸಾರ್ವಜನಿಕರನ್ನು ಹಿಡಿದಿಟ್ಟುಕೊಂಡಿತ್ತು. ಎಂಡಿಎನ್ ಪಾತ್ರಧಾರಿ ಸಂಪತ್ ಮೈತ್ರೇಯ, ಪ್ರೊಫೆಸರ್ ಅವರನ್ನೇ ಆವಾಹಿಸಿಕೊಂಡಂತೆ ಅಭಿನಯಿಸಿದರು. ಎಲ್ಲಾ ಪಾತ್ರಧಾರಿಗಳೂ ಉತ್ತಮ ಅಭಿನಯ ನೀಡಿದರು.

ನಾಟಕದ ಕೆಲ ದೃಶ್ಯಗಳು ರೈತರ ಕಣ್ಣಂಚಿನಲ್ಲಿ ನೀರು ತಂದವು. ಪ್ರೊಫೆಸರ್ ಎಂಡಿಎನ್ ಅವರ ಮಗಳು ಚುಕ್ಕಿ ಹಾಗೂ ಪುತ್ರ ಪಚ್ಚೆ ಸಹ ನಾಟಕ ವೀಕ್ಷಿಸಿ ಭಾವೋದ್ವೇಗಕ್ಕೊಳಗಾದರು. ನಾಟಕ ಎಲ್ಲಕ್ಕಿಂತ ಮುಖ್ಯವಾಗಿ ರೈತ ಚಳವಳಿ ಮುಂದೆಯೂ ಉಳಿಯಬೇಕಾದ ಮಹತ್ವವನ್ನು ರೈತ ಸಂಘದ ಕಾರ್ಯಕರ್ತರಲ್ಲಿ ಜಾಗೃತಿ ಮೂಡಿಸುವಲ್ಲಿ ಸಹಾಯಕವಾಯಿತು. ನಾಟಕದ ಅಂತಿಮ ದೃಶ್ಯದಲ್ಲಿ ರಂಗಮಂದಿರದಲ್ಲಿದ್ದ ರೈತ ಸಂಘದ ಕಾರ್ಯಕರ್ತರೆಲ್ಲ ಎದ್ದು ನಿಂತು ಪ್ರೊ.ಎಂಡಿಎನ್ ಅವರು ಚಿರಾಯು, ರೈತ ಸಂಘಕ್ಕೆ ಜಯವಾಗಲಿ ಎಂದು ಘೋಷಣೆ ಕೂಗುತ್ತಾ ಹಸಿರು ಟವೆಲ್‌ಗಳನ್ನು ಬೀಸಿದ್ದು ರೋಮಾಂಚಕಾರಿಯಾಗಿತ್ತು. ನಟರಾಜ್ ಹುಳಿಯಾರ್ ರಚಿಸಿದ ನಾಟಕವನ್ನು ಕಬಡ್ಡಿ ನರೇಂದ್ರನಾಥ್ ನಿರ್ದೇಶಿಸಿದ್ದಾರೆ.

ಕುಲಗಾಣದಲ್ಲಿ ಜಾಥಾಗೆ ಕಲಾ ತಂಡಗಳ ಮೆರಗು

ಚಾಮರಾಜನಗರ, ಫೆ.5–ಸಂವಿಧಾನ ದಿನಾಚರಣೆ ಅಂಗವಾಗಿ ತಾಲೂಕಿನ ಕುಲಗಾಣ ಗ್ರಾಮದಲ್ಲಿ ಸೋಮವಾರ ನಡೆದ ಸಂವಿಧಾನ ಜಾಗೃತಿ ಸ್ತಬ್ಧಚಿತ್ರಕ್ಕೆ ಸತ್ತಿಗೆ ಸೂರಪಾನಿಯಂತಹ ವೈವಿಧ್ಯಮಯ ಸಾಂಪ್ರದಾಯಿಕ ಮೆರಗು ನೀಡಲಾಯಿತು.

ಗ್ರಾಮಕ್ಕೆ ಆಗಮಿಸಿದ ಜಾಥಾಗೆ ಕಳಶ ಹೊತ್ತ ಮಹಿಳೆಯರು, ಡೊಳ್ಳು, ಕಂಸಾಳೆ ಕಲಾವಿದರು ಸ್ವಾಗತಿಸಿ ಬರಮಾಡಿಕೊಂಡರು. ಗ್ರಾಮದ ಬೀದಿಗಳಲ್ಲಿ ಸಂಚರಿಸಿದ ಜಾಥಾದಲ್ಲಿ ಜನರು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು. ಇದೇ ವೇಳೆ ಸಂವಿಧಾನ ಓದು ಪುಸ್ತಕ ವಿತರಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ ಸಂವಿಧಾನ ಪೀಠಿಕೆ ಬೋಧಿಸಿದರು. ಶಿಕ್ಷಕರಾದ ಅನಿಲ್ ಕುಮಾರ್ ಸಂವಿಧಾನ ಹಾಗೂ ಅಂಬೇಡ್ಕರ್ ಅವರ ವಿಚಾರ ಧಾರೆಗಳ ಕುರಿತು ಉಪನ್ಯಾಸ ನೀಡಿದರು. ಕಲಾವಿದರಾದ ಮಹೇಶ್ ಭೀಮಗೀತೆ ಹಾಡಿದರು. ಗ್ರಾಪಂ ಅಧ್ಯಕ್ಷೆ ಚೈತ್ರ, ಉಪಾಧ್ಯಕ್ಷೆ ಶೋಭಲತಾ, ಮುಖಂಡರಾದ ಶಾಂತಮೂರ್ತಿ, ಕುಲಗಾಣ ಗ್ರಾಪಂ ಪಿಡಿಓ ಮಹದೇವಸ್ವಾಮಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಚಾಮರಾಜನಗರ ತಾಲೂಕಿನ ಕುಲಗಾಣ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಸ್ತಬ್ಧಚಿತ್ರವನ್ನು ಕಲಾ ತಂಡಗಳೊಂದಿಗೆ ಸ್ವಾಗತಿಸಲಾಯಿತು.

ಉಡಿಗಾಲ: ಉಡಿಗಾಲ ಗ್ರಾಮದಲ್ಲಿ ಅಲಂಕೃತ ಎತ್ತಿನಗಾಡಿಗಳು ಸಂವಿಧಾನ ಜಾಗೃತಿ ಜಾಥಾದಲ್ಲಿ ಪಾಲ್ಗೊಂಡವು. ಸಂವಿಧಾನ ಪ್ರತಿಯ ಮಾದರಿಯನ್ನು ಪ್ರದರ್ಶಿಸಲಾಯಿತು. ಕಲಾತಂಡಗಳು ಭಾಗವಹಿಸಿ ಕಾರ್ಯಕ್ರಮವನ್ನು ಮತ್ತಷ್ಟು ಆಕರ್ಷಣೀಯವಾಗಿಸಿದವು. ಉಪನ್ಯಾಸ ನೀಡಿದ ಶಾಲಾ ಶಿಕ್ಷಕಿ ವಿಶಾಲಾಕ್ಷಿ, ಸಂವಿಧಾನ ದಿನಾಚರಣೆ ದೊಡ್ಡ ಹಬ್ಬವಾಗಿದೆ. ಅಂಬೇಡ್ಕರ್ ಹಾಗೂ ಸಂವಿಧಾನ ಕುರಿತು ಪ್ರತಿಯೊಬ್ಬರು ಹೆಚ್ಚು ತಿಳಿದುಕೊಳ್ಳಬೇಕಿದೆ ಈ ನಿಟ್ಟಿನಲ್ಲಿ ಸಂವಿಧಾನ ಜಾಗೃತಿ ಅರ್ಥಪೂರ್ಣವಾಗಿದೆ ಎಂದರು.

ಗ್ರಾಪಂ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಮಹದೇವಮ್ಮ, ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ರೇಣುಕೇಶ್, ಪಿಡಿಓ ಶೋಭಾ ಮತ್ತಿತರರು ಉಪಸ್ಥಿತರಿದ್ದರು.

ನಂಜದೇವನಪುರ: ನಂಜದೇವನಪುರದಲ್ಲಿ ಸಂವಿಧಾನ ಜಾಗೃತಿ ಜಾಥಾಗೆ ಸ್ವಾಗತಿಸಲಾಯಿತು. ಗ್ರಾಪಂ ಅಧ್ಯಕ್ಷ ಶೇಖರಪ್ಪ, ಉಪಾಧ್ಯಕ್ಷ ಗುರುಮಲ್ಲಪ್ಪ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೀಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದರ್ಶ್ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವ

ಹನೂರು, ಫೆ.5– ಪಟ್ಟಣದ ದರ್ಶ್ ಶಿಕ್ಷಣ ಸಂಸ್ಥೆಯ ಪ್ರಥಮ ವಾರ್ಷಿಕೋತ್ಸವವನ್ನು ಸಾಲೂರು ಬೃಹನ್ ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು.

ಬಿಇಓ ಶಿವರಾಜು ಮಾತನಾಡಿ, ದರ್ಶ್ ಶಾಲೆ ಇತ್ತೀಚಿಗೆ ವಿಜ್ಞಾನ ಸಭೆ ಮೂಲಕ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುತ್ತಿದೆ. ಶಿಕ್ಷಕರೊಡನೆ ಪೋಷಕರು ಒಳ್ಳೆಯ ರೀತಿ ಸಹಕರಿಸಿ ಉತ್ತಮ ಪ್ರಗತಿ ಹೊಂದಿರುವ ಶಾಲೆ ಇದಾಗಿದೆ ಎಂದರು.

ಶಾಲೆಯ ಸಂಸ್ಥಾಪಕ ವೆಂಕಟರಮಣ ನಾಯ್ಡು, ಅಧ್ಯಕ್ಷ ಶ್ರೀನಿವಾಸ್ ನಾಯ್ಡು, ಚಂದನ, ಜಯಶ್ರೀ ಅಜಯ ಕುಮಾರ್, ಎಚ್.ಎಸ್.ನಾಗೇಶ್ವರ್, ಗುಂಡೇಗಾಲ ಮಲ್ಲಿಕಾರ್ಜುನಸ್ವಾಮಿ, ನಟ ಗೌಡ, ದೀಪಕ್ ಕೃಷ್ಣ, ಪೋಷಕರು ಹಾಜರಿದ್ದರು.

ಸಾಗಡೆಯಲ್ಲಿ ಸಂವಿಧಾನ ಜಾಗೃತಿ ಜಾಥಾಗೆ ಸ್ವಾಗತ



ಸಂವಿಧಾನ ಜಾಗೃತಿ ಜಾಥಾಗೆ ಚಾಮರಾಜನಗರದ ಸಾಗಡೆ ಗ್ರಾಮದಲ್ಲಿ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.

ಚಾಮರಾಜನಗರ: ಸಂವಿಧಾನ ದಿನಾಚರಣೆ ಪ್ರಯುಕ್ತ ಜಿಲ್ಲಾಡಳಿತ ಆಯೋಜಿಸಿರುವ ಸಂವಿಧಾನ ಜಾಗೃತಿ ಜಾಥಾಗೆ ಸಾಗಡೆ ಗ್ರಾಮದಲ್ಲಿ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.

ಗ್ರಾಮಕ್ಕೆ ಆಗಮಿಸಿದ ಜಾಗೃತಿ ಸ್ತಬ್ಧಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬೈಕ್ ರ‍್ಯಾಲಿ ಮೂಲಕ ಸರ್ಕಾರಿ ಶಾಲಾ ಆವರಣದ ವೇದಿಕೆ ವರೆಗೆ ಮೆರವಣಿಗೆ ನಡೆಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವಕುಮಾರ್, ಭಾರತ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿ ದೇಶಕ್ಕೆ ದಾರಿದೀಪವಾಗಿದೆ ಎಂದರು.

ಶಿಕ್ಷಕ ಈಶ್ವರಪ್ಪ ಬ್ಯಾಡಮೂಡ್ಲು, ಬಸವಣ್ಣ, ಅಂಬೇಡ್ಕರ್ ಕುರಿತು ವಿಚಾರ ಮಂಡಿಸಿ, ಸಂವಿಧಾನ ಪ್ರತಿಜ್ಞಾವಿಧಿ ಬೋಧಿಸಿದರು. ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಶಿವಬಸವಯ್ಯ, ಗ್ರಾಪಂ ಉಪಾಧ್ಯಕ್ಷೆ ಮಂಜುಳಾ, ಸದಸ್ಯರಾದ ಕೃಷ್ಣಶೆಟ್ಟಿ, ಮಹದೇವಪ್ರಸಾದ್, ನಾಗಪ್ಪ, ಪರಮೇಶ್ವರಶೆಟ್ಟಿ, ಪಿಡಿಓ ಎಸ್.ರಂಗಸ್ವಾಮಿ, ಡಿಇಓ ಮಹೇಂದ್ರ, ಗ್ರಾಪಂ ಸದಸ್ಯರ ಒಕ್ಕೂಟದ ಜಿಲ್ಲಾಧ್ಯಕ್ಷ ಕೆಂಪರಾಜು, ರಾಜ್ಯ ಅಂಗನವಾಡಿ ನೌಕರರ ಸಂಘದ(ಸಿಐಟಿಯು) ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ, ಕಿರಿಯ ಆರೋಗ್ಯ ಸಹಾಯಕಿ ಶಿಲ್ಪ, ಗ್ರಾಮ ಕಾಯಕ ಮಿತ್ರ ಎಸ್.ಎಂ.ಭಾಗ್ಯ, ಮುಖಂಡರಾದ ನಂಜುಂಡನಾಯಕ, ತಿರುಪತಿ ನಾಯಕ, ಬಸವಣ್ಣಶೆಟ್ಟಿ, ಬಂಗಾರ ನಾಯಕ, ಮಧುಸೂದನ್, ರಾಜ್‌ಕುಮಾರ್, ವಿವಿಧ ಇಲಾಖೆ ಅಧಿಕಾರಿಗಳು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಮುಖ್ಯಶಿಕ್ಷಕರು, ಸಹಶಿಕ್ಷಕರು, ವಿವಿಧ ಸಂಘ–ಸಂಸ್ಥೆ ಮುಖ್ಯಸ್ಥರು ಹಾಜರಿದ್ದರು.

ಒಂದನೇ ಪುಟದಿಂದ

ಗೆದ್ದೇ ಗೆಲ್ತೇವೆ...

ಆರಂಭದಲ್ಲಿ ಉಲ್ಲೇಖಿಸಿದರು. ವಿಪಕ್ಷಗಳ ಮೇಲೆ ವಾಗ್ದಾಳಿ ಆರಂಭಿಸಿ, ಪ್ರತಿಪಕ್ಷಗಳು ತೆಗೆದುಕೊಂಡ ನಿರ್ಣಯವನ್ನು ನಾನು ಪ್ರಶಂಸಿಸುತ್ತೇನೆ, ಅವರು ದೀರ್ಘಕಾಲ ವಿರೋಧ ಪಕ್ಷದಲ್ಲಿ ಇರಲು ನಿರ್ಧರಿಸಿರುವುದನ್ನು ಅವರ ಭಾಷಣದ ಪ್ರತಿಯೊಂದು ಪದವೂ ನನ್ನ ಮತ್ತು ದೇಶದ ವಿಶ್ವಾಸವನ್ನು ದೃಢಪಡಿಸಿದೆ ಎಂದರು.

'ಕಾಂಗ್ರೆಸ್‌ನ ಮನಸ್ಥಿತಿ ದೇಶಕ್ಕೆ ದೊಡ್ಡ ನಷ್ಟ ಉಂಟು ಮಾಡಿದೆ. ಕಾಂಗ್ರೆಸ್ ಎಂದಿಗೂ ದೇಶದ ಶಕ್ತಿಯನ್ನು ನಂಬಲಿಲ್ಲ, ಅವರು ತಮ್ಮನ್ನು ಆಡಳಿತಗಾರರು ಎಂದು ಪರಿಗಣಿಸಿದರು ಮತ್ತು ಜನರನ್ನು ಕಡಿಮೆ ಅಂದಾಜು ಮಾಡಿದರು.2014 ರಲ್ಲಿ, ಮಧ್ಯಂತರ ಬಜೆಟ್ ಮಂಡಿಸಿದಾಗ, ಆಗಿನ ಹಣಕಾಸು ಸಚಿವರು ಭಾರತವು ಜಿಡಿಪಿಯಲ್ಲಿ 11ನೇ ಅತಿದೊಡ್ಡ ಆರ್ಥಿಕತೆಯಾಗಿದೆ ಮತ್ತು ಇದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದ್ದರು. ಮುಂದಿನ ಮೂರು ದಶಕಗಳಲ್ಲಿ ಭಾರತ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಅವರು ಹೇಳಿದ್ದರು. ಅಂದರೆ 2044 ರ ವೇಳೆಗೆ ಭಾರತವು ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಅವರು ನಿರೀಕ್ಷಿಸಿದ್ದರು. ಇದು ಅವರ ದೃಷ್ಟಿಯಾಗಿತ್ತು ಎಂದು ಯುಪಿಎ ಸರಕಾರವನ್ನು ಲೇವಡಿ ಮಾಡಿದರು.

ನಾವು 17 ಕೋಟಿಗೂ ಹೆಚ್ಚು ಗ್ಯಾಸ್ ಸಂಪರ್ಕ ನೀಡಿದ್ದೇವೆ. ಕಾಂಗ್ರೆಸ್‌ನವರ ವೇಗವನ್ನೇ ಅನುಸರಿಸಿದ್ದರೆ ಈ ಗುರಿ ಪೂರ್ಣಗೊಳ್ಳಲು ಇನ್ನೂ 60 ವರ್ಷ ಬೇಕಾಗುತ್ತಿತ್ತು. ಹೊಗೆಯಲ್ಲಿ ಅಡುಗೆ ಮಾಡುತ್ತಾ ಮೂರು ತಲೆಮಾರುಗಳು ಕಳೆದು ಹೋಗುತ್ತವೆ ಎಂದರು. 10 ವರ್ಷಗಳಲ್ಲಿ 40 ಸಾವಿರ ಕಿ.ಮೀ. ರೈಲು ಹಳಿಗಳನ್ನು ವಿದ್ಯುದೀಕರಣಗೊಳಿಸಲಾಗಿದೆ. ಕಾಂಗ್ರೆಸ್ಸಿನ ವೇಗದಲ್ಲಿ ದೇಶ ಓಡಿದ್ದರೆ ಈ ಕೆಲಸ ಪೂರ್ಣಗೊಳ್ಳಲು 80 ವರ್ಷ ಬೇಕಾಗುತ್ತಿತ್ತು ಎಂದರು. ಇಂದಿನ ಪ್ರತಿಪಕ್ಷದ ಸ್ಥಿತಿಗೆ ಕಾಂಗ್ರೆಸ್ ಪಕ್ಷವೇ ದೊಡ್ಡ ಕಾರಣ. ಕಾಂಗ್ರೆಸ್‌ಗೆ ಉತ್ತಮ ಪ್ರತಿಪಕ್ಷವಾಗಲು ದೊಡ್ಡ ಅವಕಾಶವಿತ್ತು, ಆದರೆ 10 ವರ್ಷಗಳಲ್ಲಿ ಅದು ಆ ಜವಾಬ್ದಾರಿಯನ್ನು ಪೂರೈಸುವಲ್ಲಿ ವಿಫಲವಾಗಿದೆ. ಇಂದು ದೇಶದಲ್ಲಿ ಯಾವ ವೇಗದಲ್ಲಿ ಕಾಮಗಾರಿ ನಡೆಯುತ್ತಿದೆ ಎಂಬುದನ್ನು ಕಾಂಗ್ರೆಸ್ ಸರಕಾರ ಊಹಿಸಲೂ ಸಾಧ್ಯವಿಲ್ಲ. ನಾವು ಬಡವರಿಗೆ 4 ಕೋಟಿ ಮನೆಗಳನ್ನು ನಿರ್ಮಿಸಿದ್ದೇವೆ, ಅದರಲ್ಲಿ 80 ಲಕ್ಷ ಪಕ್ಕಾ ಮನೆಗಳನ್ನು ನಗರದ ಬಡವರಿಗೆ ನಿರ್ಮಿಸಲಾಗಿದೆ. ಕಾಂಗ್ರೆಸ್ ವೇಗದಲ್ಲಿ ಕೆಲಸ ಮಾಡಿದ್ದರೆ ಇಷ್ಟು ಕೆಲಸ ಮುಗಿಯಲು 100 ವರ್ಷ ಬೇಕು, 100 ತಲೆಮಾರು ಕಳೆದು ಹೋಗುತ್ತಿತ್ತು ಎಂದು ಕಿಡಿಕಾರಿದರು.

ವಿರೋಧ ಪಕ್ಷದ ನಾಯಕರು ಬದಲಾದರೂ ಅದನ್ನೇ ಪುನರುಚ್ಚರಿಸುತ್ತಾರೆ.ಇದು ಚುನಾವಣೆಯ ಸಮಯ, ನೀವು ಸ್ವಲ್ಪ ಕಷ್ಟಪಟ್ಟು ಹೊಸದನ್ನು ತಂದು ಜನರಿಗೆ ಸಂದೇಶವನ್ನು ಕಳುಹಿಸಬೇಕಾಗಿತ್ತು. ಆದಾಗ್ಯೂ, ನೀವು ಶೋಚನೀಯವಾಗಿ ವಿಫಲರಾಗಿದ್ದೀರಿ. ನೀವು ಎಷ್ಟು ದಿನ ದೇಶವನ್ನು ತುಂಡು ಮಾಡಲು ಯೋಚಿಸುತ್ತೀರಿ, ಎಷ್ಟು ದಿನ ಸಮಾಜವನ್ನು ವಿಭಜಿಸುವಿರಿ? ದೇಶವನ್ನು ತುಂಬಾ ಒಡೆದಾಗಿದೆ. ಹೊರಡುವಾಗ ಈ ಚರ್ಚೆಯಲ್ಲಿ ಒಂದಿಷ್ಟು ಪಾಸಿಟಿವ್ ವಿಷಯಗಳನ್ನಾದರೂ ಹೇಳಿದ್ದರೆ, ಒಂದಷ್ಟು ಸಕಾರಾತ್ಮಕ ಸಲಹೆಗಳು ಬಂದಿದ್ದರೆ ಚೆನ್ನಾಗಿತ್ತು. ಆದರೆ ಪ್ರತಿ ಬಾರಿಯಂತೆ ನೀವು ದೇಶವನ್ನು ಭಾರಿ ನಿರಾಶೆಗೊಳಿಸಿದ್ದೀರಿ ಎಂದರು.

ನಮ್ಮ 10 ವರ್ಷಗಳ ಆಡಳಿತದ ಅನುಭವದ ಆಧಾರದ ಮೇಲೆ, ಇಂದಿನ ಪ್ರಬಲ ಆರ್ಥಿಕತೆ ಮತ್ತು ಇಂದು ಭಾರತದ ಪ್ರಗತಿಯ ವೇಗವನ್ನು ನೋಡಿದರೆ, ನಮ್ಮ ಮೂರನೇ ಅವಧಿಯಲ್ಲಿ ಭಾರತವು ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಲಿದೆ ಎಂದು ನಾನು ವಿಶ್ವಾಸದಿಂದ ಹೇಳಬಲ್ಲೆ. ಇದು ಮೋದಿಯವರ ಗ್ಯಾರಂಟಿ ಎಂದರು.

ಜನರನ್ನು ನೆಹರೂ 'ಸೋಮಾರಿ' ಎಂದಿದ್ದರು

(ರಾಹುಲ್ ಗಾಂಧಿ)ವನ್ನು ಮತ್ತೆ ಮತ್ತೆ ಮೇಲೆತ್ತುವ ಪ್ರಯತ್ನದಲ್ಲಿ ಕಾಂಗ್ರೆಸ್ ಸೋತಿದ್ದು, ಅವರ ಅಂಗಡಿ ಮುಚ್ಚುವ ಹಂತದಲ್ಲಿದೆ ಎಂದು ಪ್ರಧಾನಿ ಟೀಕಿಸಿದ್ದಾರೆ.

ಕಾಂಗ್ರೆಸ್ ಎಲ್ಲವನ್ನೂ ಕಿತ್ತು ಹಾಕುವ ಮನಸ್ಥಿತಿಯಲ್ಲಿ ಸಿಲುಕಿಕೊಂಡಿದೆ. ಆತ್ಮನಿರ್ಭರ್ ಭಾರತ್ ವಂದೇ ಭಾರತ್, ಸೆಂಟ್ರಲ್ ವಿಸ್ಟಾ ಸೇರಿದಂತೆ ಎಲ್ಲವನ್ನೂ ಕಾಂಗ್ರೆಸ್‌ನವರು ವಿರೋಧಿಸಿದ್ದರು. ನಾವು ಮೇಕ್ ಇನ್ ಇಂಡಿಯಾ ಎಂದು ಹೇಳು ತ್ತೇವೆ. ಆದರೆ ಕಾಂಗ್ರೆಸ್ 'ರದ್ದು' ಎಂದು ಹೇಳುತ್ತಿದೆ. ನಾವು ಆತ್ಮನಿರ್ಭರ ಭಾರತ್ ಎಂದು ಹೇಳುತ್ತೇವೆ, ಕಾಂಗ್ರೆಸ್ 'ಕಿತ್ತು ಹಾಕುತ್ತೇವೆ' ಎಂದು ಹೇಳುತ್ತಾರೆ. ನಾವು ವಂದೇ ಭಾರತ್ ರೈಲು ಎಂದು ಹೇಳಿದರೆ ಅದು 'ಬೇಡ' ಎಂದು ಹೇಳುತ್ತಿತ್ತು. ನಾವು ಹೊಸ ಸಂಸತ್ತಿನ ಕಟ್ಟಡ ಕಟ್ಟಲು ಮುಂದಾದರೆ ಕಾಂಗ್ರೆಸ್ 'ಬೇಡ' ಎಂದು ಹೇಳುತ್ತಿತ್ತು. ನನಗೆ ಆಶ್ಚರ್ಯ ವಾಗಿದೆ. ಏಕೆಂದರೆ ಇವು ಮೋದಿಯವರ ಸಾಧನೆಗಳಲ್ಲ, ಇವು ದೇಶದ ಸಾಧನೆಗಳು ಎಂದರು.

ದೆಹಲಿಯಲ್ಲಿ ಧರಣಿ

ಎಂದು ಕಾದಿದ್ದೆವು. ಆದರೆ ಇದುವರೆಗೂ ಅನ್ಯಾಯ ಸರಿಪಡಿಸಿಲ್ಲ. ಇದರ ವಿರುದ್ಧ ಧ್ವನಿ ಎತ್ತಲೇಬೇಕಾಗಿದೆ. ಹೋರಾಟಕ್ಕೆ ಜೊತೆ ನೀಡಲು ಪಕ್ಷ ಭೇದ ಮರೆತು ಆಹ್ವಾನ ನೀಡಿದ್ದೇವೆ. ಕನ್ನಡಿಗರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕಿದೆ. ಕೇಂದ್ರದ ಕಿವಿಯನ್ನು ತೆರೆಸಲು ಹೋರಾಡುತ್ತಿದ್ದೇವೆ ಎಂದರು. ಭದ್ರಾ ಯೋಜನೆಗೆ 5,300 ಕೋಟಿ ರೂ. ಕೊಡುತ್ತೇವೆ ಎಂದು ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿ ಈವರೆಗೆ ಒಂದು ರೂ. ಕೂಡ ಬಿಡುಗಡೆ ಮಾಡಿಲ್ಲ. ಬರಗಾಲ ಪರಿಹಾರದ ಹಣವೂ ಇಲ್ಲ. 150 ಮಾನವ ದಿನಗಳಿಗೆ ಕೂಲಿ ಕೊಡಲು ಕೂಡ ಅನುಮತಿ ನೀಡಿಲ್ಲ ಎಂದರು.

ಇಂಥ ಹಲವು ಕಾರಣಗಳಿಗಾಗಿ ಅನಿವಾರ್ಯವಾಗಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ, ದೇಶದ ಜನರ ಗಮನ ಸೆಳೆಯಬೇಕು, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ, ಹಣಕಾಸು ಹಂಚಿಕೆಯಲ್ಲಾಗಿರುವ ತಾರತಮ್ಯ, ಬರಗಾಲ ವಿಷಯದಲ್ಲಿ ತೋರಿರುವ ಮಲತಾಯಿ ಧೋರಣೆ ಬಗ್ಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಶಾಸಕರು, ಮೇಲ್ಮನೆ ಸದಸ್ಯರು ಭಾಗವಹಿಸುತ್ತಿದ್ದಾರೆ ಎಂದರು.

14ನೇ ಹಣಕಾಸು ಆಯೋಗದಲ್ಲಿ ರಾಜ್ಯದ ತೆರಿಗೆಯ ಪಾಲು ಶೇ.4.71 ಇದ್ದದ್ದು, 15ನೇ ಹಣಕಾಸು ಆಯೋಗದಲ್ಲಿ ಶೇ.3.64ಕ್ಕೆ ಇಳಿಕೆಯಾಯಿತು. ಅಂದರೆ ಶೇ.1.07 ಕಡಿಮೆಯಾಗಿದೆ. ಅದರಿಂದ 4 ವರ್ಷಗಳಲ್ಲಿ 45,000 ಕೋಟಿ ರೂ. ರಾಜ್ಯಕ್ಕೆ ಕಡಿತ ಆಯಿತು. ಇದು ಕೇವಲ ನಗದು ಹಂಚಿಕೆಯೊಂದರಲ್ಲೇ ಆಗಿರುವ ಅನ್ಯಾಯ. ಅಂದಾಜಿನ ಪ್ರಕಾರ ಈ ವರ್ಷ ನಮ್ಮ ರಾಜ್ಯಕ್ಕೆ ನಗದು ಹಂಚಿಕೆಯಲ್ಲಿ 62,098 ಕೋಟಿ ರೂ.ಗಳು ಕಡಿಮೆಯಾಗಲಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

ಹಣಕಾಸು ಆಯೋಗ ನಗದು ಹಂಚಿಕೆ ಮಾಡುವಾಗ ಶೇ. 4.71ರಿಂದ ಶೇ.3.74ಕ್ಕೆ ಇಳಿಕೆ ಮಾಡಿದ್ದರಿಂದ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು 5,495 ಕೋಟಿ ರೂ. ವಿಶೇಷ ಅನುದಾನ ನೀಡಲು ಶಿಫಾರಸ್ಸು ಮಾಡಲಾಗಿತ್ತು. ಮಧ್ಯಂತರ ಬಜೆಟ್‌ನಲ್ಲಿ ಈ ಬಗ್ಗೆ ಶಿಫಾರಸ್ಸು ಮಾಡಿದರು. ಈ ಹಣವೂ ರಾಜ್ಯಕ್ಕೆ ಬರಲಿಲ್ಲ.

ಅಂತಿಮ ವರದಿಯಲ್ಲಿ 3,000 ಕೋಟಿ ರೂ. ಪೆರಿಫೆರಲ್ ರಿಂಗ್ ರಸ್ತೆಗೆ, ಕೆರೆಗಳನ್ನು ಅಭಿವೃದ್ಧಿ ಪಡಿಸಲು 3,000 ಸೇರಿ 6,000 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಕೊಡಲು ಶಿಫಾರಸು ಮಾಡಲಾಯಿತು. ಈ ಹಣವೂ ಬರಲಿಲ್ಲ. ಜಿಎಸ್‌ಟಿ ಪದ್ಧತಿ ಜಾರಿಗೆ ಬಂದಾಗ ಇದು ಅವೈಜ್ಞಾನಿಕ ಎಂದು ನಾವು ಪದೇ ಪದೆ ಹೇಳಿದ್ದೆವು. ಆಗ ರಾಜ್ಯದ ತೆರಿಗೆ ಬೆಳವಣಿಗೆ ದರ ಶೇ.15ರಷ್ಟು ಇತ್ತು. ಇದರಿಂದ ತೆರಿಗೆ, ಕೇಂದ್ರದ ಅನುದಾನವೂ ಹೆಚ್ಚಾಗುತ್ತೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ ಅದನ್ನೂ ಪರಿಹಾರ ರೂಪದಲ್ಲಿ ರಾಜ್ಯಕ್ಕೆ ತುಂಬಿ ಕೊಡುವುದಾಗಿ ಕೇಂದ್ರ ಹೇಳಿತ್ತು. ಈ ಪರಿಹಾರ ಜೂನ್ 2022ಕ್ಕೆ ನಿಲ್ಲಿಸಿದ್ದಾರೆ. ಈಗ ಪರಿಹಾರ ಕೊಡ್ತಾ ಇಲ್ಲ ಎಂದರು.

ಕೇಂದ್ರಕ್ಕೆ 4,30,000 ಕೋಟಿ ತೆರಿಗೆ ಸಂದಾಯ

ರಾಜ್ಯಕ್ಕೆ 1,87,867 ಕೋಟಿ ರೂ. ಅನ್ಯಾಯವಾಗಿದೆ ಎಂದು ಲೆಕ್ಕ ಬಿಚ್ಚಿಟ್ಟರು.

ಬೆಂಗಳೂರಿಗೆ ಕುಡಿಯುವ ನೀರು ಒದಗಿಸುವ ಮೇಕೆದಾಟು ಯೋಜನೆಗೆ ಇವತ್ತಿನವರೆಗೂ ಅನುಮತಿ ಕೊಟ್ಟಿಲ್ಲ. 236 ತಾಲೂಕುಗಳಲ್ಲಿ 223 ತಾಲೂಕುಗಳು ಬರಗಾಲ ಪೀಡಿತವಾಗಿವೆ. 123 ತೀವ್ರ ಬರಗಾಲ ಪೀಡಿತವಾಗಿದ್ದರೂ ಕೇಂದ್ರದಿಂದ ನಯಾಪೈಸೆ ಬಂದಿಲ್ಲ ಎಂದರು. ಸೆಪ್ಟೆಂಬರ್ 23 ರಂದು ಕೇಂದ್ರ ತಂಡ ಬಂದು ಬರಗಾಲ ಅಧ್ಯಯನ ಮಾಡಿ ಕೇಂದ್ರಕ್ಕೆ ವರದಿ ಕೊಟ್ಟಿದೆ. ಬಳಿಕ ಶಬರಿ ಕಾದಂತೆ ನಮ್ಮ ಮಂತ್ರಿಗಳು ಭೇಟಿಗೆ ಕಾದು ವಾಪಸ್ ಬಂದಿದ್ದಾರೆ. ಭೇಟಿ ಮಾಡಿದಾಗ ಸಭೆ ಕರೆಯುತ್ತೇನೆ ಎಂದ ಅಮಿತ್ ಷಾ ಇವತ್ತಿನವರೆಗೂ ಸಭೆಯನ್ನೇ ಕರೆದಿಲ್ಲ. ಸಭೆ ಕರೆಯದೆ ಬರ ಪರಿಹಾರ ಬರುವುದೇ ಇಲ್ಲ. ಇವರು ಸಭೆ ಕರೆದೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಜಮ್ಮಾಬಾಣೆ ಸಮಸ್ಯೆ ಶೀಘ್ರ ಇತ್ಯರ್ಥ

ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು. ಈ ಕಾರ್ಯವನ್ನು ಆಂದೋಲನದ ಮಾದರಿಯಲ್ಲಿ ನಡೆಸಿ, ತ್ವರಿತಗತಿಯಲ್ಲಿ ಸಮಸ್ಯೆ ಇತ್ಯರ್ಥಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು. ಕಾಫಿ ತೋಟಗಳಿಗೆ ಹೊಂದಿಕೊಂಡಂತಿರುವ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳು ಕಂಡುಬಂದಿದ್ದು, ಇಂತಹ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ತೋಟದ ಮಾಲೀಕರಿಗೆ ಭೋಗ್ಯಕ್ಕೆ ನೀಡಬೇಕು ಎಂದು ಹಿಂದಿನ ಸರ್ಕಾರ ಚಿಂತನೆ ನಡೆಸಿತ್ತು. ಅದಕ್ಕೆ ನಮ್ಮ ಸರ್ಕಾರದ ಸಹಮತವೂ ಇದ್ದು, ಆದಷ್ಟು ಬೇಗ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸಭೆ ನಡೆಸಿ ತೋಟದ ಮಾಲೀಕರಿಗೆ ಶುಭ ಸುದ್ದಿ ನೀಡಲಾಗುವುದು ಎಂದರು.

ಬಗರ್‌ಹುಕುಂ ಪ್ರಕರಣಗಳನ್ನು ಕೂಡ ತ್ವರಿತವಾಗಿ ಇತ್ಯರ್ಥಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹೆಜ್ಜೆ ಇಟ್ಟಿದ್ದು, ಕಳೆದ 4 ತಿಂಗಳಲ್ಲಿ 120 ಬಗರ್‌ಹುಕುಂ ಕಮಿಟಿ ಹಾಗೂ 60 ಲ್ಯಾಂಡ್ ಟ್ರಿಬ್ಯುನಲ್ ಕಮಿಟಿಗಳನ್ನು ರಚಿಸಲಾಗಿದೆ. ಜಾನುವಾರುಗಳ ಸಮೀಕ್ಷೆ ನಡೆಸಿ ಅದರ ಆಧಾರದ ಮೇರೆಗೆ ಗೋಮಾಳಕ್ಕೆ ಅವಶ್ಯಕತೆ ಇರುವ ಭೂಮಿಯನ್ನು ಕಾಯ್ದಿರಿಸಿ ಉಳಿಕೆ ಜಾಗವನ್ನು ಜಿಲ್ಲಾಧಿಕಾರಿಗಳು ಗುರುತಿಸಿದ ನಂತರ ಆ ಜಾಗಗಳಿಗೆ ಸಾಗುವಳಿ ಚೀಟಿ ನೀಡುವ ಬಗ್ಗೆ ಪರಿಗಣಿಸಲಾಗುವುದು ಎಂದು ಕೃಷ್ಣಬೈರೇಗೌಡ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ. ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟರಾಜು, ಕಂದಾಯ ಆಯುಕ್ತ ಮಂಜುನಾಥ್ ಉಪಸ್ಥಿತರಿದ್ದರು.

ಮೈಸೂರು ನಗರ ಬಿಜೆಪಿ ಕಾರ್ಯಕಾರಿಣಿ

●ದೇಶದ ಆರ್ಥಿಕ ಸ್ಥಿತಿ ವಿಶ್ವದ ಮೂರನೇ ಸ್ಥಾನಕ್ಕೇರಲು ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕು ●ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜೇಶ್

ಮೈಸೂರು, ಫೆ.5(ಎಂಟಿವೈ)– ದೇಶದ ಆರ್ಥಿಕ ಪರಿಸ್ಥಿತಿಯನ್ನು ವಿಶ್ವದ ಮೂರನೇ ಸ್ಥಾನಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ 2024ರಲ್ಲಿ ನರೇಂದ್ರಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಮಂತ್ರಿಯಾಗಿ ಮಾಡಬೇಕಾಗಿದೆ ಎಂದು ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ ರಾಜೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ನಡೆದ ಬಿಜೆಪಿ ನಗರ ಕಾರ್ಯಕಾರಿಣಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವು ವಿಶೇಷ ಕಾಲಘಟ್ಟದಲ್ಲಿ ಇದ್ದೇವೆ. ದೇಶದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಹಣಬಲ, ಜಾತಿ ಬಲ, ತೋಳಬಲದಲ್ಲಿ ರಾಜಕಾರಣ ಇತ್ತು. ದೇಶದಲ್ಲಿ ಸಂಘಟನೆಯ ಮೂಲಕ ರಾಜಕೀಯ ಮಾಡಬಹುದು ಎಂದು ಶಾಮಪ್ರಸಾದ್ ಮುಖರ್ಜಿ ಬಿಜೆಪಿ ಕಾರ್ಯಕರ್ತರಿಗೆ ತೋರಿಸಿಕೊಟ್ಟರು. ಕಾರ್ಯಕರ್ತರ ಶ್ರಮದಿಂದ ಪಕ್ಷ ಸಂಘಟನೆ ಮುನ್ನೆಲೆಗೆ ಬಂದ ಪರಿಣಾಮವಾಗಿ ಅಟಲ್ ಬಿಹಾರಿ ವಾಜಪೇಯಿ ಅವರು 24 ಪಕ್ಷಗಳ ಸಹಕಾರ ಪಡೆದು ಪ್ರಧಾನಿಯಾಗಿ ಆಡಳಿತ ನಡೆಸಿದರು. ಆ ನಂತರ 30 ವರ್ಷದಿಂದ ಯಾವುದೇ ಒಂದು ಪಕ್ಷಕ್ಕೆ ಬಹುಮತ ಬಂದಿರಲಿಲ್ಲ. ಆದರೆ, 2014ರಲ್ಲಿ ಬಿಜೆಪಿಗೆ ಬಹುಮತ ಲಭಿಸಿ, ನರೇಂದ್ರ ಮೋದಿ ನೇತೃತ್ವ ಸರ್ಕಾರ ಅಸ್ತಿತ್ವಕ್ಕೆ ಬಂತು. ಮೋದಿ ಅವರು ಕಾರ್ಯಕರ್ತರು ತಲೆ ತಗ್ಗಿಸುವಂತೆ ಆಡಳಿತ ನಡೆಸುವುದಿಲ್ಲ ಎಂದು ಭರವಸೆ ನೀಡಿದ್ದರು. ಅದರಂತೆ ನಡೆದುಕೊಂಡಿದ್ದಾರೆ. ಎಲ್ಲೆಡೆ ಕಾರ್ಯಕರ್ತರು ಮೋದಿಯವರ ಪರ ಹೆಮ್ಮೆಯಿಂದ ಮತ ಕೇಳುವ ಪರಿಸ್ಥಿತಿ ಇದೆ ಎಂದರು.

2014ಕ್ಕಿಂತ ಮೊದಲು ದೇಶದಲ್ಲಿ ಭಯದ ವಾತಾವರಣವಿತ್ತು. ಎಲ್ಲಿ, ಯಾವಾಗ ಬಾಂಬ್ ಸ್ಫೋಟಿಸುತ್ತದೋ ಎಂಬ ಆತಂಕ ಕಾಡುತ್ತಿತ್ತು. ಆದರೆ, ಮೋದಿ ಸರ್ಕಾರ ಭದ್ರತೆಗೆ ಕ್ರಮ ಕೈಗೊಂಡಿದೆ. ದೀನ ದಯಾಳ್ ಜೀ ಕೊಟ್ಟ ಅಂತ್ಯೋದಯದ ಕಲ್ಪನೆಯಲ್ಲಿ ಕೈಗೊಂಡ ಕಾರ್ಯಕ್ರಮದಿಂದಾಗಿ ಇಂದು ದೇಶದ ಬಡವರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ರೈತರು, ಬಡವರ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿ ಸಾಧ್ಯ. ಅದಕ್ಕಾಗಿ ಮುಕ್ತ ಮಾರುಕಟ್ಟೆ ಅವಕಾಶ ಮಾಡಿಕೊಟ್ಟಿತು. ಇದರಿಂದ ಇಂದು ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದು ತಿಳಿಸಿದರು.

ಈ ಹಿಂದೆ ಭಾರತ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಒಂದು ಅಚಲ ನಿಲುವು ಪ್ರಕಟಿಸದೇ ತಟಸ್ಥ ನೀತಿ ಅನುಸರಿಸುತ್ತಿತ್ತು. ಆದರೆ, ಇದೀಗ ಜಾಗತಿಕ ಮಟ್ಟದಲ್ಲಿ ವಿಶ್ವದ ಗಮನ ಸೆಳೆಯುವ ನೀತಿಯನ್ನು ಭಾರತ ಅನುಸರಿಸುತ್ತಿದೆ. ಜಿ–20, ಇಸ್ರೇಲ್–ಪ್ಯಾಲೆಸ್ಟೈನ್ ಯುದ್ಧದ ಸಂದರ್ಭದಲ್ಲಿ ಭಾರತ ತೆಗೆದುಕೊಂಡ ನಿಲುವು ಗಮನಾರ್ಹ. ಗೃಹ ಸಚಿವ ಅಮಿತ್ ಷಾ ಅವರು ಇತ್ತೀಚೆಗೆ ಬ್ರಿಟಿಷ್ ಕಾಲದ ಕಾನೂನುಗಳಿಗೆ ಮಾರ್ಪಾಡು ಮಾಡಿ, ಹೊಸ ಕಾನೂನುಗಳನ್ನು ಜಾರಿಗೆ ತಂದಿದ್ದಾರೆ. ಇದರಿಂದ ಈ ಹಿಂದೆ ಸಂವಿಧಾನಕ್ಕೆ ಆಗುತ್ತಿದ್ದ ಅಪಚಾರ ತಡೆಗಟ್ಟಿದಂತಾಗುತ್ತದೆ ಎಂದರು.


ಅಭ್ಯರ್ಥಿಗಳೇ ಇಲ್ಲ: ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷಕ್ಕೆ ಅಭ್ಯರ್ಥಿಗಳೇ ಸಿಗುತ್ತಿಲ್ಲ. ಕಾಂಗ್ರೆಸ್ ನಾಯಕರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಧೈರ್ಯವಿಲ್ಲ. ಪಕ್ಷದಿಂದ ಟಿಕೆಟ್‌ಗೆ ಅರ್ಜಿ ಆಹ್ವಾನಿಸಿದರೂ ಯಾರೂ ಅರ್ಜಿ ಸಲ್ಲಿಸಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಾಡಿದಂತೆ, ಲೋಕಸಭಾ ಚುನಾವಣೆಯಲ್ಲೂ 2 ಲಕ್ಷ ರೂ ನೀಡಿ ಟಿಕೆಟ್‌ಗೆ ಅರ್ಜಿ ಸಲ್ಲಿಸುವಂತೆ ಆಹ್ವಾನ ನೀಡಲಿ ಎಂದು ಸವಾಲು ಹಾಕಿದರು.

ಬೊಕ್ಕಸ ಬರಿದಾಗಿದೆ: ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದೆ. ಶಾಸಕರಿಗೆ ಅನುದಾನ ಸಿಗದೇ ಇರುವುದರಿಂದ ಯಾವುದೇ ಒಂದು ಅಭಿವೃದ್ಧಿ ಕಾಮಗಾರಿಗೂ ಗುದ್ದಲಿ ಪೂಜೆ ನಡೆದಿಲ್ಲ. ಗ್ಯಾರಂಟಿಗಳ ಹೆಸರಲ್ಲಿ ತಮ್ಮ ನಾಯಕರ ಜೇಬು ತುಂಬಿಸುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮತ್ತು ಅವುಗಳಿಗೆ ನೀಡಿರುವ ಅನುದಾನದ ಶ್ವೇತಪತ್ರ ಹೊರಡಿಸುವಂತೆ ಆಗ್ರಹಿಸಿದರು.

ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಮೈಸೂರು ನಗರದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ವಿಶೇಷ ಅನುದಾನ ನೀಡಿದ್ದರು. ಆದರೆ, ಈಗಿನ ಸರ್ಕಾರ ಕೃಷ್ಣರಾಜ ಕ್ಷೇತ್ರಕ್ಕೆ ನೀಡಿದ್ದ 45 ಕೋಟಿ ರೂ. ಅನುದಾನವನ್ನು ಹಿಂಪಡೆದಿದ್ದು, ಈ ಸಂಬಂಧ ಅಧಿವೇಶನದಲ್ಲಿ ಪ್ರಶ್ನಿಸುತ್ತೇನೆ ಎಂದರು.

ಅಭಿನಂದನಾ ನಿರ್ಣಯ: ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಿಸಿ ಬಾಲ ರಾಮನ ಪ್ರಾಣ ಪ್ರತಿಷ್ಠಾಪಿಸಿದ್ದಕ್ಕಾಗಿ ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭಿನಂದನಾ ನಿರ್ಣಯ ಕೈಗೊಳ್ಳಲಾಯಿತು.

ಮಾಜಿ ಶಾಸಕ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಮಾಜಿ ಸಚಿವ, ಮೈಸೂರು ಕ್ಲಸ್ಟರ್ ಅಧ್ಯಕ್ಷ ಎಸ್.ಎ.ರಾಮದಾಸ್, ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಅಧ್ಯಕ್ಷ ಕೌಟಿಲ್ಯ ಆರ್.ರಘು, ಅಲ್ಪ ಸಂಖ್ಯಾತರ ಮೋರ್ಚಾ ರಾಜ್ಯ ಅಧ್ಯಕ್ಷ ಡಾ.ಅನಿಲ್ ಥಾಮಸ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮಾಜಿ ಸಂಸದ ಸಿ.ಹೆಚ್. ವಿಜಯಶಂಕರ್, ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಾಘವೇಂದ್ರ, ವಿಭಾಗದ ಪ್ರಭಾರಿ ಮೈ.ವಿ. ರವಿಶಂಕರ್, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ವಿ.ಗಿರಿಧರ್, ಕೇಬಲ್ ಮಹೇಶ್, ಮಾಜಿ ಮೇಯರ್ ಶಿವಕುಮಾರ್, ಮಾಜಿ ಉಪಮೇಯರ್ ಡಾ.ರೂಪ, ಮುಖಂಡ ಜೋಗಿ ಮಂಜು ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ನಿರ್ಗಮಿತ ಪ್ರಧಾನ ಕಾರ್ಯದರ್ಶಿಗಳಾದ ಸೋಮಸುಂದರ್ ಹಾಗೂ ವಾಣೀಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ನಡೆದ ಮೈಸೂರು ನಗರ ಬಿಜೆಪಿ ಕಾರ್ಯಕಾರಿಣಿ ಸಭೆಯನ್ನು ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ ರಾಜೇಶ್ ಉದ್ಘಾಟಿಸಿ, ಮಾತನಾಡಿದರು.

ಸವಾಲು ಇಲ್ಲದ ಚುನಾವಣೆ

2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಗೆ ಬಿಜೆಪಿ ಮುಂದೆ ಯಾವುದೇ ಸವಾಲುಗಳಿಲ್ಲ. ಪ್ರಧಾನಿ ನರೇಂದ್ರಮೋದಿ ವರ್ಚಸ್ಸು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ ಸೇರಿದಂತೆ ಇನ್ನಿತರ ಕಾರಣದಿಂದ ಲೋಕಸಭಾ ಚುನಾವಣೆಗೆ ಪಕ್ಷದ ಪರವಾದ ವಾತಾವರಣವಿದೆ. ಆದರೆ ಕಾರ್ಯಕರ್ತರು ಮೈಮರೆಯಬಾರದು. ಈ ಚುನಾವಣೆಯನ್ನು ಕಾಂಗ್ರೆಸ್ ನಾಯಕರು ಸ್ಥಳೀಯ ವಿಷಯಗಳನ್ನು ಮುಂದಿಟ್ಟುಕೊಂಡು ಅಪಪ್ರಚಾರ ಮಾಡುತ್ತಿದ್ದಾರೆ. ಇದರಿಂದ ಬಿಜೆಪಿ ಕಾರ್ಯಕರ್ತರು ಕೇಂದ್ರ ಸರ್ಕಾರದ ಸಾಧನೆಯನ್ನು ಜನರಿಗೆ ವಿವರಿಸಬೇಕು ಎಂದು ಸಲಹೆ ನೀಡಿದರು.

-ರಾಜೇಶ್, ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ

ಒಡೆದು ಹೋಗಿದ್ದ ಕುಡಿಯುವ ನೀರಿನ ಪೈಪ್ ಕೊನೆಗೂ ರಿಪೇರಿ ಆರಂಭ



ಮೈಸೂರು, ಫೆ.5(ಬಿಎಲ್‌ಯು)– ಮೈಸೂರಿನ ಬಂಬೂಬಜಾರ್‌ನ ಯಾದವಗಿರಿ ರೈಲ್ವೆ ಅಂಡರ್‌ಬ್ರಿಡ್ಜ್ ಬಳಿ ಒಡೆದು ಹೋಗಿದ್ದ ಕುಡಿಯುವ ನೀರಿನ ಪೈಪ್ ಅನ್ನು ಕೊನೆಗೂ ರಿಪೇರಿ ಮಾಡಲಾಗುತ್ತಿದೆ.

ಪೈಪ್ ಒಡೆದು ಲಕ್ಷಾಂತರ ಲೀಟರ್ ನೀರು ಪೋಲಾಗುತ್ತಿರುವ ಬಗ್ಗೆ 'ಮೈಸೂರು ಮಿತ್ರ'ನ ಫೆಬ್ರವರಿ 3ರ ಸಂಚಿಕೆಯಲ್ಲಿ 'ಮೈಸೂರಿನಲ್ಲಿ ಪೈಪ್ ಒಡೆದು ಪೋಲಾಗುತ್ತಿರುವ ಕುಡಿಯುವ ನೀರು' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

ಪೈಪ್ ಒಡೆದಿದ್ದರಿಂದ ಕಾರಂಜಿಯಂತೆ ನೀರು ಚಿಮ್ಮುತ್ತಿತ್ತು. ಇದರಿಂದ ರಸ್ತೆ ಬದಿ ಹೋಗುವವರ ಮೇಲೆ ನೀರು ಚಿಮ್ಮಿ ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದರು.

'ಮೈಸೂರು ಮಿತ್ರ'ನಲ್ಲಿ ಬಂದ ವರದಿಯನ್ನು ಗಂಭೀರವಾಗಿ ಪರಿಗಣಿಸಿದ ವಾಣಿವಿಲಾಸ ವಾಟರ್ ವರ್ಕ್ಸ್‌ನ ಅಧಿಕಾರಿಗಳು ಒಡೆದು ಹೋಗಿದ್ದ ಪೈಪ್ ರಿಪೇರಿ ಮಾಡಿಸುತ್ತಿದ್ದಾರೆ.


ಕಬ್ಬಿಣದ ಪೈಪ್ ಆಗಿರುವ ಕಾರಣ ಸಾಲ್ಡರ್ ಮಾಡುವುದರಲ್ಲಿ ಸಿಬ್ಬಂದಿ ನಿರತರಾಗಿದ್ದಾರೆ.

ರಸ್ತೆ ಹಾಳಾದ ಮೇಲೆ ರಿಪೇರಿ ಕಾಮಗಾರಿ!: ಬನ್ನಿಮಂಟಪದ ಹೈವೇ ಸರ್ಕಲ್‌ನ ಪೆಟ್ರೋಲ್ ಬಂಕ್‌ನ ಪ್ರವೇಶದಲ್ಲೇ ನೀರಿನ ಪೈಪ್ ಒಡೆದು ತಿಂಗಳಾನುಗಟ್ಟಲೆ ರಾತ್ರಿ ವೇಳೆ ಭಾರಿ ಪ್ರಮಾಣದಲ್ಲಿ ನೀರು ಹರಿಯುತ್ತಿತ್ತು. ಹೀಗೆ ಉಕ್ಕಿದ ನೀರು ಜೋಡಿ ತೆಂಗಿನ ಮರ ಸ್ಮಶಾನ ರಸ್ತೆಯಲ್ಲಿ ಹರಿದು– ಹರಿದು, ಇತ್ತೀಚೆಗೆ ಮಾಡಿದ್ದ ರಸ್ತೆಯೇ ಹಾಳಾಗಿ ಹೋಯಿತು. ಅದುವರೆಗೂ ಇತ್ತ ಗಮನ ಹರಿಸದೇ ಇದ್ದ ವಾಣಿವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು, ಸಿಬ್ಬಂದಿ, ರಸ್ತೆಯೆಲ್ಲಾ ಹಾಳಾದ ಮೇಲೆ ಈಗ ಕಾಮಗಾರಿ ಕೈಗೆತ್ತಿಕೊಂಡಿದ್ದಾರೆ ನೀರಿನ ಪೈಪ್ ಒಡೆದು ಹರಿಯುತ್ತಿದ್ದ ನೀರನ್ನೇನೋ ಈಗ ನಿಲ್ಲಿಸಬಹುದು. ಆದರೆ ಇದರಿಂದ ಹಾಳಾದ ರಸ್ತೆ ರಿಪೇರಿ ಯಾವಾಗ? ಇದರ ಬಗ್ಗೆ ಮೈಸೂರು ಪಾಲಿಕೆ ಆಯುಕ್ತರು ಗಮನ ಹರಿಸಿ, ಸಂಬಂಧಿಸಿದ ಬೇಜವಾಬ್ದಾರಿ ಅಧಿಕಾರಿ ವರ್ಗದಿಂದಲೇ ರಸ್ತೆ ರಿಪೇರಿಗೆ ತಗಲುವ ವೆಚ್ಚವನ್ನು ಭರಿಸುವಂತಾದರೆ ಅವರ ದಕ್ಷತೆಗೆ ಕನ್ನಡಿ ಹಿಡಿದಂತೆ!

ಫೆ.8, ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಫೆ. 5– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಫೆ. 8 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ನೇಮಕ



ಮೈಸೂರು, ಫೆ. 5– ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯನ್ನಾಗಿ ಕೃಷ್ಣಮೂರ್ತಿಪುರಂ ನಿವಾಸಿ ಎನ್. ಕಾರ್ತಿಕ್ ಅವರನ್ನು ನೇಮಕ ಮಾಡಲಾಗಿದೆ.

ಎನ್‌ಆರ್ ಠಾಣೆ ಪೊಲೀಸರಿಂದ ಮೂವರು ಖದೀಮರ ಸೆರೆ

830 ಗ್ರಾಂ ಚಿನ್ನಾಭರಣ ವಶ



ಮೈಸೂರು, ಫೆ.5(ಆರ್‌ಕೆ)– ಮೂವರು ಖದೀಮರನ್ನು ಬಂಧಿಸಿರುವ ಮೈಸೂರಿನ ಎನ್.ಆರ್. ಠಾಣೆ ಪೊಲೀಸರು, 830 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ

ಮೈಸೂರಿನ ಕಲ್ಯಾಣಗಿರಿ, ಶಾಂತಿನಗರ ನಿವಾಸಿಗಳಾದ ಸೈಯ್ಯದ್ ಅಯೂಬ್ (25), ಮೊಹಮ್ಮದ್ ಮುನ್ನ(42) ಹಾಗೂ ಪ್ರಸಾದ್ ಅಲಿಯಾಸ್ ಆಸಿಫ್(48) ಬಂಧಿತ ಆರೋಪಿಗಳು. ಚಿನ್ನಾಭರಣ ಮಾರಾಟ ಮಾಡಲು ಹೊಂಚು ಹಾಕುತ್ತಿದ್ದಾಗ ಜನವರಿ 29ರಂದು ಮೈಸೂರಿನ ಉನ್ನತಿ ನಗರದ ಬಳಿ ರಿಂಗ್ ರಸ್ತೆಯಲ್ಲಿ ಬಂಧಿಸಿದ ಪೊಲೀಸರು, ಆಭರಣ ವಶಪಡಿಸಿಕೊಂಡರು.

ಬಾಗಿಲು ಮುರಿದು ಮದ್ದೂರಿನ ವೈದ್ಯರೊಬ್ಬರ ಮನೆಯಲ್ಲಿ 830 ಗ್ರಾಂ ಚಿನ್ನಾಭರಣ ಕಳವು ಮಾಡಿದ್ದ ಆರೋಪಿಗಳು, ಕೆ.ಆರ್.ನಗರದಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಸ್ಯಾಂಟ್ರೋ ಕಾರು ಕದ್ದು, ಅದೇ ವಾಹನ ಬಳಸಿ ಕಳವು ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ಬಯಲಾಗಿದೆ.

ಅಲ್ಲದೆ, ಮೈಸೂರಿನ ವಿವಿ ಪುರಂನಲ್ಲಿ ಮನೆ ಕಳವು, ರಾಜೀವ್ ನಗರದ ನಾರಾಯಣ ಹೃದಯಾಲಯದ ಗ್ಯಾಸ್ ವಿತರಣಾ ಏಜೆನ್ಸಿಯೊಂದರ ಕಚೇರಿಗೆ ನುಗ್ಗಿ 20,000 ನಗದು ಸೇರಿದಂತೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿ ಜೈಲು ಸೇರಿದ್ದ ಸೈಯ್ಯದ್ ಉಮ್ಮರ್ 2023ರ ಡಿಸೆಂಬರ್ 26ರಂದು, ಮುನ್ನ ನವೆಂಬರ್ 28ರಂದು ಹಾಗೂ ಆಸಿಫ್ 2024ರ ಜನವರಿ 7ರಂದು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ಈ ಮೂವರ ಮೇಲೂ ಸರಾಸರಿ 30 ಪ್ರಕರಣಗಳಿದ್ದು, ಜೈಲಿನಿಂದ ಬಂದ ನಂತರವೂ ತಮ್ಮ ಚಾಳಿ ಮುಂದುವರಿಸಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಅವರು, ಬಂಧಿತ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದರು. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಎನ್.ಆರ್. ಉಪ ವಿಭಾಗದ ಎಸಿಪಿ ಅಶ್ವಥ ನಾರಾಯಣ ಅವರ ಮಾರ್ಗದರ್ಶನದಂತೆ ನಡೆದ ಪತ್ತೆ ಕಾರ್ಯದಲ್ಲಿ ಎನ್.ಆರ್. ಠಾಣೆ ಸಬ್ ಇನ್ಸ್‌ಪೆಕ್ಟರ್ ವಿಶ್ವನಾಥ್, ಸಿಬ್ಬಂದಿಗಳಾದ ಆದಂ, ದೊಡ್ಡೇಗೌಡ, ಮೋಹನ್, ಪರಶುರಾಮ್, ಸುನೀಲ್, ಬಸವರಾಜು, ವೀರೇಶ್ ಹಾಗೂ ಇತರರು ಪಾಲ್ಗೊಂಡಿದ್ದರು.

ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ

●ಯುವ ಜನತೆ ನಮ್ಮ ಕಲೆಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು ●ನಟಿ ಪೂಜಾ ಲೋಕೇಶ್ ಸಲಹೆ

ಮೈಸೂರು,ಫೆ.5(ಎಂಟಿವೈ)– ಪಾಶ್ಚಿಮಾತ್ಯ ಸಂಸ್ಕೃತಿಯ ಆರ್ಭಟ ಮತ್ತು ಒತ್ತಡಕ್ಕೆ ಸಿಲುಕಿರುವ ಭಾರತೀಯ ಕಲೆಗಳು ಕಣ್ಮರೆಯತ್ತ ಸಾಗುತ್ತಿದ್ದು, ಯುವ ಜನರು ನಮ್ಮ ಕಲೆಗಳ ಸಂರಕ್ಷಣೆಗೆ ಆದ್ಯತೆ ನೀಡುವಂತೆ ಚಲನಚಿತ್ರ ನಟಿ ಪೂಜಾ ಲೋಕೇಶ್ ಸಲಹೆ ನೀಡಿದ್ದಾರೆ.

ಮಾನವಿಕ ಸಭಾಂಗಣದಲ್ಲಿ ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಸೋಮವಾರ ಆಯೋಜಿಸಿದ್ದ ಮೂರು ದಿನಗಳ ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು 'ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತವು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಇಂತಹ ಭವ್ಯ ಪರಂಪರೆಯನ್ನು ಮರೆಯಬಾರದು. ಯುವ ಪೀಳಿಗೆ ಅತ್ಯಾಧುನಿಕ ಸಂಗೀತ, ಪಾಪ್ ಸಾಂಗ್ ಸಂಗೀತಕ್ಕೆ ಮಾರುಹೋಗುತ್ತಿದ್ದಾರೆ. ಇದರಿಂದ ನಮ್ಮ ನೃತ್ಯ, ಸಂಗೀತ, ಜಾನಪದ ಕಲೆಗೆ ಹಿನ್ನಡೆಯಾಗುತ್ತಿದೆ. ಅವುಗಳನ್ನು ಸಂರಕ್ಷಿಸಿ ಬೆಳೆಸುವ ಅಗತ್ಯವಿದೆ ಎಂದರು.

ವಿದ್ಯಾರ್ಥಿಗಳು ಮಾತೃಭಾಷೆ ಕನ್ನಡದ ಮೇಲೆ ಅಭಿಮಾನ ಬೆಳೆಸಿಕೊಳ್ಳಬೇಕು. ಮಾತೃಭಾಷೆಯೊಂದಿಗೆ ಬೇರೆ ಯಾವುದೇ ಭಾಷೆ ಕಲಿತರೂ ನಮ್ಮ ಕನ್ನಡತನವನ್ನು ಬಿಟ್ಟುಕೊಡಬಾರದು. ಆಗ ಮಾತ್ರ ಕನ್ನಡ ಭಾಷೆ ಉಳಿವು ಸಾಧ್ಯ. ಕನ್ನಡ ಭಾಷೆ ಸಂಪದ್ಭರಿತ ಭಾಷೆ. ಪ್ರಪಂಚದ ಯಾವುದೇ ಮೂಲೆಗೆ ಹೋದರೂ ನಮ್ಮ ಭಾಷೆ ಮತ್ತು ಕನ್ನಡ ಸಂಸ್ಕೃತಿ ಉಳಿಸಿ ಬೆಳೆಸಲು ಮುಂದಾಗಬೇಕು. ಆ ಮೂಲಕ ಮಾತೃಭಾಷೆ ಮೇಲಿನ ಪ್ರೀತಿ ತೋರ್ಪಡಿಸಬೇಕು ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಪಠ್ಯೇತರ ಚಟುವಟಿಕೆಗಳು ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡುತ್ತವೆ. ಜ್ಞಾಪಕ ಶಕ್ತಿ, ಸಾಮಾನ್ಯ ಜ್ಞಾನ ಬೆಳೆಸುವುದರ ಜತೆಗೆ ಸೃಜನಶೀಲರನ್ನಾಗಿ ಮಾಡುತ್ತವೆ. ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಬೆಳವಣಿಗೆಗೆ ಬಹಳ ಮುಖ್ಯ. ಇಂದಿನ ಯುವಕರು ನಾಳೆ ದೊಡ್ಡ ಕಲಾವಿದರಾಗಬಹುದು. ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಯೂ ಮುಖ್ಯ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪಠ್ಯೇತರ ಚಟುವಟಿಕೆ ಅನುಕೂಲವಾಗುತ್ತದೆ. ವಿದ್ಯಾರ್ಥಿಗಳು ಸಂಗೀತ, ಸಾಹಿತ್ಯದ ಕಡೆಯೂ ಗಮನ ನೀಡಬೇಕು. ವಿದ್ಯಾರ್ಥಿ ಜೀವನದಲ್ಲಿ ಸಮಯ ನಿರ್ವಹಣೆ ಮಾಡಬೇಕು. ಸಮಯಪ್ರಜ್ಞೆ ಬೆಳೆಸಿಕೊಳ್ಳಬೇಕು. ಪಠ್ಯ ಮತ್ತು ಪಠ್ಯೇತರ ಬಗ್ಗೆ ಸಮತೋಲನ ಕಾಪಾಡಿಕೊಳ್ಳಬೇಕು. ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸುವುದು ಮುಖ್ಯ. ಸೋಲು ಮತ್ತು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂದರು.

ಇದಕ್ಕೂ ಮುನ್ನ ನಟ ನೀರ್ನಳ್ಳಿ ರಾಮಕೃಷ್ಣ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಲ್ಲಿಯೇ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಪಠ್ಯದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾದಾಗ ವಿಕಾಸ ಸಾಧ್ಯ. ಈ ನಿಟ್ಟಿನಲ್ಲಿ ಯುವ ಪೀಳಿಗೆ, ವಿದ್ಯಾರ್ಥಿ ಸಮೂಹ ಸಾಂಸ್ಕೃತಿಕ ಕಲೆ, ಸಾಹಿತ್ಯ ಉಳಿವಿಗೆ ಪಣ ತೊಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಬಿ.ಎಸ್. ಚಂದ್ರಶೇಖರ, ಸಹಾಯಕ ನಿರ್ದೇಶಕಿ ಡಾ.ಎಸ್.ಎನ್.ಸುಷ್ಮಾ ಉಪಸ್ಥಿತರಿದ್ದರು.

ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಮಾನಸ ಗಂಗೋತ್ರಿಯ ದೊಡ್ಡ ಗಡಿಯಾರ ಮುಂಭಾಗದಿಂದ ಮಾನವಿಕ ಸಭಾಂಗಣದವರೆಗೆ ವಿವಿಧ ಕಲಾತಂಡಗಳೊಂದಿಗೆ ಗಣ್ಯರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಈ ವೇಳೆ ಡೊಳ್ಳು ಕುಣಿತ, ತಮಟೆ, ಯಕ್ಷಗಾನ, ಪೂಜಾ ಕುಣಿತ, ಕಂಸಾಳೆ ಕಲಾತಂಡಗಳು ಪಾಲ್ಗೊಂಡು ಗಮನ ಸೆಳೆದವು.



ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ಸೋಮವಾರ ನಡೆದ 'ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ' ಕಾರ್ಯಕ್ರಮವನ್ನು ನಟ ನೀರ್ನಳ್ಳಿ ರಾಮಕೃಷ್ಣ ಉದ್ಘಾಟಿಸಿದರು.

ಮೈಸೂರು ಮಿತ್ರ ಮಂಗಳವಾರ 6 ಫೆಬ್ರವರಿ 2024

ಶಿರಮ್ಮಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಸಂವಿಧಾನ ಜಾಗೃತಿ ಜಾಥಾ



ಮೈಸೂರು, ಫೆ.5– ನಂಜನಗೂಡು ತಾಲೂಕು ಶಿರಮಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸಂವಿಧಾನ ಜಾಗೃತಿ ಜಾಥಾ ಯಶಸ್ವಿಯಾಗಿ ನೆರವೇರಿತು.

ಸಂವಿಧಾನದ ಆಶಯ ಹಾಗೂ ಮೌಲ್ಯಗಳನ್ನು ಹೊತ್ತ ವಿಶೇಷ ವಾಹನವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು. ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ರಸ್ತೆ ಇಕ್ಕೆಲಗಳಲ್ಲಿ ನಿಂತು ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಹೂಮಳೆಗರೆದು, ನಮಿಸಿದರು. ಮಹಿಳೆಯರು ಪೂರ್ಣಕುಂಭದೊಂದಿಗೆ ಸ್ತಬ್ಧಚಿತ್ರ ಮಾದರಿ ವಿಶೇಷ ವಾಹನವನ್ನು ಬರಮಾಡಿಕೊಂಡರು.

ಗ್ರಾಮದಲ್ಲಿ ಸಂವಿಧಾನ ಹಬ್ಬದ ಸಂಭ್ರಮ ಕಳೆಗಟ್ಟಿತ್ತು. ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳು, ಸ್ಥಳೀಯ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಸಂಘದ ಸದಸ್ಯರು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ನೂರಾರು ಮಂದಿ ಭಾಗವಹಿಸಿ ಸಂತಸಪಟ್ಟರು. ಈ ವೇಳೆ ಸಂವಿಧಾನ ಪೀಠಿಕೆಯನ್ನು ಸಾಮೂಹಿಕವಾಗಿ ಓದಲಾಯಿತು. ಇದರ ಪ್ರತಿಗಳನ್ನು ಜನರಿಗೂ ಹಂಚಲಾಯಿತು.

ಸಂವಿಧಾನ ಜಾಗೃತಿ ಜಾಥಾ ಯಶಸ್ವಿ ಹೊಣೆ ಪಿಡಿಓಗಳಿಗೆ

ತಾಲೂಕು ಮಟ್ಟದ ಅಧಿಕಾರಿಗಳು, ಪಿಡಿಓಗಳೊಂದಿಗೆ ಜಿಪಂ ಸಿಇಓ ಗಾಯತ್ರಿ ವರ್ಚುವಲ್ ಸಭೆ

ಮೈಸೂರು, ಫೆ.5(ಎಸ್‌ಬಿಡಿ)– ಸಂವಿಧಾನ ಜಾಗೃತಿ ಜಾಥಾವನ್ನು ಯಶಸ್ವಿಗೊಳಿಸಲು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ(ಪಿಡಿಓ)ಗಳು ಸಿದ್ಧತೆ ಮಾಡಿಕೊಳ್ಳುವಂತೆ ಮೈಸೂರು ಜಿಲ್ಲಾ ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೂಚನೆ ನೀಡಿದರು.

ಜಿಲ್ಲೆಯ ನಂಜನಗೂಡು, ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರ ತಾಲೂಕುಗಳಲ್ಲಿ ಸಂವಿಧಾನ ಜಾಗೃತಿ ಜಾಥಾ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಜಿಪಂ ಕಾರ್ಯಾಲಯದಲ್ಲಿ ಸೋಮವಾರ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಪಿಡಿಓಗಳೊಂದಿಗೆ ವರ್ಚುವಲ್ ಸಭೆ ನಡೆಸಿ, ಸಂವಿಧಾನದ ಆಶಯ, ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಜಾಥಾದ ಉದ್ದೇಶವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸೂಕ್ತಕ್ರಮ ವಹಿಸುವಂತೆ ತಿಳಿಸಿದರು.

ಸಂವಿಧಾನ ಜಾಗೃತಿ ಜಾಥಾ ಯಶಸ್ವಿಗಾಗಿ ಸರ್ಕಾರವು ಪ್ರತಿ ಪಂಚಾಯ್ತಿಗೆ 10 ಸಾವಿರ ಅನುದಾನ ನೀಡುತ್ತಿದ್ದು, ಜಾಥಾ ಅಂಗವಾಗಿ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೆಚ್ಚು ಜನ ಸೇರುವ ಸ್ಥಳಗಳಲ್ಲಿ ಸಂವಿಧಾನ ಪೀಠಿಕೆಯನ್ನು ಸಾಮೂಹಿಕವಾಗಿ ಓದಿಸುವುದರ ಜೊತೆಗೆ ಅರಿವು ಮೂಡಿಸಬೇಕು. ಅಪಾರ ಸಂಖ್ಯೆಯ ಭಕ್ತರು ನೆರೆಯುವ ಚಾಮುಂಡಿಬೆಟ್ಟದಲ್ಲೂ ಈ ಕಾರ್ಯಕ್ರಮ ನಡೆಸಬೇಕು. ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಸಂವಿಧಾನ ಪೀಠಿಕೆ ಹಾಗೂ ನಿರ್ದೇಶಕ ತತ್ವಗಳ ಬಗ್ಗೆ ಉಪನ್ಯಾಸ ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಸಂವಿಧಾನ ಜಾಗೃತಿ ಜಾಥಾ ಸಂಬಂಧ ಮೈಸೂರು ಜಿಲ್ಲಾ ಪಂಚಾಯ್ತಿಯಲ್ಲಿ ಸಿಇಓ ಕೆ.ಎಂ.ಗಾಯತ್ರಿ ಸೋಮವಾರ ವರ್ಚುವಲ್ ಮೂಲಕ ಅಧಿಕಾರಿಗಳ ಸಭೆ ನಡೆಸಿದರು.

ವಿಶೇಷ ವಾಹನದಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡುವುದಕ್ಕಷ್ಟೇ ಸೀಮಿತವಾಗದೆ ಸೈಕಲ್ ಜಾಥಾ, ಬೈಕ್ ಜಾಥಾ, ಎತ್ತಿನಗಾಡಿ ಮೆರವಣಿಗೆ, ಟ್ರ್ಯಾಕ್ಟರ್ ಜಾಥಾ ಇನ್ನಿತರ ಚಟುವಟಿಕೆಗಳ ಮೂಲಕ ಸಂವಿಧಾನ ಜಾಗೃತಿ ಜಾಥಾವನ್ನು ವೈವಿಧ್ಯಮಯ ಹಾಗೂ ಅರ್ಥಪೂರ್ಣವಾಗಿ ನಡೆಸಿದರೆ ಹೆಚ್ಚು ಜನರನ್ನು ತಲುಪಲು ಸಾಧ್ಯ. ಜಾಥಾ ಸಂದರ್ಭದಲ್ಲಿ ಯಾವುದೇ ರೀತಿಯಲ್ಲೂ ಗೊಂದಲ ಸೃಷ್ಟಿಯಾಗದಂತೆ ಅಧಿಕಾರಿಗಳು ಜಾಗ್ರತೆ ವಹಿಸಬೇಕು ಎಂದರು.

ಇಲಾಖೆಗಳ ಸಹಕಾರ: ಸಂವಿಧಾನ ಜಾಗೃತಿ ಜಾಥಾ ಯಶಸ್ವಿಗೆ ವಿವಿಧ ಇಲಾಖೆಗಳು ಕೈಜೋಡಿಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಲಿಂಗತ್ವ ಅಲ್ಪಸಂಖ್ಯಾತರನ್ನು ಒಟ್ಟುಗೂಡಿಸಿ ಜಾಥಾ ಕೈಗೊಳ್ಳಬೇಕು. ರೈತ ಸಂಪರ್ಕ ಕೇಂದ್ರಗಳಲ್ಲಿ ಸಂವಿಧಾನದ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಕೃಷಿ ಇಲಾಖೆ ಹಮ್ಮಿಕೊಳ್ಳಬೇಕು. ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರಿಂದ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮವನ್ನು ಆಯೋಜಿಸಬೇಕು. ನರೇಗಾ ಕಾಮಗಾರಿ ಸ್ಥಳದಲ್ಲೂ ಕಾರ್ಯಕ್ರಮ ಯೋಜಿಸಬೇಕು. ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರಿಗೆ ಸಂವಿಧಾನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಪುಸ್ತಕ ಪ್ರದರ್ಶನ: ಸಮಾಜ ಕಲ್ಯಾಣ ಇಲಾಖೆ ಪ್ರಭಾರ ಜಂಟಿ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ವಿಶ್ವವಿದ್ಯಾಲಯ ಹಾಗೂ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಚಾರ ಸಂಕಿರಣ, ಶಾಲಾ–ಕಾಲೇಜುಗಳಲ್ಲಿ ವಿಶೇಷ ಉಪನ್ಯಾಸ ಹಾಗೂ ನಿರ್ದೇಶಕ ತತ್ವಗಳ ಅರಿವು ಕಾರ್ಯಕ್ರಮ ನಡೆಸಬೇಕು. ಎಲ್ಲಾ ಗ್ರಾಮ ಪಂಚಾಯ್ತಿಗಳ ಗ್ರಂಥಾಲಯಗಳಲ್ಲಿ ಸಂವಿಧಾನ ಕುರಿತ ಪುಸ್ತಕಗಳ ಪ್ರದರ್ಶನ ಏರ್ಪಡಿಸಿ, ಅದರ ಬಗ್ಗೆ ಹೆಚ್ಚು ಪ್ರಚುರಪಡಿಸುವ ಮೂಲಕ ಉದ್ದೇಶವನ್ನು ಸಾಕಾರಗೊಳಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿಗಳಾದ ಡಾ.ಎಂ.ಕೃಷ್ಣರಾಜು(ಅಭಿವೃದ್ಧಿ), ಸವಿತಾ (ಆಡಳಿತ) ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಪಾಕಿಸ್ತಾನದಲ್ಲಿ ಮತ್ತೆ ಉಗ್ರರ ಅಟ್ಟಹಾಸ; ಪೊಲೀಸ್ ಠಾಣೆ ಮೇಲೆ ದಾಳಿ: ಕನಿಷ್ಠ 10 ಮಂದಿ ಸಾವು

ಲಾಹೋರ್, ಫೆ.5– ಪಾಕಿಸ್ತಾನದಲ್ಲಿ ಮತ್ತೆ ಉಗ್ರರು ಅಟ್ಟಹಾಸ ಮೆರೆದಿದ್ದು, ಏಕಾಏಕಿ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದ್ದು, ದಾಳಿಯಲ್ಲಿ ಕನಿಷ್ಠ 10 ಮಂದಿ ಪೊಲೀಸ್ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ವಾಯುವ್ಯ ಪಾಕಿಸ್ತಾನದಲ್ಲಿನ ಪೊಲೀಸ್ ಠಾಣೆಯೊಂದರ ಮೇಲೆ ಉಗ್ರರು ದಾಳಿ ನಡೆಸಿದ್ದು, ಕನಿಷ್ಠ 10 ಪೊಲೀಸ್ ಸಿಬ್ಬಂದಿ ಹತ್ಯೆಯಾಗಿದ್ದಾರೆ. ಸ್ಥಳೀಯ ಕಾಲಮಾನ ಮುಂಜಾನೆ 3 ಗಂಟೆಗೆ ಉಗ್ರರು ಪೊಲೀಸ್ ಠಾಣೆಯ ಮೇಲೆ ಸ್ನೈಪರ್ ದಾಳಿ ಮಾಡಿದ್ದಾರೆ. ಬಳಿಕ ಠಾಣೆಯನ್ನು ಪ್ರವೇಶಿಸಿ ಹ್ಯಾಂಡ್ ಗ್ರೆನೇಡ್‌ಗಳನ್ನು ಎಸೆದಿದ್ದಾರೆ. ಈ ವೇಳೆ ಸಂಭವಿಸಿದ ಸ್ಫೋಟದಿಂದ ಕನಿಷ್ಠ 10 ಪೊಲೀಸ್ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನದ ಖೈಬರ್–ಪಖ್ತುಂಕ್ವಾ ಪ್ರಾಂತ್ಯದ ದ್ರಾಬಾನ್ ಪ್ರದೇಶದ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

30ಕ್ಕೂ ಹೆಚ್ಚು ಉಗ್ರರು ಮೂರೂ ದಿಕ್ಕುಗಳಿಂದ ದಾಳಿ ನಡೆಸಿದ್ದು, ಎರಡೂವರೆ ಗಂಟೆಗಳ ಕಾಲ ಗುಂಡಿನ ಚಕಮಕಿ ನಡೆಯಿತು. ದಾಳಿಯ ಹಿಂದೆ ಯಾರ ಕೈವಾಡವಿದೆ ಮತ್ತು ಇದು ಚುನಾವಣೆಗೆ ಸಂಬಂಧಿಸಿದ ದಾಳಿಯೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಪೊಲೀಸ್ ಠಾಣೆಯ ಕಟ್ಟಡಕ್ಕೆ ಪ್ರವೇಶಿಸಿದ ನಂತರ, ಭಯೋತ್ಪಾದಕರು ಹ್ಯಾಂಡ್ ಗ್ರೆನೇಡ್‌ಗಳನ್ನು ಬಳಸಿದರು, ಇದು ಪೊಲೀಸರಿಗೆ ಹೆಚ್ಚಿನ ಸಾವುನೋವುಗಳನ್ನು ಉಂಟುಮಾಡಿತು ಎಂದು ದ್ರಾಬನ್‌ನ ಉಪ ಪೊಲೀಸ್ ವರಿಷ್ಠಾಧಿಕಾರಿ ಮಲಿಕ್ ಅನೀಸ್ ಉಲ್ ಹಸನ್ ತಿಳಿಸಿದ್ದಾರೆ.

ಇದೇ 8 ರಂದು ಪಾಕಿಸ್ತಾನ ಲೋಕಸಭೆಗೆ ಚುನಾವಣೆ ನಡೆಯಲಿದ್ದು, ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿದ್ದಂತೆ ಹಿಂಸಾಚಾರದ ಘಟನೆಗಳು ಹೆಚ್ಚುತ್ತಿವೆ.

ಬನ್ನಿಮಂಟಪದಲ್ಲಿ ಪೈಪ್‌ಲೈನ್‌ಗೆ ಹಾನಿ

ಇಂದು ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯಯ ಸಾಧ್ಯತೆ

ಮೈಸೂರು,ಫೆ.5(ಪಿಎಂ)– ಬನ್ನಿಮಂಟಪ ಸೇರಿದಂತೆ ವಿವಿಧ ಬಡಾವಣೆಗಳಿಗೆ ನೀರು ಪೂರೈಕೆಯಾಗುವ ಪೈಪ್‌ಲೈನ್‌ಗೆ ಬನ್ನಿಮಂಟಪದ ಹೈವೇ ವೃತ್ತದಲ್ಲಿ ಹಾನಿಯಾಗಿದ್ದು, ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದಿಂದ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಫೆ.6ರ ಮಂಗಳವಾರ ಕೆಲ ಬಡಾವಣೆಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.



ಬನ್ನಿಮಂಟಪ, ಎಸ್‌ಎಸ್ ನಗರ (ಶ್ರೀ ಶಿವರಾತ್ರೀಶ್ವರನಗರ) ಮತ್ತು ಸಿದ್ದಿಕಿನಗರ ಬಡಾವಣೆಗಳಿಗೆ ನೀರು ಪೂರೈಸುವ ಪೈಪ್‌ಲೈನ್‌ಗೆ ಹೈವೇ ವೃತ್ತದಲ್ಲಿ ಹಾನಿಯಾಗಿದೆ. ಸದರಿ ಸ್ಥಳದಲ್ಲಿ ಭೂಮಿಯೊಳಗಿನಿಂದ ನೀರು ಉಕ್ಕಿ ಬರುತ್ತಿದ್ದ ಹಿನ್ನೆಲೆಯಲ್ಲಿ ಅಗೆದು ಪರಿಶೀಲಿಸಲಾಗಿ, ಇಲ್ಲಿರುವ ಸಿಮೆಂಟ್ ಪೈಪ್‌ಗೆ ಹಾನಿ ಉಂಟಾಗಿರುವುದು ಕಂಡುಬಂದಿದೆ. ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದಿಂದ ದುರಸ್ತಿ ಕಾಮಗಾರಿ ಆರಂಭಗೊಂಡಿದ್ದು, ಬಹುತೇಕ ನಾಳೆಯೊಳಗೆ ಪೂರ್ಣಗೊಳ್ಳಲಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎ.ಎಂ.ಮೊಹಮ್ಮದ್ ಮುಸ್ತಫಾ, ಸೋಮವಾರವೇ ಕಾಮಗಾರಿ ಪೂರ್ಣಗೊಳಿಸಬೇಕಿತ್ತು. ಆದರೆ ಕಾರಣಾಂತರಗಳಿಂದ ಸಾಧ್ಯವಾಗಿಲ್ಲ ಹೀಗಾಗಿ 25, 17 ಮತ್ತು 8ನೇ ವಾರ್ಡ್‌ಗಳಲ್ಲಿ ನಾಳೆ (ಮಂಗಳವಾರ) ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ರಿಯಲ್ ಎಸ್ಟೇಟ್ ಪಾಲುದಾರಿಕೆ ಆಮಿಷವೊಡ್ಡಿ 55 ಲಕ್ಷ ವಂಚನೆ

ಮೈಸೂರು, ಫೆ.5(ಆರ್‌ಕೆ)–ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಪಾಲುದಾರಿಕೆ ನೀಡಿ ಕೋಟ್ಯಾಂತರ ರೂ. ಹಣ ಗಳಿಸಿಕೊಡುವುದಾಗಿ ಆಮಿಷ ತೋರಿಸಿ ವ್ಯಕ್ತಿಯೊಬ್ಬರಿಂದ 55 ಲಕ್ಷ ರೂ. ಹಣ ಪಡೆದು ವಂಚಿಸಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ನಡೆದಿದೆ. ಬಾಬಯ್ಯ ಸ್ವಾಮಿ ನಾಯ್ಡು ಹಾಗೂ ಬ್ರಹ್ಮಾನಂದ ರೆಡ್ಡಿ ಅವರು ಹಣ ಪಡೆದು ಮೋಸ ಮಾಡಿದ್ದಾರೆ ಎಂದು ಗಜಾನನ ಭಟ್ ಎಂಬುವರು ವಿಜಯನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ಕೇಂದ್ರ ಪ್ರವಾಸೋದ್ಯಮ ಇಲಾಖೆ ನೌಕರರಾದ ತಮಗೆ ರವಿ ಎಂಬುವರ ಮೂಲಕ ಪರಿಚಯವಾದ ಬಾಬಯ್ಯ ನಾಯ್ಡು ಮತ್ತು ಬ್ರಹ್ಮಾನಂದ ರೆಡ್ಡಿ ಅವರು ವಿಜಯನಗರದಲ್ಲಿರುವ ರಿಯಲ್ ಎಸ್ಟೇಟ್ ಸಂಸ್ಥೆ ಪಾಲುದಾರರನ್ನಾಗಿ ಮಾಡಿ ತಮ್ಮಿಂದ 55 ಲಕ್ಷ ರೂ. ಪಡೆದು ವಂಚಿಸಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಇದೀಗ ಮೊಬೈಲ್ ಸಂಪರ್ಕಕ್ಕೂ ಸಿಗದೇ, ರಾತ್ರೋರಾತ್ರಿ ಕಣ್ಮರೆಯಾಗಿದ್ದಾರೆ ಎಂದು ಗಜಾನನ ಭಟ್ ಅವರು ನೀಡಿದ ದೂರಿನನ್ವಯ ಇಬ್ಬರ ವಿರುದ್ಧ ವಂಚನೆ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಸಬ್ ಇನ್ಸ್‌ಪೆಕ್ಟರ್ ವಿಶ್ವನಾಥ್ ಅವರು, ತನಿಖೆ ನಡೆಸುತ್ತಿದ್ದಾರೆ.

ಇಂದು 'ಆರಾಧನಾ ಮಹೋತ್ಸವ'

ಮೈಸೂರು, ಫೆ.5– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವತಿಯಿಂದ ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ, ಶ್ರೀ ಕನಕದಾಸರ ಮತ್ತು ಸಂಗೀತ ತ್ರಿಮೂರ್ತಿಗಳ 'ಆರಾಧನಾ ಮಹೋತ್ಸವ–2024' ಅನ್ನು ಫೆ.6ರಂದು ಬೆಳಗ್ಗೆ 10:30ಕ್ಕೆ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದೆ. ಸುರಭಿ ಗಾನ ಕಲಾಮಂದಿರದ ಸಂಸ್ಥಾಪಕರು ಹಾಗೂ ಹಿರಿಯ ಸಂಗೀತ ವಿದುಷಿಯಾದ ಡಾ.ಸುಕನ್ಯಾ ಪ್ರಭಾಕರ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದು, ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ರಾಜೇಶ್ ಎಂ.ಆರ್, ಮೌಲ್ಯಮಾಪನ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್ ಮತ್ತು ಹಣಕಾಸು ಅಧಿಕಾರಿ ರೇಖಾ ಉಪಸ್ಥಿತರಿರುವರು.

ಇಂದು 'ಕಾಯಕಲ್ಪ' ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಫೆ.5– ಅತ್ಯುತ್ತಮವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ನಿರ್ವಹಣೆ ಮಾಡಿ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಯಾಗಿರುವ ಸಂಸ್ಥೆಗಳಿಗೆ 'ಕಾಯಕಲ್ಪ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಫೆ.6ರಂದು ಬೆಳಗ್ಗೆ 10 ಗಂಟೆಗೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ–ಪ್ಲಾಟಿನಮ್ ಜುಬಿಲೀ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ತುರ್ತು ನಿಗಾ ಘಟಕಗಳ ಸೇವೆಗಳನ್ನು ಮೇಲ್ವಿಚಾರಣೆ ಮಾಡಿ ಮಾರ್ಗದರ್ಶನ ನೀಡಲು ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಯೋಜನೆ ಅಡಿಯಲ್ಲಿನ ಸೇವೆಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಬೆಳಗ್ಗೆ 11 ಗಂಟೆಗೆ ಅಬ್ಬಾ ರಸ್ತೆಯ ಫಾರ್ಚೂನ್ ಜೆ.ಪಿ.ಪ್ಯಾಲೆಸ್‌ನ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ತಾಪಂ ಸಾಮಾನ್ಯ ಸಭೆ

ಮೈಸೂರು, ಫೆ.5– ಮೈಸೂರು ತಾಲೂಕು ಪಂಚಾಯತ್‌ನ ಆಡಳಿತಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಫೆ7 ರಂದು ಬೆಳಗ್ಗೆ 10:30ಕ್ಕೆ ಮೈಸೂರು ತಾಲೂಕು ಪಂಚಾಯಿತಿ (ಮಿನಿ ವಿಧಾನಸೌಧ ಕೊಠಡಿ ಸಂಖ್ಯೆ–212) ಸಭಾಂಗಣದಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ. ಸಭೆಗೆ ತಾಲೂಕಿನ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಾಗುವಂತೆ ತಾಲೂಕು ಪಂಚಾಯಿತ್‌ನ ಆಡಳಿತಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾರ್ಖಂಡ್ ವಿಧಾನಸಭೆಯಲ್ಲಿ ವಿಶ್ವಾಸ ಮತ ಗೆದ್ದ ಸಿಎಂ ಚಂಪೈ ಸೋರೆನ್

ರಾಂಚಿ, ಫೆ.5– ಜಾರ್ಖಂಡ್‌ನಲ್ಲಿ ಜೆಎಂಎಂ ನೇತೃತ್ವದ ಸಮ್ಮಿಶ್ರ ಸರ್ಕಾರ ಸೋಮವಾರ ವಿಶ್ವಾಸ ಮತ ಗೆದ್ದಿದ್ದು, ಮುಖ್ಯಮಂತ್ರಿ ಚಂಪೈ ಸೋರೆನ್ ಅವರು ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಿದ್ದಾರೆ.



ಇಂದು ವಿಶೇಷ ಅಧಿವೇಶನದಲ್ಲಿ ಸಿಎಂ ಚಂಪೈ ಸೋರೆನ್ ಅವರು ವಿಶ್ವಾಸ ಮತಯಾಚಿಸಿದರು. ಜೆಎಂಎಂ, ಕಾಂಗ್ರೆಸ್ ಮತ್ತು ಆರ್‌ಜೆಡಿ ಮೈತ್ರಿಕೂಟದ 47 ಶಾಸಕರು ಕೈ ಎತ್ತುವ ಮೂಲಕ ಚಂಪೈ ಸರ್ಕಾರಕ್ಕೆ ಬೆಂಬಲ ನೀಡಿದರು. 29 ಶಾಸಕರು ವಿಶ್ವಾಸ ಮತದ ವಿರುದ್ಧವಾಗಿ ಕೈ ಎತ್ತಿದರು. ಇದಕ್ಕೂ ಮುನ್ನ ವಿಧಾನಸಭೆಯಲ್ಲಿ ಮಾತನಾಡಿದ ಬಂಧನಕ್ಕೊಳಗಾಗಿರುವ ಮಾಜಿ ಸಿಎಂ ಹೇಮಂತ್ ಸೋರೆನ್ ತಮ್ಮ ಬಂಧನಕ್ಕೆ ಬಿಜೆಪಿ ಕಾರಣ ಎಂದು ದೂಷಿಸಿದರು. ಭೂ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಹೇಮಂತ್ ಸೋರೆನ್ ಅವರನ್ನು ಜನವರಿ 31 ರಂದು ಜಾರಿ ನಿರ್ದೇಶನಾಲಯ ಬಂಧಿಸಿದ್ದು, ಈಗ ಇಡಿ ಕಸ್ಟಡಿಯಲ್ಲಿದ್ದಾರೆ. ವಿಶ್ವಾಸ ಮತಕ್ಕಾಗಿ ವಿಧಾನಸಭೆಯಲ್ಲಿ ಹಾಜರಾಗಲು ಇಡಿ ಮಾಜಿ ಸಿಎಂಗೆ ಅವಕಾಶ ನೀಡಿದೆ. ಕಳೆದ ಸಂಜೆ, ಆಡಳಿತಾರೂಢ ಜೆಎಂಎಂ ನೇತೃತ್ವದ ಮೈತ್ರಿಕೂಟದ ಶಾಸಕರು ಹೈದರಾಬಾದ್‌ನಿಂದ ಆಗಮಿಸಿದ್ದರು.

ಗ್ರ್ಯಾಮಿ ಪ್ರಶಸ್ತಿ–2024: ಶಂಕರ್ ಮಹದೇವನ್‌ರ ಫ್ಯೂಷನ್ ಬ್ಯಾಂಡ್ ಶಕ್ತಿ ತಂಡಕ್ಕೆ ಬೆಸ್ಟ್ ಗ್ಲೋಬಲ್ ಮ್ಯೂಸಿಕ್ ಆಲ್ಬಮ್ ಅವಾರ್ಡ್!

ವಾಷಿಂಗ್ಟನ್, ಫೆ5– ಭಾರತದ ಖ್ಯಾತ ಗಾಯಕ ಶಂಕರ್ ಮಹದೇವನ್‌ರ ತಂಡಕ್ಕೆ 2024ರ ಗ್ರ್ಯಾಮಿ ಪ್ರಶಸ್ತಿ ಲಭಿಸಿದ್ದು, ಫ್ಯೂಷನ್ ಬ್ಯಾಂಡ್ ಶಕ್ತಿ ತಂಡಕ್ಕೆ ಬೆಸ್ಟ್ ಗ್ಲೋಬಲ್ ಮ್ಯೂಸಿಕ್ ಆಲ್ಬಮ್ ಅವಾರ್ಡ್ ಲಭಿಸಿದೆ

ಗಾಯಕ ಶಂಕರ್ ಮಹದೇವನ್‌ರ ಶಕ್ತಿ ಬ್ಯಾಂಡ್‌ಗೆ 'ಅತ್ಯುತ್ತಮ ಗ್ಲೋಬಲ್ ಮ್ಯೂಸಿಕ್ ಆಲ್ಬಂ' ಪ್ರಶಸ್ತಿ ದೊರೆತಿದ್ದು, ಅಲ್ಲದೆ ಸಮಕಾಲೀನ ವಾದ್ಯಗಳ ಆಲ್ಬಮ್ ಹಾಗೂ ಗ್ಲೋಬಲ್ ಮ್ಯೂಸಿಕ್ ಪರ್ಫಾರ್ಮೆನ್ಸ್ ಕೆಟಗರಿಯಲ್ಲಿ ರಾಕೇಶ್ ಅವಾರ್ಡ್ ಪಡೆದಿದ್ದಾರೆ. ಈ ಮೊದಲು ರಿಕ್ಕಿ ಕೇಜ್ ಅವರನ್ನು ಸೇರಿಸಿ ಭಾರತದ ಅನೇಕರಿಗೆ ಈ ಪ್ರಶಸ್ತಿ ಸಿಕ್ಕಿತ್ತು.

ಭಾರತ ಮೂಲದ ಜಾಕಿರ್ ಹುಸೇನ್‌ಗೆ (ಶಕ್ತಿ ಬ್ಯಾಂಡ್) ಒಂದು ಹಾಗೂ ಕೊಳಲು ವಾದಕ ರಾಕೇಶ್ ಚೌರಾಸಿಯಾ ಅವರಿಗೆ ಎರಡು ಅವಾರ್ಡ್ ಸಿಕ್ಕಿದೆ. 'ಅತ್ಯುತ್ತಮ ಗ್ಲೋಬಲ್ ಮ್ಯೂಸಿಕ್ ಆಲ್ಬಂ' ಪ್ರಶಸ್ತಿ ಶಕ್ತಿ ಬ್ಯಾಂಡ್‌ಗೆ ದೊರೆತಿದೆ. ಸಮಕಾಲೀನ ವಾದ್ಯಗಳ ಆಲ್ಬಮ್ ಹಾಗೂ ಗ್ಲೋಬಲ್ ಮ್ಯೂಸಿಕ್ ಪರ್ಫಾರ್ಮೆನ್ಸ್ ಕೆಟಗರಿಯಲ್ಲಿ ರಾಕೇಶ್ ಅವಾರ್ಡ್ ಗೆದ್ದಿದ್ದಾರೆ. ಈ ಮೊದಲು ರಿಕ್ಕಿ ಕೇಜ್ ಅವರನ್ನು ಸೇರಿಸಿ ಭಾರತದ ಅನೇಕರಿಗೆ ಈ ಪ್ರಶಸ್ತಿ ಸಿಕ್ಕಿದೆ. ಫ್ಯೂಷನ್ ಬ್ಯಾಂಡ್ ಶಕ್ತಿಯಲ್ಲಿ ಗಾಯಕ ಶಂಕರ್ ಮಹಾದೇವನ್, ಜಾನ್ ಮೆಕ್‌ಲಾಲಿನ್, ತಾಳವಾದ್ಯ ವಾದಕ ವಿ ಸೆಲ್ವಗಣೇಶ್, ಜಾಕಿರ್ ಹುಸೇನ್ ಮತ್ತು ಪಿಟೀಲು ವಾದಕ ಗಣೇಶ್ ರಾಜಗೋಪಾಲನ್ ತಂಡದಲ್ಲಿದ್ದಾರೆ.



ಟೇಲರ್ ಸ್ವಿಫ್ಟ್‌ಗೆ 13ನೇ ಗ್ರ್ಯಾಮಿ ಅವಾರ್ಡ್: ಗ್ಲೋಬಲ್ ಸೆನ್ಸೇಶನ್ ಎಂದೇ ಹೆಸರು ಮಾಡಿರುವ ಗಾಯಕಿ ಟೇಲರ್ ಸ್ವಿಫ್ಟ್ 13ನೇ ಗ್ರ್ಯಾಮಿ ಅವಾರ್ಡ್ ಅನ್ನು ತಮ್ಮದಾಗಿಸಿಕೊಂಡರು. ಇದರೊಂದಿಗೆ ಬಾರ್ಬಿ ಚಿತ್ರದ ಬಿಲ್ಲಿ ಎಲಿಶ್ ಅವರ 'ವಾಟ್ ವಾಸ್ ಐ ಮೇಡ್ ಫಾರ್' ಹಾಡನ್ನು ವರ್ಷದ ಅತ್ಯುನ್ನತ ಹಾಡು ಎಂದು ಘೋಷಿಸಲಾಯಿತು.

ಝಾಕಿರ್ ಹುಸೇನ್: ಝಾಕಿರ್ ಹುಸೇನ್ ತಬಲಾ ವಾದನಕ್ಕೆ ಅನೇಕರು ಮರುಳಾಗಿದ್ದಾರೆ. ಸಂಗೀತ ಲೋಕಕ್ಕೆ ಅವರು ನೀಡಿದ ಕೊಡುಗೆ ಅಪಾರವಾದದ್ದು. 2008ರಲ್ಲಿ ಝಾಕಿರ್ ಹುಸೇನ್ ಗ್ರ್ಯಾಮಿ ಗೆದ್ದರು. 'ಗ್ಲೋಬಲ್ ಡ್ರಂ ಪ್ರಾಜೆಕ್ಟ್'ಗೆ ಈ ಪ್ರಶಸ್ತಿ ದೊರೆತಿತ್ತು. ಈ ಬಾರಿ ಅವರು ಮತ್ತೆ ಅವಾರ್ಡ್ ಗೆದ್ದಿದ್ದಾರೆ.

ಐದು ವರ್ಷವೂ ನಮ್ಮದೇ ಸರ್ಕಾರ ಇರಲಿದೆ; ಗ್ಯಾರಂಟಿ ಯೋಜನೆಗಳು ರದ್ದಾಗದು

ಮಂಗಳೂರು: ರಾಜ್ಯದಲ್ಲಿ 5 ವರ್ಷ ನಮ್ಮ ಪಕ್ಷವೇ ಅಧಿಕಾರದಲ್ಲಿರಲಿದ್ದು, ಗ್ಯಾರಂಟಿ ಯೋಜನೆಗಳು ರದ್ದುಗೊಳ್ಳುವುದಿಲ್ಲ ಎಂದು ಇಂಧನ ಸಚಿವ ಕೆಜೆ.ಜಾರ್ಜ್ ಭಾನುವಾರ ಹೇಳಿದರು.



ಸುರತ್ಕಲ್ ಬ್ಲಾಕ್ ಕಾಂಗ್ರೆಸ್ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೆಲಸ ಮಾಡಬೇಕು. ಕೊಡಗಿನಲ್ಲಿ ರಾಜಕೀಯ ಆರಂಭಿಸಿದ ಬಳಿಕ ಸೋಲಿನ ಜೊತೆಗೆ ಗೆಲುವಿನ ರುಚಿ ಕಂಡಿದ್ದೇನೆ. ಕರಾವಳಿ ಪ್ರದೇಶ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದು, ಅದನ್ನು ಹಿಂಪಡೆಯಲು ಪಕ್ಷದ ಕಾರ್ಯಕರ್ತರು ಶ್ರಮಿಸಬೇಕು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಿ. ಐದು ವರ್ಷಗಳ ಅಧಿಕಾರಾವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಿದೆ ಎಂದು ಹೇಳಿದರು. ಇದೇ ವೇಳೆ ಮೋದಿ ಸರ್ಕಾರವನ್ನು ಟೀಕಿಸಿದ ಅವರು, ತಮ್ಮ ವೈಫಲ್ಯಗಳನ್ನು ಮರೆಮಾಚಲು ಕೇಂದ್ರದ ಬಿಜೆಪಿ ಸರ್ಕಾರ ಸಾಕಷ್ಟು ಭರವಸೆಗಳನ್ನು ನೀಡಿತು. ಆದರೆ, ಎಂದಿಗೂ ಅವುಗಳನ್ನು ಈಡೇರಿಸಲಿಲ್ಲ ಎಂದು ಕಿಡಿಕಾರಿದರು.

ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಶಿಕ್ಷಕರಿಗೆ ಓಓಡಿ ಸೌಲಭ್ಯ: ಡಿಡಿಪಿಐ

ಮೈಸೂರು, ಫೆ.5(ಎಸ್‌ಬಿಡಿ)– ಮೈಸೂರಿನಲ್ಲಿ ನಡೆಯಲಿರುವ ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಗರ ವ್ಯಾಪ್ತಿಯ ಶಿಕ್ಷಕರು ಭಾಗವಹಿಸಲು ಓಓಡಿ ಸೌಲಭ್ಯದೊಂದಿಗೆ ಅನುಮತಿ ನೀಡಿ ಡಿಡಿಪಿಐ ಹೆಚ್.ಕೆ.ಪಾಂಡು ಆದೇಶಿಸಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಕಲಾಮಂದಿರದಲ್ಲಿ ಫೆ.8ರಂದು ಜರುಗಲಿರುವ ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾಡು–ನುಡಿ ಕುರಿತ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು, ಆಸಕ್ತ ಶಿಕ್ಷಕರು ಭಾಗವಹಿಸಲು ಅನುಮತಿ ನೀಡಬೇಕು ಎಂದು ಕಸಾಪ ನಗರಾಧ್ಯಕ್ಷ ಕೆ.ಎಸ್.ಶಿವರಾಮ್ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಮೈಸೂರು ನಗರ ವ್ಯಾಪ್ತಿಯ ಆಸಕ್ತ ಎಲ್ಲಾ ಶಿಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿಸಿ, ಭಾಗವಹಿಸುವ ಶಿಕ್ಷಕರಿಗೆ ಓಓಡಿ ಸೌಲಭ್ಯ ಕಲ್ಪಿಸಿ ಡಿಡಿಪಿಐ ಆದೇಶಿಸಿದ್ದಾರೆ. ಜೊತೆಗೆ ಸಮ್ಮೇಳನದ ಮೆರವಣಿಗೆಯಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಸ್ಕೌಟ್ಸ್ ಅಂಡ್ ಗೈಡ್ಸ್ ಬ್ಯಾಂಡ್‌ಸೆಟ್ ತಂಡಗಳು ಭಾಗವಹಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಸೂಚನೆ ನೀಡಿದ್ದಾರೆ.

ಇಂದು ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಫೆ.5– ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ(ಫೆ.6) ಬೆಳಗ್ಗೆ 11.30ಕ್ಕೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಯೋಜನೆ ಹಾಗೂ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅಶ್ವಮೇಧ ಬಸ್'ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

● ತಮ್ಮ ಸರ್ಕಾರದ ಐದು ಗ್ಯಾರಂಟಿಗಳ ಟೀಕಿಸಿದ ಪ್ರಧಾನಿ ವಿರುದ್ಧ ವಾಗ್ದಾಳಿ ● ಯಾವ ಸರ್ಕಾರವೂ ನಮ್ಮ ಗ್ಯಾರಂಟಿ ಜಾರಿಗೊಳಿಸಿರಲಿಲ್ಲ





ಬೆಂಗಳೂರಿನ ವಿಧಾನಸೌಧ ಮುಂಭಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಶ್ವಮೇಧ ಕ್ಲಾಸಿಕ್ ಬಸ್ ಸೇವೆಗೆ ಚಾಲನೆ ನೀಡಿದರು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು, ಫೆ.5(ಕೆಎಂಶಿ)–ಪ್ರಧಾನಿ ನರೇಂದ್ರ ಮೋದಿ ಗ್ಯಾರಂಟಿ ಎಂಬ ಸುಳ್ಳು ಭರವಸೆಗೆ ಜನರು ಮರುಳಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ರಾಜ್ಯದ ಜನತೆಗೆ ಮನವಿ ಮಾಡಿದ್ದಾರೆ.

ಅವರು ಇಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 100 ಹೊಸ ವಿನ್ಯಾಸ ಕರ್ನಾಟಕ ಸಾರಿಗೆ ಬಸ್ಸುಗಳನ್ನು ಲೋಕಾರ್ಪಣೆ ಮಾಡಿದ ನಂತರ ಮಾತನಾಡಿ, ಎಲ್ಲ ಜಾತಿ ಧರ್ಮಗಳ ಬಡವರಿಗೆ ಪಕ್ಷಾತೀತ, ಜಾತ್ಯಾತೀತವಾಗಿ ಎಲ್ಲ ಮಹಿಳೆಯರಿಗೂ ಉಚಿತವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಡ ಲಾಗಿದೆ. ಹಿಂದೆ ಯಾವ ಸರ್ಕಾರದವರೂ ಇಂತಹ ಪ್ರಯತ್ನ ಕೈಗೊಂಡಿರಲಿಲ್ಲ. ಗ್ಯಾರಂಟಿಗಳನ್ನು ಜಾರಿಗೊಳಿ ಸಲು ಸಾಧ್ಯವಿಲ್ಲ. ಪ್ರಧಾನಿ ಮೋದಿಯವರೂ ರಾಜ್ಯ ದಿವಾಳಿಯಾಗುತ್ತದೆ ಎಂದರು.

ತಾವು 10 ವರ್ಷದಿಂದ ಅಧಿಕಾರದಲ್ಲಿದ್ದರೂ ಇಂತಹ ಗ್ಯಾರಂಟಿಗಳನ್ನು ಜನರಿಗೆ ನೀಡಲಿಲ್ಲ. ವಿದೇಶದಲ್ಲಿರುವ ಕಪ್ಪು ಹಣವನ್ನು ದೇಶಕ್ಕೆ ತಂದರೆ ಭಾರತದ ಪ್ರತಿ ಕುಟುಂಬಕ್ಕೂ 15 ಲಕ್ಷ ರೂ. ನೀಡುವ, ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ, ರೈತರ ಆದಾಯ ದ್ವಿಗುಣಗೊಳಿಸುವ ಭರವಸೆ ನೀಡಿದ್ದರು.

ಆದರೆ ಈ ಯಾವುದೇ ಭರವಸೆಗಳನ್ನು ಈಡೇರಿಸದ ಪ್ರಧಾನಿ ಮೋದಿ ಅವರು, ಈಗ ಮೋದಿ ಗ್ಯಾರಂಟಿ ಎಂದು ಸುಳ್ಳು ಹೇಳುತ್ತಿದ್ದಾರೆ. ಅವರ ಸುಳ್ಳುಗಳಿಗೆ ಜನರು ಮರುಳಾಗಬಾರದು ಎಂದರು.

1.17 ಕೋಟಿ ಮಹಿಳಾ ಯಜಮಾನಿಗೆ ತಿಂಗಳಿಗೆ 2,000 ರೂ. ನೀಡುವ ಗೃಹಲಕ್ಷ್ಮಿ ಯೋಜನೆ ಯನ್ನು ಜಾರಿಗೊಳಿಸಲಾಗಿದೆ. ಶಕ್ತಿ ಯೋಜನೆಯಡಿ 4,530 ಕೋಟಿ ರೂ.ಗಳನ್ನು ವೆಚ್ಚವಾಗಿದೆ ಅನ್ನಭಾಗ್ಯದಡಿ 5 ಕೆಜಿ ಅಕ್ಕಿಯ ಜೊತೆ 5 ಕೆಜಿ ಅಕ್ಕಿಯ ಮೊತ್ತ, ಯುವನಿಧಿ ಯೋಜನೆ ಯಡಿ ಯುವಕರಿಗೆ ಆರ್ಥಿಕ ಸಹಾಯ ನೀಡುತ್ತಿದ್ದೇವೆ.

ರಾಜ್ಯದ ಪ್ರತಿ ಕುಟುಂಬಕ್ಕೆ ಮಾಹೆಯಾನ 4 ರಿಂದ 5 ಸಾವಿರ ರೂ. ಆರ್ಥಿಕ ಸಹಾಯ ನೀಡುವ ಮೂಲಕ ಜನರಿಗೆ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸಲಾಗಿದೆ. ನಮ್ಮ ಪಂಚಗ್ಯಾರಂಟಿಗಳು ರಾಜ್ಯದ 4.50 ಕೋಟಿ ಜನರಿಗೆ ತಲುಪುತ್ತಿದೆ.

ನಮ್ಮ ಗ್ಯಾರಂಟಿಗಳನ್ನು ಬಿಟ್ಟಿ ಭಾಗ್ಯ ಎಂದು ಕೀಳು ಮಟ್ಟದ ಮಾತುಗಳನ್ನು ಬಿಜೆಪಿಯವರು ಆಡಿದರು. ಬಡವರ ಬಗ್ಗೆ ಕಾಳಜಿ ಇದ್ದು, ರಾಜ ಕೀಯ ಇಚ್ಛಾಶಕ್ತಿ ಇದ್ದಾಗ ಮಾತ್ರ ಜನರಿಗೆ ಉತ್ತಮ ಕಾರ್ಯಕ್ರಮಗಳನ್ನು ನೀಡಲು ಸಾಧ್ಯ. ಬಡವರಿಗೆ ಆರ್ಥಿಕ ಶಕ್ತಿ ತುಂಬುವುದು ಕಾಂಗ್ರೆಸ್‌ನ ಬದ್ಧತೆ ಎಂದರು.

ಅಶ್ವಮೇಧ: ಹೊಸ ವಿನ್ಯಾಸದ 100 'ಅಶ್ವಮೇಧ ಕ್ಲಾಸಿಕ್' ಬಸ್‌ಗಳಲ್ಲಿ ರಾಜ್ಯ ಸರ್ಕಾರದ 5 ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯಡಿ ಯಲ್ಲಿ ಮಹಿಳೆಯರು ಉಚಿತ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಬಸ್‌ಗಳಲ್ಲಿ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇನ್ನು 800 ಬಸ್‌ಗಳನ್ನು 2024ರ ಮೇ ಅಂತ್ಯದೊಳಗೆ ಸಾರ್ವಜನಿಕರ ಸೇವೆಗೆ ಬಿಡಲು ಸಾರಿಗೆ ಇಲಾಖೆ ಉದ್ದೇಶಿಸಿದೆ.

ಮೊದಲ ಹಂತದಲ್ಲಿ ರಸ್ತೆಗಿಳಿದಿರುವ 100 ಬಸ್‌ಗಳಿಗೆ 'ಅಶ್ವಮೇಧ ಕ್ಲಾಸಿಕ್' ಎಂದು ಹೆಸರಿಡಲಾಗಿದೆ.

ಈ ಬಸ್‌ಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸುತ್ತವೆ. ದರಗಳ ಮಾಹಿತಿ ಹಾಗೂ ಸಂಚರಿಸಲಿರುವ ಮಾರ್ಗಗಳ ಮಾಹಿತಿಯನ್ನು ಸಾರಿಗೆ ಸಂಸ್ಥೆಯ ಜಾಲತಾಣದಿಂದ ಪಡೆಯಬಹುದಾಗಿದೆ.

ಅಶ್ವಮೇಧ ಕ್ಲಾಸಿಕ್ ಬಸ್‌ಗಳು 3.42 ಮೀಟರ್ ಎತ್ತರವಿದ್ದು, 12 ಪ್ಯಾನಿಕ್ ಬಟನ್, ಜಿಪಿಎಸ್, 2 ರೇರ್ ಕ್ಯಾಮರಾ ಹಾಗೂ 6 ಮೊಬೈಲ್ ಫೋನ್ ಚಾರ್ಜಿಂಗ್ ಪಾಯಿಂಟ್‌ಗಳನ್ನು ಒಳ ಗೊಂಡಿವೆ. 52 ಬಕೆಟ್ ಸೀಟು, ಬಸ್ ಒಳಗೆ ಮತ್ತು ಹೊರ ಭಾಗದಲ್ಲಿ ಎಲ್‌ಇಡಿ ಮಾರ್ಗ ಫಲಕ, ಪ್ರಯಾಣಿಕರ ಲಗೇಜ್‌ಗೆ ಹೆಚ್ಚು ಸ್ಥಳಾವಕಾಶ ನೀಡಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೆಗೇರಿ ವರ್ಕ್ ಶಾಪ್‌ಗೆ 100 ಹೊಸ ಬಸ್ ಬಂದಿದ್ದು, ಒಟ್ಟು 1,000 ಹೊಸ ಬಸ್‌ಗಳು ಬರಲಿವೆ.

ತಲಕಾಡಿನಲ್ಲಿ ಶ್ರೀಕರಿಬಸವೇಶ್ವರ ದೇವಾಲಯ ಲೋಕಾರ್ಪಣೆ

ವಚನಗಳ ಮೂಲಕ ಶ್ರೀಕರಿಬಸವೇಶ್ವರರಿಂದ ಉತ್ತಮ ಸಂದೇಶ

ತುಮಕೂರು ಶ್ರೀಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ

ತಿ.ನರಸೀಪುರ, ಫೆ.5– ಶರಣ ಶ್ರೀಕರಿಬಸವೇಶ್ವರರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ ಎಂದು ತುಮಕೂರು ಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ ತಿಳಿಸಿದರು.

ತಾಲೂಕಿನ ತಲಕಾಡಿನ ಹಳೇ ಬೀದಿಯಲ್ಲಿ ಜೀರ್ಣೋದ್ಧಾರಗೊಂಡ ಶ್ರೀಕರಿಬಸವೇಶ್ವರ ದೇವಾಲಯದ ಉದ್ಘಾಟನಾ ಸಮಾರಂಭದ ಧಾರ್ಮಿಕ ಸಭೆ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ವಚನಕಾರ ಕರಿಬಸವೇಶ್ವರರು ಭಕ್ತಿ, ಸತಿ–ಪತಿ ಧರ್ಮ, ವಚನಗಳು, ಕಾಯಕ ಮತ್ತಿತರ ವಿಚಾರಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಇಲ್ಲಿರುವುದು ಕರಿಬಸವೇಶ್ವರರ ಗದ್ದಿಗೆ. ಇದನ್ನು ಭಕ್ತರು ದೇವಸ್ಥಾನವನ್ನಾಗಿಸಿದ್ದಾರೆ. ಪ್ರಸ್ತುತ 63 ಹಳ್ಳಿಗಳಲ್ಲಿ ಕರಿಬಸವೇಶ್ವರರ ಸದ್ಭಕ್ತರಿದ್ದಾರೆ. ದೇವಸ್ಥಾನವನ್ನು ಸುಂದರವಾಗಿ ಜೀರ್ಣೋದ್ಧಾರ ಮಾಡಿರುವುದು ಹೆಮ್ಮೆಯ ವಿಚಾರ. ಕರಿಬಸವೇಶ್ವರರ ವಚನ ಕೇವಲ ಪುಸ್ತಕದಲ್ಲಿರದೆ ಮಸ್ತಕದಲ್ಲಿಯೂ ಇರುವಂತಾಗಬೇಕು ಎಂದು ಸಲಹೆ ನೀಡಿದ ಅವರು, ಕರಿಬಸವೇಶ್ವರರು ತಮ್ಮ ವಚನಗಳ ಮೂಲಕ ಇಂದಿಗೂ ಶಾಶ್ವತವಾಗಿ ಉಳಿದಿದ್ದಾರೆ. ಅವರ ವಚನಗಳನ್ನು ಓದಿ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ತಿಳಿಸಿದರು.

ಮೈಸೂರಿನ ಕುಂದೂರು ಮಠದ ಡಾ.ಶ್ರೀ ಶರತ್ ಚಂದ್ರ ಸ್ವಾಮೀಜಿ ಮಾತನಾಡಿ, ಕರಿಬಸವೇಶ್ವರರ ಜೀವನ, ಸಾಧನೆ ಸಿದ್ಧಿ ತಿಳಿಸಿದರಲ್ಲದೆ, ಅವರ ಹಲವು ವಚನಗಳನ್ನು ಉಲ್ಲೇಖಿಸಿದರು.

ದೇಗುಲಕ್ಕೆ ಭಕ್ತರ ದಂಡು: ಜೀರ್ಣೋದ್ಧಾರಗೊಂಡ ದೇವಾಲಯವನ್ನು ಕಣ್ತುಂಬಿಕೊಳ್ಳಲು ಜಿಲ್ಲೆ ಸೇರಿದಂತೆ ಹೊರ ಜಿಲ್ಲೆಗಳಿಂದಲೂ ಸಾವಿರಾರು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದರು. ಭಕ್ತರಿಗೆ ಅನ್ನ ದಾಸೋಹ ಏರ್ಪಡಿಸಲಾಗಿತ್ತು. ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು.

ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮುಡುಕನಪುರದ ಶ್ರೀಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಕನಕಪುರ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ, ಮಾಡ್ರಹಳ್ಳಿ ಪಟ್ಟದ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮುಡುಕನಪುರ ತೋಪಿನ ಮಠದ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಆಶೀರ್ವಚನ ನೀಡಿದರು.

ಇದೇ ಸಂದರ್ಭ ದೇವಾಲಯ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮರಿಯಪ್ಪ, ಕಾರ್ಯದರ್ಶಿ ಸುಗಂಧ ರಾಜು ಹಾಗೂ ಪದಾಧಿಕಾರಿಗಳು ಹಾಗೂ ಜೀರ್ಣೋದ್ಧಾರಕ್ಕೆ ಶ್ರಮಿಸಿದವರನ್ನು ಸನ್ಮಾನಿಸಲಾಯಿತು.

ಕಳಸ, ಉತ್ಸವ ಮೂರ್ತಿ ಪೂಜೆ: ಫೆ.4ರಂದು ಸಂಜೆ ಗೋ ಪೂಜೆ, ಗಂಗಾಪೂಜೆಯೊಂದಿಗೆ ಯಾಗಶಾಲೆ ಪ್ರವೇಶ ನೆರವೇರಿತು. ನಂತರ ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ ವಾಚನ, ಪಂಚಗವ್ಯ ಸಾಧನ, ವಾಸ್ತು ಪೂಜೆ, ಹೋಮ, ಪರ್ಯಾಗ್ನಿಕರಣ ಶಿಖರ ಕಳಸ, ನೂತನ ಉತ್ಸವ ಮೂರ್ತಿಗೆ ಜಲಾಧಿವಾಸ, ಧ್ಯಾನಾದಿವಾಸ, ಮೂರ್ತಿ ಸಂಸ್ಕಾರ ನ್ಯಾಸ, ವಿಧಿ ಶಯನಾದಿ ವಾಸ ಮತ್ತಿತರ ಪೂಜಾ ಕೈಂಕರ್ಯಗಳು ನೆರವೇರಿದವು.

ತಲಕಾಡು ಹಸ್ತಿಕೇರಿ ಮಠದ ಡಾ.ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ಧಾರ್ಮಿಕ ಸಭೆ ಅಧ್ಯಕ್ಷತೆ ವಹಿಸಿದ್ದರು. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಾಧಿಕಾರಿ ಎಂ.ಎಸ್.ಪುಟ್ಟಬುದ್ಧಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕಿ ಡಾ.ಮಂಜುಳಾ, ಕರಿಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಹೆಚ್.ಬಿ.ಮರಿಯಪ್ಪ, ಗೌರವಾಧ್ಯಕ್ಷ ಹೆಚ್.ಬಿ.ಚನ್ನಬಸವಣ್ಣ, ಕಾರ್ಯದರ್ಶಿ ಎಸ್.ಬಿ.ಸುಗಂಧರಾಜು, ಖಜಾಂಚಿ ಎಸ್.ಕುಮಾರಸ್ವಾಮಿ, ಧರ್ಮದರ್ಶಿಗಳಾದ ಟಿ.ಸಿ.ಮಹದೇವಪ್ಪ, ನಂಜುಂಡಪ್ಪ ರಾಜೇಂದ್ರ ನಂಜುಂಡಸ್ವಾಮಿ, ಎಸ್.ಎಂ.ಜಯಶಂಕರಮೂರ್ತಿ, ಎಸ್.ಎಂ.ರಮೇಶ್, ಗೌಡರ ಮಹದೇವಸ್ವಾಮಿ, ಎಸ್.ಕುಮಾರಸ್ವಾಮಿ, ಬಸವಲಿಂಗಪ್ಪ, ಪುಟ್ಟಸ್ವಾಮಿ, ಚಂದ್ರಧರ, ರಾಜೇಂದ್ರ, ನಾಗರಾಜು, ಲೋಕೇಶ್, ನಂಜುಂಡಸ್ವಾಮಿ, ಶಾಂತಕುಮಾರ್, ಅರ್ಚಕರಾದ ನಂದೀಶ್ ಮತ್ತು ಪ್ರಶಾಂತ್ ಮತ್ತಿತರರಿದ್ದರು.



ಶ್ರೀಕರಿಬಸವೇಶ್ವರ ದೇವಸ್ಥಾನ ಉದ್ಘಾಟನಾ ಸಮಾರಂಭದ ಧಾರ್ಮಿಕ ಸಭೆಯನ್ನು ಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ವಚನಗಳನ್ನು ಕೆತ್ತುವ ಕೆಲಸವಾಗಲಿ

ಇಲ್ಲಿನ ಶ್ರೀ ಕರಿಬಸವೇಶ್ವರ ದೇವಾಲಯವನ್ನು ಅಂದವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ವಿಶಾಲ ಪ್ರಾಂಗಣವಿದೆ. ಹೀಗಾಗಿ ದೇವಾಲಯದ ಸುತ್ತಲಿನ ಜಾಗದಲ್ಲಿ ಕರಿಬಸವೇಶ್ವರರ ಆಯ್ದ ವಚನಗಳನ್ನು ಕೆತ್ತುವ ಕೆಲಸವನ್ನು ದೇವಸ್ಥಾನ ಸಮಿತಿಯವರು ಮಾಡುವ ಮೂಲಕ ಜನರಲ್ಲಿ ವಚನ ಜಾಗೃತಿ ಮೂಡಿಸಬೇಕು.

- ಶ್ರೀಸಿದ್ಧಲಿಂಗ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬ್ಯಾಚ್ಯುಲರ್ ಪಾರ್ಟಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ. ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥಲ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸುತ್ತೂರು ಜಾತ್ರಾ ಪ್ರಚಾರ ರಥಕ್ಕೆ ಅದ್ಧೂರಿ ಸ್ವಾಗತ



ಮಲ್ಲನಮೂಲೆ ಮಠದ ಬಳಿ ಸುತ್ತೂರು ಜಾತ್ರಾ ಪ್ರಚಾರ ರಥವನ್ನು ಸ್ವಾಗತಿಸಲಾಯಿತು.

ನಂಜನಗೂಡು, ಫೆ.5– ಸುತ್ತೂರು ಜಾತ್ರಾ ಪ್ರಚಾರ ರಥವನ್ನು ನಗರದ ಮಲ್ಲನ ಮೂಲೆ ಮಠದ ಬಳಿ ಪೀಠಾಧ್ಯಕ್ಷ ಶ್ರೀಚನ್ನ ಬಸವ ಸ್ವಾಮೀಜಿ ನೇತೃತ್ವದಲ್ಲಿ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಈ ವೇಳೆ ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಬುಲೆಟ್ ಮಹದೇವಪ್ಪ ಮಾತನಾಡಿ, ಸುತ್ತೂರು ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಪ್ರಚಾರ ರಥ ಎಲ್ಲಾ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಸಂಚರಿಸಿ ಇದೀಗ ನಂಜನಗೂಡಿಗೆ ಆಗಮಿಸಿದೆ. ಪ್ರಚಾರ ರಥವನ್ನು ವೀರಶೈವ ತಾಲೂಕು ಘಟಕದ ಸದಸ್ಯರ ಜೊತೆಗೂಡಿ ಬರಮಾಡಿಕೊಳ್ಳಲಾಗಿದೆ ಎಂದರು.

ಮಲ್ಲನಮೂಲೆ ಮಠದ ಪೀಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಮಾತನಾಡಿ, ಜಾತ್ರಾ ಮಹೋತ್ಸವ ಯಶಸ್ವಿಯಾಗಲೆಂದು ಶುಭ ಹಾರೈಸಿದರು. ಈ ವೇಳೆ ಮುಖಂಡರಾದ ನಂಜುಂಡಸ್ವಾಮಿ, ಬೊಮ್ಮಾಯಿ, ಮಹದೇವಪ್ರಸಾದ್, ಮಹದೇವಸ್ವಾಮಿ, ಬಸವರಾಜು, ಹೊನ್ನೇಗೌಡ, ರಥದ ಸಂಚಾಲಕರಾದ ಪಂಚಾಕ್ಷರಿ ಇದ್ದರು.

ಹುರ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಹುರ ಡೈರಿ ಅಧ್ಯಕ್ಷರಾಗಿ ಶಿವರಾಜು, ಉಪಾಧ್ಯಕ್ಷರಾಗಿ ರವಿಮೂರ್ತಿ ಆಯ್ಕೆಯಾದರು.



ಮಲ್ಕುಂಡಿ, ಫೆ.5– ಇಲ್ಲಿಗೆ ಸಮೀಪದ ಹುರ ಡೈರಿ ಅಧ್ಯಕ್ಷರಾಗಿ ಶಿವರಾಜು ಅವಿರೋಧವಾಗಿ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ರವಿಮೂರ್ತಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿವರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಮಂಜುನಾಥ್ ಹಾಗೂ ಸಿದ್ದೇಗೌಡನಹುಂಡಿ ರವಿಮೂರ್ತಿ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ರವಿಮೂರ್ತಿ 10 ಮತ ಪಡೆದು ಜಯಗಳಿಸಿ ಉಪಾ ಧ್ಯಕ್ಷರಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ಮಂಜುನಾಥ್ ಕೇವಲ 1 ಮತ ಪಡೆದು ಪರಾಭವಗೊಂಡರು. ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಸಾದ್ ಘೋಷಿಸಿದರು.

ನೂತನ ಅಧ್ಯಕ್ಷ ಶಿವರಾಜು ಮಾತನಾಡಿ, ಸಂಘದ ಎಲ್ಲಾ ಸದಸ್ಯರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು, ಎಸ್ಸಿ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರುದ್ರೇಶ್, ರಾಮನಾಥ್, ಮುಖಂಡ ಶಿವಕುಮಾರ್, ಭದ್ರಸ್ವಾಮಿ, ನಿರ್ದೇಶಕರಾದ ರಾಜು, ವೆಂಕಟಯ್ಯ, ಸುಬ್ಬಯ್ಯ, ಮಹದೇವಯ್ಯ, ಚನ್ನಯ್ಯ, ಗೌರಮ್ಮ, ರತ್ನಮ್ಮ, ಪುಟ್ಟನಾಯಕ ಸೇರಿದಂತೆ ಇನ್ನಿತರರಿದ್ದರು.

ಗಾವಡಗೆರೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಗಾವಡಗೆರೆ ಆರೋಗ್ಯ ಕೇಂದ್ರದಲ್ಲಿ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಹುಣಸೂರು/ಗಾವಡಗೆರೆ, ಫೆ.5– ಗ್ರಾಮೀಣ ಭಾಗದಲ್ಲಿ ಸತ್ಯ ಎಂ.ಎ.ಎಸ್.ಫೌಂಡೇಶನ್ ಉಚಿತ ಕಣ್ಣಿನ ತಪಾಸಣಾ ಶಿಬಿರ ಏರ್ಪಡಿಸಿರುವುದು ಶ್ಲಾಘನೀಯ ಎಂದು ಗಾವಡಗೆರೆ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಡಾ.ಚೇತನಾ ತಿಳಿಸಿದರು.


ತಾಲೂಕಿನ ಗಾವಡಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೋಮವಾರ ಸತ್ಯ ಎಂ.ಎ.ಎಸ್ ಫೌಂಡೇಶನ್ ಹುಣಸೂರು (ರಿ.), ಹುಣಸೂರು ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಮೈಸೂರು, ಜಿಲ್ಲಾ ನೇತ್ರ ಸಂಚಾರಿ ನಿಯಂತ್ರಣ ಘಟಕ ಕೆ.ಆರ್.ಆಸ್ಪತ್ರೆ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಕಣ್ಣು ಮಾನವನ ಅತ್ಯಂತ ಪ್ರಮುಖ ಅಂಗವಾಗಿದೆ. ಪ್ರತಿಯೊಬ್ಬರೂ ಕಣ್ಣುಗಳನ್ನು ಕಡ್ಡಾಯವಾಗಿ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು.

ಕೆ.ಆರ್.ಆಸ್ಪತ್ರೆ ನೇತ್ರ ಪರೀಕ್ಷಕ ಡಾ.ಮಂಜುನಾಥ್ ಮಾತನಾಡಿ, ಸತ್ಯ ಎಂ.ಎ.ಎಸ್ ಫೌಂಡೇಶನ್ ಕಳೆದ 15 ವರ್ಷಗಳಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸುತ್ತಿದ್ದು, ಸುಮಾರು ಐದಾರು ಸಾವಿರ ಮಂದಿ ತಮ್ಮ ಕಣ್ಣುಗಳನ್ನು ತಪಾಸಣೆ ಮಾಡಿಸಿಕೊಂಡಿದ್ದಾರೆ. ಇಂತಹ ತಪಾಸಣಾ ಶಿಬಿರಗಳಿಂದ ಗ್ರಾಮೀಣ ಜನರಿಗೆ ಅನುಕೂಲವಾಗಲಿದೆ. ಫೌಂಡೇಶನ್‌ನಿಂದ ಈ ರೀತಿಯ ಸಾಮಾಜಿಕ ಕಳಕಳಿಯುಳ್ಳ ಸೇವೆ ಜರುಗಲಿ ಎಂದು ಆಶಿಸಿದರು.

ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿ, ಶಿಬಿರದಲ್ಲಿ 60 ಮಂದಿ ತಪಾಸಣೆ ಗೊಳಪಟ್ಟರು. ಈ ಪೈಕಿ 20 ಮಂದಿಯನ್ನು ಶಸ್ತ್ರಚಿಕಿತ್ಸೆ ಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ. ನಮ್ಮ ಸಂಸ್ಥೆಯಿಂದ ಈ ಹಿಂದೆಯೂ ಹಲವು ಬಾರಿ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಮುಂದೆಯೂ ಆಯೋಜಿಸಲಾಗುವುದು. ರೈತರು, ಸಾರ್ವಜನಿಕರು ತಮ್ಮ ಯಾವುದೇ ಸಮಸ್ಯೆಗಳಿದ್ದಲ್ಲಿ ನಮ್ಮ ಸತ್ಯ ಫೌಂಡೇಶನ್ ಸಂಪರ್ಕಿಸಬಹುದು ಎಂದರು. ಈ ವೇಳೆ ಕಟ್ಟೆಮಳಲವಾಡಿ ಆರೋಗ್ಯ ನಿರೀಕ್ಷಕ ಚೇತನ್ ಪವಾರ್, ಆರೋಗ್ಯ ಸುರಕ್ಷಣಾಧಿಕಾರಿ ಗಿರಿಜಾ, ಗಾವಡಗೆರೆ ಪ್ರಾ.ಆ.ಕೇಂದ್ರದ ಆರೋಗ್ಯ ನಿರೀಕ್ಷಣಾ ಸಹಾಯಕ ಶ್ರೀನಿವಾಸರಾವ್ ಶಿಂಧೆ, ಆರೋಗ್ಯ ಸಹಾಯಕಿ ಬೇಬಿ, ಸಂಚಾಲಕ ಪ್ರಕಾಶ್ ಇನ್ನಿತರರಿದ್ದರು.

ಪದ್ಮಶ್ರೀ ಪುರಸ್ಕೃತ ಸೋಮಣ್ಣರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ

ಸ್ವತಂತ್ರ ಪಿಯು ಕಾಲೇಜು ಸಿಡಿಸಿ ಅಧ್ಯಕ್ಷ ಎಸ್.ಎನ್.ಮೋಹನ್‌ಕುಮಾರ್



ಪದ್ಮಶ್ರೀ ಪುರಸ್ಕೃತ ಸೋಮಣ್ಣ ಅವರನ್ನು ಅಭಿನಂದಿಸಲಾಯಿತು.

ಸರಗೂರು, ಫೆ.5– ಬುಡಕಟ್ಟು ಸಮುದಾಯಗಳ ಜನರ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಆದಿವಾಸಿ ಸೋಮಣ್ಣ ಅವರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಕಾಲೇಜು ಸಿಡಿಸಿ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್ ಅಭಿಪ್ರಾಯಪಟ್ಟರು.

ತಾಲೂಕಿನ ತುಂಬಸೋಗೆ ಎಂಎಂಕೆ ಸ್ವತಂತ್ರ ಪಿಯು ಕಾಲೇಜಿನಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಆದಿವಾಸಿ ಸೋಮಣ್ಣ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಸೋಮಣ್ಣನವರು ಜೇನುಕುರುಬ ಬುಡಕಟ್ಟು ಸಮುದಾಯದ ಹಕ್ಕುಗಳಿಗಾಗಿ ಕಳೆದ 4 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅರಣ್ಯದಲ್ಲಿ ವಾಸಿಸುವ ಬುಡಕಟ್ಟು ಸಮುದಾಯದವರ ಸುರಕ್ಷತೆ ಬಗ್ಗೆ ಇವರು ನಿರಂತರವಾಗಿ ಸರ್ಕಾರದ ಗಮನ ಸೆಳೆದಿದ್ದರಿಂದ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಶ್ರೀ ನೀಡಿ ಗೌರವಿಸಲಾಗಿದೆ ಎಂದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸೋಮಣ್ಣ ಸನ್ಮಾನ ಸ್ವೀಕರಿಸಿ ಮಾತನಾಡಿ, ವಿದ್ಯಾರ್ಥಿಗಳು ಪ್ರಸ್ತುತ ತಲೆ ತಗ್ಗಿಸಿ ಎಡೆಬಿಡದೆ ಮೊಬೈಲ್ ನೋಡಿದರೆ ಅದು ಮುಂದೆ ಜೀವನದಲ್ಲಿ ತಲೆ ತಗ್ಗಿಸುವ ಕೆಲಸ ಮಾಡುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಮೊಬೈಲ್ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಹರಿಸಬೇಕು. ಅಲ್ಲದೇ ಉತ್ತಮ ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೇರಿ ಬಡವರಿಗೆ ಸಹಾಯ ಮಾಡುವ ಮೂಲಕ ಬಡತನ ಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು. ಈ ವೇಳೆ ಕಾರ್ಯದರ್ಶಿ ಅಶೋಕ್, ಸಕಲೇಶ್, ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ಉಪನ್ಯಾಸಕರಾದ ಜಾನ್, ಮಹಾದೇವಿ, ಸಿದ್ದಾರ್ಥ, ಸಿದ್ದರಾಜು, ಪ್ರಸನ್ನ, ಮೋಹನ್, ಮನೋಜ್, ಕನ್ಯಾಕುಮಾರಿ, ಅರ್ಪಿತ, ರಜು, ವಿರೂಪಾಕ್ಷ ಸೇರಿದಂತೆ ವಿದ್ಯಾರ್ಥಿಗಳಿದ್ದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ



ಬೆಟ್ಟದಪುರ, ಫೆ.5– ಇಲ್ಲಿಗೆ ಸಮೀಪದ ಕಿತ್ತೂರು ಗ್ರಾಮದ ಕಿರಣ್ ಜೈರಾಮೇಗೌಡ ಅವರನ್ನು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆದೇಶ ಹೊರಡಿಸಿದ್ದಾರೆ. ನೂತನ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕಿರಣ್ ಜೈರಾಮೇಗೌಡರನ್ನು ಮುಖಂಡರಾದ ಎಂ.ಎಂ.ರಾಜೇಗೌಡ, ಸೋಮಶೇಖರ್, ಎಸ್.ಮಲ್ಲೇಶ್, ಸುನೀಲ್ ಕುಮಾರ್, ಅರುಣ್ ರಾಜೇ ಅರಸ್, ಮೈಲಾರಿಗೌಡ ಅಭಿನಂದಿಸಿದ್ದಾರೆ.

ಕಂದಾಯ ಅದಾಲತ್ ಮೂಲಕ ತ್ವರಿತ ಸೇವೆ

ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್



ಕಂದಾಯ ಅದಾಲತ್ ಅನ್ನು ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಉದ್ಘಾಟಿಸಿದರು.

ತಿ.ನರಸೀಪುರ, ಫೆ.5– ಕಂದಾಯ ಅದಾಲತ್ ಮೂಲಕ ಸಾರ್ವಜನಿಕರು ಇಲಾಖೆಗೆ ಸಂಬಂಧಿಸಿದ ವಿವಿಧ ಸೇವೆಗಳನ್ನು ತ್ವರಿತವಾಗಿ ಪಡೆಯಬಹುದು ಎಂದು ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಸೋಮವಾರ ನಡೆದ ಕಂದಾಯ ಅದಾಲತ್ ಉದ್ಘಾಟಿಸಿ ಮಾತನಾಡಿದ ಅವರು, ಕಂದಾಯ ಅದಾಲತ್‌ನಲ್ಲಿ ಸಾರ್ವಜನಿಕರಿಗೆ ತ್ವರಿತ ಸೇವೆ ಸಿಗುವುದರಿಂದ ಅನಗತ್ಯವಾಗಿ ಕಚೇರಿಗೆ ಅಲೆಯುವುದು ತಪ್ಪುತ್ತದೆ. ಅಲ್ಲದೇ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಮುಖಾಮುಖಿಯಾಗುವುದರಿಂದ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಾರ್ವಜನಿಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಂದಾಯ ಇಲಾಖೆಯ ಕಾರ್ಯ ಒತ್ತಡದಿಂದ ಅಧಿಕಾರಿಗಳು ಸಕಾಲಕ್ಕೆ ಜನರಿಗೆ ಸ್ಪಂದಿಸಲು ಸಾಧ್ಯವಾಗದ ಕಾರಣ ಅದಾಲತ್ ಮೂಲಕ ಅರ್ಜಿಗಳ ವಿಲೇವಾರಿ ಮಾಡಲಾಗುತ್ತಿದೆ. ಕೆಲವೊಂದು ಖಾತೆಗಳು 3 ಅಥವಾ 4ನೇ ತಲೆಮಾರಿನ ಹೆಸರಿನಲ್ಲಿರುತ್ತದೆ. ಇದನ್ನು ಬದಲಾವಣೆ ಮಾಡಲು ಮರಣ ಪ್ರಮಾಣ ಪತ್ರ ಅವಶ್ಯಕ. ಅದು ಇಲ್ಲದಿದ್ದರೇ ನಮ್ಮ ಅಧಿಕಾರಿಗಳು ವಾಸಸ್ಥಳ ಮಹಜರು ಮಾಡುತ್ತಾರೆ. ಅಲ್ಲದೇ ಅದಕ್ಕೆ ಸಂಬಂಧಿಸಿದಂತೆ ಅಫಿಡವಿಟ್ ನೀಡಿದರೆ ಪೌತಿ ಖಾತೆ ಬದಲಾವಣೆ ಮಾಡಿ ಕೊಡಲಾಗುತ್ತದೆ. ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿ ಅದಾಲತ್ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು. ಅದಾಲತ್ ನಿಮ್ಮನ್ನು ಪ್ರೇರೇಪಿಸಲು ತುರ್ತಾಗಿ ಆಯೋಜಿಸಿರುವ ಕಾರ್ಯಕ್ರಮ. ಇದು ನಿರಂತರ ಪ್ರಕ್ರಿಯೆ ಎಂದ ಅವರು, ತಾಲೂಕಿನಲ್ಲಿ 25 ಸಾವಿರ ಪೌತಿ ಖಾತೆಗಳಿವೆ. ಅದರಲ್ಲಿ ಕೆಲವು ತಕರಾರು, ಮತ್ತೆ ಕೆಲವು ನ್ಯಾಯಾಲಯದಲ್ಲಿವೆ. ಅಂತಹ ಖಾತೆಗಳನ್ನು ಪರಿಶೀಲಿಸಲು ಸಾಧ್ಯವಾದರೆ ಅನುಕೂಲ ಕಲ್ಪಿಸಿ ಕೊಡಲಾಗುವುದು ಎಂದರು. ಈ ವೇಳೆ 2023 ನ.6 ರಿಂದ ನ.22ರವರೆಗೆ ಸಲ್ಲಿಸಿದ್ದ 374 ಅರ್ಜಿಗಳ ಪೈಕಿ ಅರ್ಹ 350 ಅರ್ಜಿಗಳನ್ನು ಪರಿಶೀಲಿಸಿ ಸ್ಥಳದಲ್ಲೇ ಪೌತಿ ಖಾತೆ ಹಾಗೂ ತಿದ್ದುಪಡಿ ಮಾಡಲು ತಹಸೀಲ್ದಾರ್ ಆದೇಶಿಸಿದರು. ಕಸಬಾ ಹೋಬಳಿಯ 45, ತಲಕಾಡಿನ 106, ಬನ್ನೂರು ಪುರಸಭೆ ವ್ಯಾಪ್ತಿಯ 100, ಮೂಗೂರು ಗ್ರಾಮದ 45, ಸೋಸಲೆಯ 54 ಅರ್ಜಿಗಳು ಸೇರಿದಂತೆ 350 ಅರ್ಜಿಗಳನ್ನು ವಿಲೇವಾರಿ ಮಾಡಲಾಯಿತು. ಕಂದಾಯ ಅದಾಲತ್‌ನಿಂದ 1250 ಮಂದಿ ಫಲಾನುಭವಿಗಳು ಪ್ರಯೋಜನ ಪಡೆದುಕೊಂಡರು.

ಈ ವೇಳೆ ಗ್ರೇಡ್–2 ತಹಸೀಲ್ದಾರ್ ರಾಜಕಾಂತ್, ಕಸಬಾ ರೆವಿನ್ಯೂ ಇನ್ಸ್‌ಪೆಕ್ಟರ್ ಮಹೇಂದ್ರ, ಟಿ.ಪಿ.ನಾಗೇಶ್, ಚೆಲುವರಾಜು (ಎಫ್‌ಡಿಎ), ಪ್ರಥಮ ದರ್ಜೆ ಗುಮಾಸ್ತರಾದ ಮಂಜುಳಾ, ಗ್ರಾಮಲೆಕ್ಕಿಗರಾದ ಸೋಮಶೇಖರ್, ಆನಂದ್, ಪ್ರಮೋದ್, ಶ್ರೀನಿವಾಸ್ ಮೂರ್ತಿ ಮತ್ತಿತರರಿದ್ದರು.

ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಅಧ್ಯಕ್ಷರಾಗಿ

ಶಾಸಕ ಅನಿಲ್ ಚಿಕ್ಕಮಾದು ಅಧಿಕಾರ ಸ್ವೀಕಾರ



ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ನೂತನ ಅಧ್ಯಕ್ಷ ಅನಿಲ್ ಚಿಕ್ಕಮಾದು ಅವರನ್ನು ಮುಖಂಡರು ಅಭಿನಂದಿಸಿದರು.

ಹೆಚ್.ಡಿ.ಕೋಟೆ, ಫೆ.5– ಕ್ಷೇತ್ರದ ಜನತೆಗೆ ನಾನು ಎಂದೆಂದಿಗೂ ಚಿರಋಣಿಯಾಗಿರುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಬೆಂಗಳೂರಿನ ಖನಿಜ ಭವನದಲ್ಲಿ ಸೋಮವಾರ ಪತ್ನಿ ಸೌಮ್ಯ, ಮಕ್ಕಳು, ತಾಯಿ ನಾಗಮ್ಮ ಹಾಗೂ ಕ್ಷೇತ್ರದ ಮುಖಂಡರ ಸಮ್ಮುಖದಲ್ಲಿ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ನನ್ನ ತಂದೆ, ಮಾಜಿ ಶಾಸಕ ದಿ.ಚಿಕ್ಕಮಾದು ಅವರ ಮೇಲಿನ ಪ್ರೀತಿ, ವಿಶ್ವಾಸ, ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ತಾಲೂಕಿನ ಜನತೆ ಚುನಾವಣೆಯಲ್ಲಿ ಗೆಲ್ಲಿಸಿ ನನ್ನನ್ನು ಶಾಸಕನನ್ನಾಗಿ ಆಯ್ಕೆ ಮಾಡಿದ್ದಾರೆ. ನನ್ನ ಗುರುಗಳಾದ ದಿ.ಮಾಜಿ ಶಾಸಕ ಆರ್.ಧ್ರುವನಾರಾಯಣ್ ಅವರ ಮಾರ್ಗದರ್ಶನದಲ್ಲಿ ಮೊದಲ ಬಾರಿ ಶಾಸಕನಾಗಿ ಆಯ್ಕೆಯಾಗಿ ಕಳೆದ 5 ವರ್ಷ ನಮ್ಮ ಸರ್ಕಾರ ಅಧಿಕಾರದಲ್ಲಿ ಇಲ್ಲದಿದ್ದರೂ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ. ಇದೀಗ 2ನೇ ಬಾರಿಗೆ ಶಾಸಕನಾಗಿದ್ದು, ಪ್ರಸ್ತುತ ನಮ್ಮ ಸರ್ಕಾರ ಅಧಿಕಾರದಲ್ಲಿ ಇರುವುದರಿಂದ ಹೊಸ ಯೋಜನೆಗಳನ್ನು ಜಾರಿಗೊಳಿಸಿ ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ಕ್ಷೇತ್ರದ ಜನತೆ ಸೇವೆ ಮಾಡುತ್ತೇನೆ ಎಂದರು.

ಸರ್ಕಾರ ನನ್ನನ್ನು ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಅಧ್ಯಕ್ಷನಾಗಿ ನೇಮಿಸಿದ್ದು, ಸಂಸ್ಥೆಯಲ್ಲಿ ಹೊಸ ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ವಿಶೇಷವಾಗಿ ಸಾವಯವ ಕೃಷಿಗೆ ಉತ್ತೇಜನ ನೀಡಲು ರೆಸಾರ್ಟ್‌ಗೆ ಬರುವ ಪ್ರವಾಸಿಗರಿಗೆ ಬೆಳಗ್ಗೆ ಉಪಾಹಾರವಾಗಿ ರಾಗಿ ಗಂಜಿ, ರಾಗಿ ಅಂಬಲಿ, ಮಿಲೆಟ್ಸ್‌ಗಳನ್ನು ನೀಡುವ ಮೂಲಕ ಸಿರಿ ಧಾನ್ಯದ ಆಹಾರ ಪರಿಚಯಿಸುವ ಕೆಲಸ ಮಾಡುತ್ತೇನೆ. ಸಿರಿಧಾನ್ಯ ಸೇವನೆಯಿಂದ ದೇಹಕ್ಕೆ ಶಕ್ತಿ ಸಿಗಲಿದ್ದು, ಆ ಮೂಲಕ ಸಿರಿ ಧಾನ್ಯ ಬೆಳೆಯುವ ರಾಜ್ಯದ ರೈತರನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎಂದರು. ಇದೇ ವೇಳೆ ಶಾಸಕ ಅನಿಲ್ ಚಿಕ್ಕಮಾದು ಡಾ. ಅಂಬೇಡ್ಕರ್, ಬಸವಣ್ಣ, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬಳಿಕ ಹೆಚ್.ಡಿ.ಕೋಟೆಯಿಂದ ಆಗಮಿಸಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿದರು.

ಈ ವೇಳೆ ಜೈ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಸಿಂಡಿಕೇಟ್ ಸದಸ್ಯ ನಾಗರಾಜ್, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ಮೈಮುಲ್ ನಿರ್ದೇಶಕ ಈರೇಗೌಡ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಮುಖಂಡರುಗಳಾದ ಪ್ರದೀಪ, ಶಂಭುಲಿಂಗನಾಯಕ, ದೊಡ್ಡಸಿದ್ದು, ರಾಜು, ಪರಶಿವಮೂರ್ತಿ, ರಾಜನಾಯಕ, ಶಿವಮಲ್ಲಪ್ಪ ರಾಜೇಗೌಡ, ಸಣ್ಣಕುಮಾರ್, ಬಾಲಯ್ಯ, ಶ್ರೀನಿವಾಸ್, ಹೇಮಂತ, ಸಿದ್ದರಾಮ, ರಾಜು ಇನ್ನಿತರರಿದ್ದರು.

ನಾನು ಯಾವ ನಿಗಮ ಮಂಡಳಿಗೂ ಆಸೆಪಟ್ಟವನಲ್ಲ. ಬದಲಿಗೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ನನ್ನನ್ನು ಗುರುತಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರ್ನಾಟಕ ರಾಜ್ಯ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ.

- ಅನಿಲ್ ಚಿಕ್ಕಮಾದು, ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಅಧ್ಯಕ್ಷ.

ಲೋಕಸಭೆ ಚುನಾವಣೆ: ಜೆಡಿಎಸ್ ಉಸ್ತುವಾರಿ, ಸಹ ಉಸ್ತುವಾರಿಗಳ ನೇಮಕ



ಜಿ.ಟಿ. ದೇವೇಗೌಡ | ಎ. ಮಂಜು | ಅಶ್ವಿನ್‌ಕುಮಾರ್ | ಸಾ.ರಾ.ಮಹೇಶ್ | ಜಿ.ಡಿ. ಹರೀಶ್‌ಗೌಡ



ಕೆ. ಮಹದೇವ್ | ಎಂ.ಆರ್. ಮಂಜುನಾಥ್ | ಹೆಚ್.ಡಿ. ರೇವಣ್ಣ | ಹೆಚ್.ಕೆ. ಕುಮಾರಸ್ವಾಮಿ | ಕೆ.ಎಸ್. ಲಿಂಗೇಶ್

ಬೆಂಗಳೂರು, ಫೆ.5– ಲೋಕಸಭೆ ಚುನಾವಣೆಗಾಗಿ ಮಾಜಿ ಮುಖ್ಯಮಂತ್ರಿಗಳೂ ಆದ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಅವರು ಎಲ್ಲಾ 28 ಕ್ಷೇತ್ರಗಳಿಗೆ ಉಸ್ತುವಾರಿ ಹಾಗೂ ಸಹ ಉಸ್ತುವಾರಿಗಳನ್ನು ನೇಮಕ ಮಾಡಿದ್ದಾರೆ.

ಮೈಸೂರು–ಕೊಡಗು ಕ್ಷೇತ್ರದ ಉಸ್ತುವಾರಿಯಾಗಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಸಹ ಉಸ್ತುವಾರಿಗಳಾಗಿ ಶಾಸಕ ಎ.ಮಂಜು ಮತ್ತು ಮಾಜಿ ಶಾಸಕ ಅಶ್ವಿನ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಉಸ್ತುವಾರಿಯಾಗಿ ಮಾಜಿ ಸಚಿವ ಸಾ.ರಾ. ಮಹೇಶ್ ಮತ್ತು ಸಹ ಉಸ್ತುವಾರಿಯಾಗಿ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಅವರನ್ನು ನೇಮಿಸಲಾಗಿದೆ.

ಚಾಮರಾಜನಗರ ಮೀಸಲು ಕ್ಷೇತ್ರದ ಉಸ್ತುವಾರಿಯಾಗಿ ಮಾಜಿ ಶಾಸಕ ಕೆ.ಮಹದೇವ್ ಮತ್ತು ಸಹ ಉಸ್ತುವಾರಿಗಳಾಗಿ ಹನೂರು ಶಾಸಕ ಎಂ.ಆರ್.ಮಂಜುನಾಥ್, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಪುಟ್ಟಸ್ವಾಮಿ ಅವರನ್ನು ನೇಮಿಸಲಾಗಿದೆ. ಹಾಸನ ಲೋಕಸಭಾ ಕ್ಷೇತ್ರದ ಉಸ್ತುವಾರಿಯಾಗಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮತ್ತು ಸಹ ಉಸ್ತುವಾರಿಗಳಾಗಿ ಹೆಚ್.ಕೆ.ಕುಮಾರಸ್ವಾಮಿ, ಕೆ.ಎಸ್.ಲಿಂಗೇಶ್ ಅವರನ್ನು ನೇಮಕ ಮಾಡಲಾಗಿದೆ.

ಜೆಡಿಎಸ್‌ಗೆ ಸಾ.ರಾ.ಮಹೇಶ್ ಸೇರಿ ಐವರು ಕಾರ್ಯಾಧ್ಯಕ್ಷರು, ಪದಾಧಿಕಾರಿಗಳ ನೇಮಕ

ಬೆಂಗಳೂರು, ಫೆ.5– ಜೆಡಿಎಸ್ ರಾಜ್ಯ ಕಾರ್ಯಕಾರಿ ಸಮಿತಿಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಕಾರ್ಯಾಧ್ಯಕ್ಷರಾಗಿ ಮಾಜಿ ಸಚಿವರಾದ ಸಾ.ರಾ.ಮಹೇಶ್, ಹನುಮಂತಪ್ಪ ವೈ.ಆಲ್ಕೋಡ್, ಮಾಜಿ ಶಾಸಕರಾದ ಸಿ.ಬಿ.ಸುರೇಶ್‌ಬಾಬು, ಭೀಮನಗೌಡ ಬಸವನಗೌಡ ಪಾಟೀಲ್ (ರಾಜುಗೌಡ), ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ, ಹಿರಿಯ ಉಪಾಧ್ಯಕ್ಷರಾಗಿ ಮಾಜಿ ಶಾಸಕರಾದ ಡಾ.ಶ್ರೀನಿವಾಸಮೂರ್ತಿ, ರವೀಂದ್ರ ಶ್ರೀಕಂಠಯ್ಯ, ಸೋಮಣ್ಣ ಗೌಡ ಪಾಟೀಲ್ ಹಾಗೂ ಜ್ಯೋತಿ ಪ್ರಕಾಶ್ ಮಿರ್ಜಿ, ಉಪಾಧ್ಯಕ್ಷರಾಗಿ ಶಾಸಕರಾದ ಟಿ.ಎ.ಶರವಣ, ಕರೆಮ್ಮ ಜಿ.ನಾಯಕ್, ಮಾಜಿ ಶಾಸಕರಾದ ಕೆ.ಎಂ.ತಿಮ್ಮರಾಯಪ್ಪ, ರಾಜ ವೆಂಕಟಪ್ಪ ನಾಯಕದೊರೆ, ಚೌಡರೆಡ್ಡಿತೂಪಲ್ಲಿ, ಕೆ.ಬಿ.ಪ್ರಸನ್ನ ಕುಮಾರ್, ಮುಖಂಡ ಸುನೀತ ಚೌಹ್ಹಾಣ್ ನೇಮಕಗೊಂಡಿದ್ದಾರೆ.

ಮಹಾಪ್ರಧಾನ ಕಾರ್ಯದರ್ಶಿಯಾಗಿ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಖಜಾಂಚಿಯಾಗಿ ಶಾಸಕ ಬಿ.ಎನ್.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾಗಿ ಎ.ಪಿ.ರಂಗನಾಥ್, ಆರ್.ಪ್ರಕಾಶ್, ಡಾ.ಸೈಯದ್ ರೋಷನ್ ಅಬ್ಬಾಸ್, ರೆಹಮತ್ ಉಲ್ಲಾಖಾನ್, ಸುಧಾಕರ್ ಲಾಲ್, ಶಿವಕುಮಾರ್ ನಾಟೇಕರ್, ಶಾರದಾ ಅಪ್ಪಾಜಿಗೌಡ, ರೂತ್ ಮನೋರಮಾ, ಮಲ್ಲೇಶಬಾಬು, ವೀರಭದ್ರಪ್ಪ ಹಾಲರವಿ, ಕಾರ್ಯದರ್ಶಿಗಳಾಗಿ ಮಹಾಂತಯ್ಯಮಠ, ಶಂಸಿ ತಬ್ರಾಜ್, ಐಲಿನ್ ಜಾನ್ ಮಠಪತಿ, ಬಿ.ಕಾಂತರಾಜ್, ಡಾ.ವಿಜಯಕುಮಾರ್, ಡಾ.ಶೀಲಾನಾಯಕ್, ರೋಷನ್ ಬಾವಾಜಿ, ಚಂದ್ರಕಾಂತ್‌ಶೇಕಾ, ಕನ್ಯಕುಮಾರಿ ಹಾಗೂ ಸಿದ್ದಬಸಪ್ಪ ಯಾದವ್ ಅವರನ್ನು ನೇಮಿಸಿ, ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಆದೇಶಿಸಿದ್ದಾರೆ.

ಜಮ್ಮು–ಕಾಶ್ಮೀರಕ್ಕೆ 1.18 ಲಕ್ಷ ಕೋಟಿಯ ಮಧ್ಯಂತರ ಬಜೆಟ್


ನವದೆಹಲಿ, ಫೆ.5– ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರಕ್ಕೆ 1.18 ಲಕ್ಷ ಕೋಟಿಯ 2024–25ನೇ ಸಾಲಿನ ಮಧ್ಯಂತರ ಬಜೆಟ್ ಅನ್ನು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಮಂಡಿಸಿದ್ದಾರೆ.



ಜಮ್ಮು ಮತ್ತು ಕಾಶ್ಮೀರಕ್ಕೆ 20,760 ಕೊರತೆ ಬಜೆಟ್ ಮಂಡಿಸಿದ್ದರೂ, ರಾಜ್ಯದ ಜಿಡಿಪಿ ಶೇ.7.5ರ ದರದಲ್ಲಿ ಬೆಳವಣಿಗೆಯಾಗುವ ನಿರೀಕ್ಷೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಆರ್ಥಿಕ ವರ್ಷದ ಬಂಡವಾಳ ವೆಚ್ಚ 38,566 ಕೋಟಿ ಎಂದು ಅಂದಾಜಿಸಿದ್ದು, ಇದು ಜಿಎಸ್‌ಡಿಪಿಯ ಶೇ.14.64ರಷ್ಟಿದೆ ಎಂದಿದ್ದಾರೆ. ತೆರಿಗೆ ಹಾಗೂ ಇನ್ನಿತರ ಮೂಲಗಳಿಂದ ಒಟ್ಟು 97,861 ಸಂಗ್ರಹವಾಗಲಿದೆ ಎಂದು ಅಂದಾಜಿಸಿದ್ದಾರೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಕೇಂದ್ರೀಕರಣದ ಆಡಳಿತ, ಅಂತರ್ಗತ ಅಭಿವೃದ್ಧಿ, ಆದಾಯ ಮೂಲಗಳ ಉತ್ತೇಜನಕ್ಕೆ 2019ರಲ್ಲಿ ಐತಿಹಾಸಿಕ ಕ್ರಮ ಕೈಗೊಳ್ಳಲಾಗಿದೆ. ಆ ಮೂಲಕ ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಜತೆಗೆ ಭದ್ರತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲೂ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮ ಮತ್ತು ಶೂನ್ಯ ಸಹಿಷ್ಣುತೆ ಹೊಂದುವ ನೀತಿಯನ್ನು ಸರ್ಕಾರ ಅಳವಡಿಸಿಕೊಂಡಿದೆ. ಇದೆಲ್ಲದರ ಪರಿಣಾಮ ಕಣಿವೆ ರಾಜ್ಯದಲ್ಲಿ ಸುರಕ್ಷತೆ ಹೆಚ್ಚಿದೆ' ಎಂದು ತಮ್ಮ ಬಜೆಟ್ ಮಂಡನೆ ಸಂದರ್ಭದಲ್ಲಿ ಹೇಳಿದ್ದಾರೆ.

ಸರ್ಕಾರಿ ಕಚೇರಿ, ಶಾಲಾ–ಕಾಲೇಜುಗಳಲ್ಲಿ ಸರ್ವಜ್ಞ ಜಯಂತಿ ಆಚರಣೆಗೆ ಮನವಿ

ಮೈಸೂರು, ಫೆ. 5– ಸರ್ಕಾರಿ ಕಚೇರಿ, ಶಾಲಾ–ಕಾಲೇಜುಗಳಲ್ಲಿ ಸರ್ವಜ್ಞ ಜಯಂತಿಯನ್ನು ಕಡ್ಡಾಯವಾಗಿ ಆಚರಿಸುವಂತೆ ಆದೇಶ ನೀಡಬೇಕೆಂದು ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆಯ ಪದಾಧಿಕಾರಿಗಳು ಡಿಸಿ ಕಚೇರಿಗೆ ಭೇಟಿ ನೀಡಿ ಜಿಲ್ಲಾಧಿಕಾರಿಯವರ ಆಪ್ತ ಸಹಾಯಕ ಬಿ ಶ್ರೀನಿವಾಸ್ ರಾಜ ಅರಸ್ ಅವರಿಗೆ ಮನವಿ ಸಲ್ಲಿಸಿದರು.



ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆಯ ಅಧ್ಯಕ್ಷ ಮಾತನಾಡಿ, ರಾಜ್ಯ ಸರ್ಕಾರ ಕಳೆದ ಹಲವು ವರ್ಷಗಳಿಂದ ಫೆಬ್ರವರಿ 20ರಂದು ಸಂತ ಶ್ರೇಷ್ಠ, ತ್ರಿಪದಿ, ಆಡು ಭಾಷೆಯ ಶ್ರೇಷ್ಠ ಕವಿ ಎಂದೇ ಪ್ರಸಿದ್ಧರಾಗಿರುವ ಸರ್ವಜ್ಞ ಸಂತರ ಜನ್ಮದಿನಾಚರಣೆಯನ್ನು ಜಿಲ್ಲಾಡಳಿತದಿಂದ ಸರ್ಕಾರದ ಸುತ್ತೋಲೆ ಮುಖೇನ ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ. ತ್ರಿಪದಿ ಕವಿಯ, ಜನ್ಮದಿನಾಚರಣೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ಜೊತೆಗೆ ನಮ್ಮ ಮುಂದಿನ ಪೀಳಿಗೆಗೆ ಇವರ ಪರಿಚಯ ಬಹಳ ಅವಶ್ಯಕವಾಗಿದೆ. ಹಾಗಾಗಿ ಎಲ್ಲಾ ಸರ್ಕಾರಿ ಕಚೇರಿ ಮತ್ತು ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಆಚರಣೆ ಮಾಡುವಂತೆ ಸುತ್ತೋಲೆ ಹೊರಡಿಸಬೇಕಾಗಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಯುವ ಮುಖಂಡರಾದ ಯದುನಂದನ. ಜಿ, ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ನಾಗರಾಜ್, ಶಂಕರ್, ಮಹದೇವಸ್ವಾಮಿ ಇನ್ನಿತರರು ಹಾಜರಿದ್ದರು.

ಇ–ತ್ಯಾಜ್ಯ ಇಂದು ಬಹುಮುಖ್ಯ ಸಮಸ್ಯೆ

ಮೈಸೂರು, ಫೆ. 5– ಇ–ತ್ಯಾಜ್ಯ ಇಂದು ಪ್ರಪಂಚದಲ್ಲಿ ಬಹುಮುಖ್ಯವಾದ ಸಮಸ್ಯೆಯಾಗಿ ಪರಿಣಮಿಸಿದೆ. ಹಾಗಾಗಿ ಇದರ ಬಗ್ಗೆ ಕಾಳಜಿ ವಹಿಸಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಿದರೆ ಮುಂದೆ ಬಹುದೊಡ್ಡ ಅನಾಹುತವನ್ನು ತಪ್ಪಿಸಬಹುದು ಎಂದು ಲಯನ್ಸ್ ಜಿಲ್ಲೆ 317 ಜಿ ನ ಸಂಪುಟ ಕಾರ್ಯದರ್ಶಿ ಲಯನ್ ಟಿ.ಹೆಚ್ . ವೆಂಕಟೇಶ್ ಹೇಳಿದರು. ಅವರು ಲಯನ್ಸ್ ಕ್ಲಬ್ ಆಫ್ ಮೈಸೂರ್ ಅಂಬಾಸಿಡರಸ್ ಮತ್ತು ಜಿಲ್ಲಾ ಅಧ್ಯಕ್ಷರು ಇ–ತ್ಯಾಜ್ಯ ವತಿಯಿಂದ ಹಮ್ಮಿಕೊಂಡಿದ್ದ ಇ–ತ್ಯಾಜ್ಯ ಸಂಗ್ರಹಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇ–ತ್ಯಾಜ್ಯ ಜಿಲ್ಲಾ ಅಧ್ಯಕ್ಷ ಲಯನ್ ಮಕಾಳ ಶಿವಕುಮಾರ್ ಮಾತನಾಡಿ, ಪ್ರತಿವಾರ ಮೈಸೂರಿನ ವಿವಿಧ ಜಾಗಗಳಲ್ಲಿ ಇ– ತ್ಯಾಜ್ಯವನ್ನು ಸಂಗ್ರಹಿಸಲಾಗುವುದು ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷ ಲಯನ್ ಹೆಚ್ . ಸಿ ಕಾಂತರಾಜು, ಕಾರ್ಯದರ್ಶಿ ಲಯನ್ ಸಿ.ಆರ್ ದಿನೇಶ್, ಖಜಾಂಚಿ ಕೆ.ಟಿ. ವಿಷ್ಣು ವಿ.ಶ್ರೀಧರ್, ಲಯನ್ ಕೆ ಆರ್ ಭಾಸ್ಕರಾನಂದ, ಹೆಚ್.ಕೆ.ಪ್ರಸನ್ನ, ರವಿಚಂದ್ರ, ಮಲ್ಲಿಕಾರ್ಜುನ್, ಮನು, ರವಿ, ಅಮರ ಭವಾನಿ, ಅರುಣ್ ಮತ್ತಿತರರು ಭಾಗವಹಿಸಿದ್ದರು.

ವಿ.ಬಿ. ಚಂದನಕುಮಾರಿಗೆ ಪಿಹೆಚ್.ಡಿ



ಮೈಸೂರು, ಫೆ. 5– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಬಯೋಟೆಕ್ನಾಲಜಿ ಮತ್ತು ಬಯೋ ಇನ್ಫರ್ಮ್ಯಾಟಿಕ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ರಮಿತ್ ರಾಮು ಅವರ ಮಾರ್ಗದರ್ಶನದಲ್ಲಿ ವಿ.ಬಿ. ಚಂದನಕುಮಾರಿ ಅವರು ಐಸೋಲೇಶನ್ ಅಂಡ್ ಕ್ಯಾರೆಕ್ಟರೈಸೇಶನ್ ಆಫ್ ಲ್ಯಾಕ್ಟಿಕ್ ಆಸಿಡ್ ಬ್ಯಾಕ್ಟೀರಿಯಾ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ರಾಮ್ಕೊ ಸಿಮೆಂಟ್ಸ್ ಲಿಮಿಟೆಡ್ ಮೈಸೂರು ಪ್ರಾಂತ್ಯ ಹಾಗೂ ಸ್ಥಳೀಯ ಮಾರಾಟಗಾರರ ಸಹಯೋಗದಲ್ಲಿ ದೇವರಾಜ, ಕೃಷ್ಣರಾಜ, ನರಸಿಂಹರಾಜ, ವಿವಿ ಪುರಂ, ಸಿದ್ಧಾರ್ಥ ಸಂಚಾರ ಪೊಲೀಸ್ ಠಾಣೆಗಳಿಗೆ ಸುಮಾರು 14 ಲಕ್ಷ ಮೌಲ್ಯದ ಒಟ್ಟು 150 ಬ್ಯಾರಿಕೇಡ್‌ಗಳನ್ನು ನೀಡಲಾಯಿತು. ಈ ವೇಳೆ ರಾಮ್ಕೊ ಸಿಮೆಂಟ್ ಮೈಸೂರು ಪ್ರಾಂತ್ಯದ ಮುಖ್ಯಸ್ಥರಾದ ಡಿಜಿಎಂ ರಾಜ್‌ಕುಮಾರ್, ಸ್ಥಳೀಯ ವ್ಯವಸ್ಥಾಪಕರಾದ ಸುಕುಮಾರ್, ಸಂತೋಷ್, ರಾಕೇಶ್ ಹಾಗೂ ಸ್ಥಳೀಯ ವ್ಯಾಪಾರಿಗಳನ್ನು ಪೊಲೀಸ್ ಅಧಿಕಾರಿಗಳು ಅಭಿನಂದಿಸಿದರು.